ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೮-೦
೬ ತಿಂಗಳಿಗೆ ,, ೩-೮-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡರೆ ೫ ಆಣೆ ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
MAY 13
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.]

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

[Editor : H. R. Purohit, M. A.

ಸಂಪುಟ ೧೮] 卐 ಹುಬ್ಬಳ್ಳಿ ಸೋಮವಾರ ತಾರೀಖು ೧೩—೫—೧೯೪೬ 卐 [ಸಂಚಿಕೆ ೬

ದಿವಂಗತ ಭೂಲಾಭಾಯಿ ದೇಸಾಯರು

ನ್ಯಾಯಪಟು, ಸಭಾಪಟು, ಅದ್ವಿತೀಯ ದೇಶಭಕ್ತ— ಅವರ ಜೀವನದ ಮುಖ್ಯ ಅಂಶಗಳು

ಕಾಂಗ್ರೆಸ್ ಕಾರ್ಯಸಮಿತಿಯ ಹಿಂದಿನ ಸಭಾಸದರೂ ಕೇಂದ್ರ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಹಿಂದಿನ ನಾಯಕರೂ ಆದ ಶ್ರೀ ಭೂಲಾಭಾಯಿ ಜೀವನಜಿ ದೇಸಾಯಿಯವರು ತಾ. ೬ (ಮೇ) ಕ್ಕೆ ಮುಂಜಾನೆ ೧—೫ ಕ್ಕೆ ತಮ್ಮ ಮುಂಬಯಿ ಮನೆಯಲ್ಲಿ ಸ್ವರ್ಗಸ್ಥರಾದರು.

ಮೃತ್ಯುಕಾಲದಲ್ಲಿ ಶ್ರೀ ದೇಸಾಯರಿಗೆ ೬೮ ವಯಸ್ಸು. ಈಗ ನಾಲ್ಕು ತಿಂಗಳು ಅಸ್ವಸ್ಥತೆಯಿಂದ ಬಳಲುತಿದ್ದರು. ಒಂದು ವಾರಪಿಂದಂತೂ ಅವರ ಪ್ರಕೃತಿ ತೀರ ಚಿಂತಾಜನಕವಾಗಿತ್ತು.

ಶ್ರೀ ದೇಸಾಯರಿಗೆ ಶ್ರೀ ಧೀರೂಭಾಯಿಯೆಂಬ ಏಕಮಾತ್ರ ಪುತ್ರರಿರುವರು. ಅವರೂ ವಕೀಲರೆ.

ಶ್ರೀ ಭೂಲಾಭಾಯಿಯರ ಮೃತ್ಯುವಿನಿಂದ ಇಡೀ ಹಿಂದುಸ್ತಾನವೇ ದುಃಖಸಾಗರದಲ್ಲಿ ಮುಳುಗಿದೆ. ಮಹಾತ್ಮಾಗಾಂಧಿ, ಸರದಾರ ಪಟೇಲ ಮೊದಲಾದ ಕಾಂಗ್ರೆಸ್ ಧುರೀಣರು ಅವರ ಬಗ್ಗೆ ದುಃಖಾಶ್ರುಗಳನ್ನು ಸುರಿಸಿದ್ದಾರೆ. ತಮ್ಮ ಜೀವನದ ಕೊನೆಗಳಿಗೆಯ ವರೆಗೆ ದೇಶದ ಅರ್ಥಾತ್ ಕಾಂಗ್ರೆಸ್ಸಿನ ಸೇವೆಯಲ್ಲಿ ಸವೆದ ಅವರಿಗೆ ಅಂತಿಮ ಗೌರವ ಸಲ್ಲಿಸಲು ಅವರ ಪಾರ್ಥಿವ ಕಳೇಬರವನ್ನು ಮುಂಬಯಿಪ್ರಾಂತಿಕ ಕಾಂಗ್ರೆಸ್ಸಿನವರು ಕಾಂಗ್ರೆಸ್ ಭವನದಲ್ಲಿ ಮೂರು ತಾಸಿನ ವರೆಗೆ ಪುಷ್ಪಹಾರಗಳಿಂದಲಂಕರಿಸಿ ಸಾರ್ವಜನಿಕ ದರ್ಶನಕ್ಕಾಗಿ ಇಟ್ಟಿದ್ದರು. ಪೇಟೆಗಳೂ ಅನೇಕ ಸಂಸ್ಥೆಗಳೂ ಅವರ ಗೌರವಾರ್ಥ ಒಂದು ದಿನ ಮುಚ್ಚಿದ್ದವು. ಅವರ ಸ್ಮಶಾನಯಾತ್ರೆ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಭೂಲಾಭಾಯಿಯವರ ಜೀವನ

ಶ್ರೀ ಭೂಲಾಭಾಯಿಯವರ ಜನ್ಮ ಸುರತ ಜಿಲ್ಹೆಯ ಬುಲ್ಸಾರದಲ್ಲಿ ಒಂದು ಬಡ ರೈತ ಕುಲದಲ್ಲಿ ೧೮೭೭ ರಲ್ಲಿ ಆಯಿತು. ಆ ದೀನ ಸ್ಥಿತಿಯಿಂದ ರಾಷ್ಟ್ರೀಯ ನಾಯಕತ್ವದ ಪದವಿಗೆ ಅವರು ಏರಿದ್ದು ಕೇವಲ ಸ್ವಸಾಮರ್ಥ್ಯದಿಂದ, ಬುದ್ಧಿಶಕ್ತಿಯಿಂದ ಬಡತನದಲ್ಲಿ ಹುಟ್ಟಿ ಬಡತನದಲ್ಲಿ [illegible] ಅವರು ವಿದ್ಯಾಭ್ಯಾಸವನ್ನು ಬಹಳ ಕಷ್ಟದಿಂದಲೇ ಸಾಗಿಸಬೇಕಾಯಿತು. ಅವರ ಕುಶಾಗ್ರಬುದ್ಧಿಯನ್ನು ಕಂಡ ಅಧ್ಯಾಪಕರ ಒತ್ತಾಸೆ, ಸಹಾಯಗಳಿಲ್ಲದಿದ್ದರೆ ಅವರು ನಮ್ಮ ದೇಶದ ಅಸಂಖ್ಯ ಅರ್ಧವಿದ್ಯರಲ್ಲಿ ಒಬ್ಬರಾಗಿ ಮರೆವೆಯ ಗರ್ಭದಲ್ಲಿ ಲೀನವಾಗಿ ಹೋಗುತ್ತಿದ್ದರೋ ಏನೋ. ೧೮೯೫ ರಲ್ಲಿ ಹಾಯಸ್ಕೂಲ ವಿದ್ಯಾಭ್ಯಾಸ ಮುಗಿಸಿ ಮುಂಬಯಿ ಎಲಫಿನ್‌ಸ್ಟನ ಕಾಲೇಜಿಗೆ ಸೇರಿದರು. ಅಲ್ಲಿ ಎಂ. ಎ. ಡಿಗ್ರಿ ಪಡೆದನಂತರ ಸರಕಾರಿ ಲಾ ಕಾಲೇಜಿನಲ್ಲಿ ಕಾಯಿದೆ ಅಭ್ಯಾಸ ಪಡೆದರು. ಕಾಲೇಜಿನಲ್ಲಿ ಕಲಿಯುತ್ತಿರುವಾಗಲೇ ವಾದಸಭೆಗಳಲ್ಲಿ ಅವರು ಅಸಾಧಾರಣ ವಕ್ತೃತ್ವ ಶಕ್ತಿಯನ್ನು ಮೆರೆಸಿದ್ದರು. ಒಂದು ದಿನ ವಕೀಲನ ಉಡುಪು ಧರಿಸಿ ವಾದಿಸುವ ಸೌಭಾಗ್ಯಕ್ಕಾಗಿ ಆಗಲೆ ಅವರ ಹೃದಯ ಒಳಗೊಳಗೇ ಹಂಬಲಿಸುತ್ತಿತ್ತು. ಆ ಹಂಬಲಕ್ಕೆ ವಿಧಿ 'ತಥಾಸ್ತು' ಎಂದಿತು. ಕಾಯಿದೆಯ ತಮ್ಮ ಅದ್ವಿತೀಯ ಪಾಂಡಿತ್ಯದಿಂದಲೇ ಅವರು ತಮ್ಮ ದೇಶಕ್ಕೆ ಕೊನೆಯ ಮಹಾ ಸೇವೆಯನ್ನು ಅರ್ಪಿಸಿದರು. ಅವರು ನಡೆಸಿದ ಕೊನೆಯ ಪ್ರಸಿದ್ಧ ಖಟ್ಲೆಯೆಂದರೆ ಸುಭಾಸ ಸೇನಾಧಿಕಾರಿಗಳನ್ನು ದಂಡಿನ ನ್ಯಾಯಾಲಯದಲ್ಲಿ ಸಮರ್ಥಿಸಿದ್ದು. ತಮ್ಮ ತೀಕ್ಷ್ಣ ಬುದ್ಧಿ ಕೌಶಲದಿಂದ ಅವರು ಆ ಮೂವರು ದೇಶಭಕ್ತರ ಮೇಲಿನ ಪ್ರಮುಖ ಆರೋಪಗಳನ್ನು ಹರಿದು ಚೂರು ಚೂರು ಮಾಡಿದ್ದರಿಂದ ಕೊನೆಯ ದಿನಗಳಲ್ಲಿ ಇಳಿಮುಖವಾಗಿದ್ದ ಅವರ ಜನಪ್ರಿಯತೆಗೆ ಪುನಃ ಒಪ್ಪ ದೊರೆತು, ದೇಶದ ಮಹಾಪುರುಷರ ಶ್ರೇಣಿಯಲ್ಲಿ ಅವರ ಸ್ಥಾನವನ್ನು ಸುರಕ್ಷಿತವಾಗಿ ಮಾಡಿತು. ಆದರೆ ಆ ಪ್ರಕರಣವನ್ನು ನಡೆಸುವಲ್ಲಿ ಅವರ ಅಶಕ್ತ ಪ್ರಕೃತಿಗಾದ ಗುರುತರ ಶ್ರಮವೇ ಅವರನ್ನು ಮರಣದ (ಮತ್ತು ಅಮೃತತ್ವದ !) ದಾರಿಯಲ್ಲಿ ಬಹು ದೂರ ಸಾಗಿತೇನೊ.

ವಕೀಲಿಯಲ್ಲಿ

ಕಾಯಿದೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದೊಡನೆ ಶ್ರೀ ಭೂಲಾಭಾಯಿಯವರು ಕೆಲದಿನ ಅಹಮದಾಬಾದ ಗುಜರಾತ ಕಾಲೇಜಿನಲ್ಲಿ ಇತಿಹಾಸ ಅರ್ಥಶಾಸ್ತ್ರಗಳ ಅಧ್ಯಾಪಕರಾಗಿದ್ದರು ಆದರೆ ಬಹಳ ಬೇಗ ಅವರ ವಕೀಲಿ ವ್ಯಸನ ಅವರನ್ನು ಪುನಃ ಆದುಮಿ ಎಳೆಯಿತು. ಮುಂಬಯಿಯಲ್ಲಿ ಬಂದು ಅವರು ವಕೀಲಿವೃತ್ತಿಯನ್ನು ಪ್ರಾರಂಭಿಸಿದ್ದು ವಾರ್ಡೆನ್ ರಸ್ತೆಯ ೮೯ ನಂಬರ ಮನೆಯ ಚಿಕ್ಕ ಬಾಡಿಗೆ ಕೋಣೆಯಲ್ಲಿ. ಅವರ ಪ್ರಸಿದ್ಧಿ ನಾಲ್ಕೂ ಸುತ್ತು ಹಬ್ಬಲು ತಡವಾಗಲಿಲ್ಲ. ಆ ಚಿಕ್ಕ ಕೋಣೆಯಿಂದಲೇ ಅವರು ಮುಂಬಯಿಯ, ಏಕೆ ಇಡಿ ಹಿಂದುಸ್ತಾನದ ಅಪ್ರತಿಮ ವಕೀಲರ ಶ್ರೇಣಿಗೆ ಏರಿದರು. ಬಾಡಿಗೆ ಕೋಣೆಯ ವಕೀಲ ಒಂದೂವರೆ ಲಕ್ಷ ರೂಪಾಯಿ ಉತ್ಪನ್ನ ಕರ ಕೊಡುವ ಮಟ್ಟಕ್ಕೆ ಮುಟ್ಟಿದ. ಆದರೂ ಆ ಚಿಕ್ಕ ಬಾಡಿಗೆ ಕೋಣೆಯಲ್ಲಿ ಅವರ ಮನಸ್ಸು ಬಹಳ ಬಾಂಧವ್ಯವನ್ನು ಕಂಡುಕೊಂಡಿತ್ತು. ವೃತ್ತಿ ಬೆಳೆದಾಗಲೂ ಅವರು ಬೇರೆ ಕಡೆ ಹೋಗಲೊಪ್ಪದೆ ಅಲ್ಲೀ ಉಳಿದರು ಮತ್ತು ಆ ಶಕ್ತಿ ಬಂದಮೇಲೆ ಅದೇ ಸ್ಥಳದಲ್ಲಿ ಸ್ವಂತದ ಅರಮನೆಯಂಥ ಮನೆಯನ್ನು ಕಟ್ಟಿಸಿದರು.

ಭೂಲಾಭಾಯಿಯವರು ವೃತ್ತಿ ಪ್ರಾರಂಭಿಸಿದಾಗ ಮುಂಬಯಿಯ ಹಿರಿ ವಕೀಲತನದ ಗುತ್ತಿಗೆಯೆಲ್ಲ ಬ್ಯಾರಿಸ್ಟರುಗಳಿಗೆ— ಮುಖ್ಯವಾಗಿ ಇಂಗ್ಲೀಷ ಜನರಿಗೆ— ಮೀಸಲಾಗಿತ್ತು. ಅವರೆಲ್ಲ ಇರುತ್ತಲೇ ಭೂಲಾಭಾಯಿಯವರು ಕೇವಲ ಬುದ್ಧಿಬಲದಿಂದ ತುತ್ತತುದಿಯ ಹಂತಕ್ಕೇರಿದರು. ಕೆಲ ವರ್ಷಗಳಲ್ಲಿ ಮುಂಬಯಿ ಹಾಯಕೋರ್ಟಿನಲ್ಲಿ ಅವರು ಒಂದಿಲ್ಲ ಒಂದು ಪಕ್ಷದಲ್ಲಿ ವಾದಿಸಲು ನೇಮಿಸಲ್ಪಡದಿದ್ದ ಮಹತ್ವದ ಪ್ರಕರಣಗಳೇ ಇದ್ದಿಲ್ಲವೆಂದರೂ ಸಲ್ಲುವದು. ವೃತ್ತಿಯ ಆರಂಭಕಾಲದಲ್ಲೇ ಮಾನ್ಯ ಆಗಾಖಾನರ ವಿರುದ್ಧ ಲಕ್ಷಾಂತರ ರೂಪಾಯಿಗಳ ಪರಿಹಾರ ಬೇಡಿ ಹೂಡಲ್ಪಟ್ಟಿದ್ದ ಪ್ರಕರಣದಲ್ಲಿ ಅವರು ಪ್ರಮುಖ ವಕೀಲರಾಗಿದ್ದರು. ಅದರಿಂದೀಚೆಗೆ ಅವರು ಲೆಕ್ಕವಿಲ್ಲದಷ್ಟು ಪ್ರಚಂಡ ಪ್ರಕರಣಗಳನ್ನು— ಸಿವ್ಹಿಲ ಮತ್ತು ಕ್ರಿಮಿನಲ್— ನಡೆಸಿದ್ದಾರೆ. ಎಲ್ಲ ಪ್ರಕರಣಗಳಲ್ಲೂ ಅವರು ಸಮಾನವಾದ ಆಸ್ಥೆ, ಸನ್ನದ್ಧತೆಗಳನ್ನು ತೋರಿಸಿದ್ದಾರೆ. ವಕೀಲಿಯಲ್ಲಿ ಅವರು ಶಬ್ದಾಡಂಬರಕ್ಕೆ ಹೋಗದೆ ತಮ್ಮ ಪಕ್ಷಕಾರರ ಪರವಾಗಿ ಅಪ್ರತಿಭಟನೀಯವಾದ ವಾದಗಳನ್ನು ಮುಂದೊಡ್ಡಿ ನ್ಯಾಯಾಧೀಶರ ಮನಸ್ಸನ್ನು ತಿರುಗಿಸುತಿದ್ದರು. ಅವರು ಕೊನೆಯ ದಿನಗಳಲ್ಲಿ ನಡೆಸಿದ ಅಝಾದ ಸೇನಾಧಿಕಾರಿಗಳ ಪ್ರಕರಣದಲ್ಲಾದರೂ ಅವರ ಇದೇ ನಿಷ್ಠೆಯನ್ನು ಕಾಣುತ್ತೇವೆ. ರಾಜಕೀಯ ಪ್ರತಿಹಿಂಸಾಬುದ್ಧಿಯಿಂದ ಬ್ರಿಟಿಶರನ್ನು ಬೇಕಾದಷ್ಟು ಹೀನಾಯ ಮಾಡಲು ಅವಕಾಶವಿದ್ದ ಪ್ರಕರಣವಿತ್ತು ಅದು ಆದರೆ ಅದೊಂದಕ್ಕೂ ಎಳಸದೆ ತಮ್ಮ ಪಕ್ಷಕಾರರನ್ನು ನಿರ್ದೋಷರೆಂದು ಸಿದ್ಧಮಾಡುವದರಲ್ಲೆ ರಾಗದ್ವೇಷರಹಿತವಾಗಿ ಅವರು ತಮ್ಮ ವಾಗ್ಧಾರೆಯನ್ನು ಹರಿಯಬಿಟ್ಟು ಗೆದ್ದರು.

ವಕೀಲವೃತ್ತಿ, ಅದರಲ್ಲಿರುವ ಸ್ವಾತಂತ್ರ್ಯ ಭೂಲಾಭಾಯಿಯವರ ಬಗ್ಗೆ ಅಸಾಧ್ಯ ಆಕರ್ಷಣೆಯುಳ್ಳವಾಗಿದ್ದವು. ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶ ಪದವಿಯನ್ನು ಅವರು ಹಲವಾರು ಬಾರಿ ನಿರಾಕರಿಸಿದ್ದರು. ಮುಂಬಯಿ ಗವ್ಹರ್ನರರ ಕಾರ್ಯಕಾರಿ ಮಂಡಲದ ಸದಸ್ಯತ್ವವನ್ನೂ ಅವರು ಅಂಗೀಕರಿಸಲಿಲ್ಲ. ೧೯೨೬ ರಲ್ಲಿ ಮಾತ್ರ ಕೆಲಕಾಲ ಅವರು ತಾತ್ಪೂರ್ತಿಕ ಅಡ್ವೊಕೇಟ ಜನರಲ್ಲರಾಗಿ ಕೆಲಸ ಮಾಡಲೊಪ್ಪಿದ್ದರು.

ರಾಜಕಾರಣದಲ್ಲಿ

ರಾಜಕಾರಣದಲ್ಲಿ ಶ್ರೀ ದೇಸಾಯರು ಸೇರಿದ್ದು ತಡವಾಗಿಯೆ. ಪ್ರಸಿದ್ಧ ವಕೀಲರಾಗಿದ್ದರೂ ವೃತ್ತಿಯ ಬಳಗದ ಹೊರಗೆ ಅವರ ಹೆಸರು ಅಷ್ಟು ಕೇಳಬಂದಿದ್ದಿಲ್ಲ. ಅದು ಅವರಿಗೆ ಒಗ್ಗುತ್ತಲೂ ಇರಲಿಲ್ಲ. ಅನ್ನಿಬೆಸೆಂಟಮ್ಮನವರ ಸ್ವರಾಜ್ಯ ಚಳವಳಿಯಲ್ಲಿ ಜಿನ್ನಾ ಸಾಹೇಬರೊಡನೆ ದುಡಿದು ಮುಂಬಯಿಯಲ್ಲಿ ಅದರ ಯಶಸ್ವಿತೆಗೆ ಬಹಳ ಮಟ್ಟಿಗೆ ಕಾರಣವಾದುದರಲ್ಲಿಯೇ ಅವರು ಮೊಟ್ಟಮೊದಲು ರಾಜಕಾರಣದಲ್ಲಿ ಪ್ರವೇಶಿಸಿದ್ದು. ಅದರ ನಂತರವೇ ಅವರಿಗೆ ಮಹಾತ್ಮಾಗಾಂಧಿ ಹಾಗು ಮುಂದೆ ವಲ್ಲಭಭಾಯಿಯವರ ಪರಿಚಯ ಲಭಿಸಿದ್ದು. ಹಾಗೆಯೆ ೧೯೨೮ ರಲ್ಲಿ ಬಾರ್ಡೋಲಿಯ ಒಕ್ಕಲಿಗರು ಸರದಾರ ಪಟೇಲರ ನೇತೃತ್ವದಲ್ಲಿ ಹೂಡಿದ ಸತ್ಯಾಗ್ರಹ ಕಾಲದಲ್ಲಿ ಬ್ರೂಮ್‌ಫೀಲ್ಡ ಸಮಿತಿಯ ಮುಂದೆ ಒಕ್ಕಲಿಗರ ಪರವಾಗಿ ಅತ್ಯುತ್ತಮ ರೀತಿಯಲ್ಲಿ ವಾದಿಸಿದರು. ಒಕ್ಕಲಿಗರ ವಿಜಯಕ್ಕೆ ಭೂಲಾಭಾಯಿಯವರ ಪ್ರಯತ್ನ ಬಹಳ ಸಹಾಯ ಮಾಡಿತು. ಗಾಂಧೀಜಿಯ ಮಾಂತ್ರಿಕ ಪ್ರಭಾವಕ್ಕಿಂತಲೂ ಬಾರ್ಡೋಲಿಯ ತನ್ನ ನೆರೆಹಳ್ಳಿಯ ಒಕ್ಕಲಿಗರ ದುಃಖಿತ ಸ್ಥಿತಿಯೇ ಈ ಶ್ರೀಮಂತ, ಮಾರ್ದವಪ್ರಿಯ, ತಂಪುಮನಸಿನ ವಕೀಲನನ್ನು ಕಾಂಗ್ರೆಸ್ಸಿನ ಅಗ್ನಿಭಕ್ಷಕ ರಾಜಕಾರಣಕ್ಕೆ ಸೆಳೆದಿರಬೇಕೆಂದು ಮಿ. ಒ. ಎಂ. ಥಾಮಸರು ಒಂದೆಡೆ ಬರೆದಿದ್ದಾರೆ.

ಅಂತೂ ೧೯೩೦ ರಲ್ಲಿ ಅವರು ಕಾಂಗ್ರೆಸ್ ಸೇರಿದರು. ೧೯೩೨ ರ ಸತ್ಯಾಗ್ರಹ ಚಳವಳಿಯಲ್ಲಿ ಅವರಿಗೆ ೧ ವರ್ಷ ಶಿಕ್ಷೆ ೧೦೦೦೦ ರೂಪಾಯಿ ದಂಡ ಆಯಿತು. ಆದರೂ ಘಟನಾಬದ್ಧ ಚಳವಳಿ, ಶಾಸನ ಸಭಾ ರಾಜಕಾರಣ ಅವರ ಸ್ವಭಾವಕ್ಕೆ ಹೆಚ್ಚು ಒಗ್ಗುತಿತ್ತು. ಮೋತಿಲಾಲ ನೆಹರು ಅವರು ತೀರಿಕೊಂಡ ನಂತರ ಅವರು ಕಾಂಗ್ರೆಸ್ಸಿನ ರಾಜಕಾರಣದ ಈ ಶಾಖೆಯಲ್ಲಿ ವಿಶೇಷ ಶ್ರಮಿಸಿದರು. ೧೯೩೪ ರಲ್ಲಿ ಮಹಾತ್ಮಾಗಾಂಧಿಯವರ ಸಮ್ಮತಿಯಿಂದ ಅವರು ಡಾ. ಅನ್ಸಾರಿಯವರ ಬಲಗೈಯಾಗಿ ಸ್ವರಾಜ್ಯ ಪಕ್ಷವನ್ನು ಪುನರ್ನಿರ್ಮಾಣಗೊಳಿಸಿದ್ದರು. ಡಾ. ಅನ್ಸಾರಿಯವರ ಮನೆಯಲ್ಲಿ ಸೇರಿದ ಸ್ವರಾಜ್ಯ ಪಕ್ಷದ ಪರಿಷತ್ತು ಶಾಸನ ಸಭೆಯ ಆಯ್ಕೆಗಳಲ್ಲಿ ಹೋರಾಡಲು ನಿರ್ಧರಿಸಿತು. ದಬ್ಬಾಳಿಕೆ ಕಾಯಿದೆಗಳನ್ನು ಉಪಸಂಹರಿಸುವಂತೆ ಸರಕಾರವನ್ನು ಒತ್ತಾಯಗೊಳಿಸುವದು ಮತ್ತು ಬ್ರಿಟಿಶ ಶ್ವೇತ ಪತ್ರದಲ್ಲಿ ಸೂಚಿತವಾದ ರಾಜಕೀಯ ಸುಧಾರಣೆಗಳನ್ನು ತಿರಸ್ಕರಿಸಿ, ಗಾಂಧಿಜಿಯವರು ದುಂಡುಮೇಜಿನ ಪರಿಷತ್ತಿನಲ್ಲಿ ಪ್ರತಿಪಾದಿಸಿದ ರಾಷ್ಟ್ರೀಯ ಬೇಡಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡುವದು ಸ್ವರಾಜ್ಯ ಪಕ್ಷದ ಧ್ಯೇಯವಾಯಿತು. ರಾಂಚಿಯಲ್ಲಿ ಸೇರಿದ ಕಾಂಗ್ರೆಸ್ ಪ್ರಾತಿನಿಧಿಕ ಸಭೆಯಲ್ಲಿ ಸ್ವರಾಜ್ಯ ಪಕ್ಷದ ವಿಚಾರಗಳಿಗೆ ಸಮ್ಮತಿ ಸಿಕ್ಕಿದ ಮೇಲೆ ಸ್ಥಾಪಿತವಾದ ೨೫ ಜನರ ಕಾಂಗ್ರೆಸ್ ಪಾರ್ಲಮೆಂಟರಿ ಬೋರ್ಡಿನ ಕಾರ್ಯದರ್ಶಿಯಾಗಿ ಭೂಲಾಭಾಯಿಯವರು ಕೆಲಸ ಮಾಡಿದರು.

೧೯೩೪ ರಲ್ಲಿ ಕೇಂದ್ರ ಶಾಸನ ಸಭೆಗೆ ಆರಿಸಲ್ಪಟ್ಟ ಭೂಲಾಭಾಯರು ಅಲ್ಲಿನ ಕಾಂಗ್ರೆಸ ಪಕ್ಷದ ಧುರೀಣರಾಗಿ ನೇಮಿಸಲ್ಪಟ್ಟರು. ಅಲ್ಲಿ ಅವರು ಮಾಡಿದ ಭಾಷಣಗಳು ಅವರ ಸಭಾಕೌಶಲವನ್ನು ಬಹು ಬೇಗನೆ ಸ್ಥಾಪಿಸಿದವು ಅಲ್ಲಿಯೂ ಶಬ್ದಾಡಂಬರಕ್ಕೆ ಅವರು ಮೋಹಿಸಲಿಲ್ಲ. ತೀಕ್ಷ್ಣ ವಿಚಾರಶಕ್ತಿ, ಕುಶಲವಾದ ಪ್ರತಿಪಾದನೆ ಹೊರತು ಮಂಕುಗೊಳಿಸುವ ಬಿಸಿ ಮಾತುಗಳನ್ನು ಅವರು ಆಡುತ್ತಿರಲಿಲ್ಲ.

೧೯೩೪ ರಲ್ಲಿಯೇ ಅವರು ಕಾಂಗ್ರೆಸ ಕಾರ್ಯಸಮಿತಿಯ ಸದಸ್ಯರಾದರು. ಅಂದಿನಿಂದ ಕಾರ್ಯಸಮಿತಿಯ ಅಂತರಂಗದ ವಿಚಾರವಿನಿಮಯದಲ್ಲಿ ಅವರ ಕಾಯಿದೆ ಪಾಂಡಿತ್ಯದ ಪ್ರಯೋಜನ ಬಹಳವಾಗಿ ಆಗಿದೆ. ಅದರ ಗೊತ್ತುವಳಿಗಳ ಒಕ್ಕಣಿಕೆಯಲ್ಲಿಯೂ ಅವರ ಕೈವಾಡವನ್ನು ಕಾಣಬಹುದಾಗಿತ್ತು.

—೧೩ನೇ ಪುಟ ನೋಡಿರಿ

‘ಬೇಂದ್ರೆಯವರ ಕಾರ್ಯ; ರೂಪ—ರಂಗ’

ಬರೆದವ—ನೆರಂಗ

ಬೇಂದ್ರೆಯವರು ಒಬ್ಬ ಕವಿ; ನಮ್ಮ ನಾಡಿನ ಗಣ್ಯಕವಿ; ಜಾನಪದ ಮಟ್ಟದಲ್ಲಿ ಮೇಲ್ಮೆ ಪಡೆದ ಕವಿ; ಎಂದು ಮುಂತಾಗಿ ವರ್ಣನೆ ಮಾಡುವಾಗ ಬೇಂದ್ರೆಯವರು ಕಾರ್ಯದ ಒಂದು ಮುಖ್ಯ ಭಾಗದ ಅರಿವು ಬರುವುದು. ಆ ಮುಖ್ಯ ಕಾರ್ಯವೆ ಕಾವ್ಯ ರಚನೆ. ಕವಿತಾ ಶಕ್ತಿಯ ಆರಾಧನೆ. ಇದು ಮುಖ್ಯವೆಂದ ಮೇಲೆ ಉಳಿದುದೆಲ್ಲವೂ ಗೌಣ ಸ್ಥಾನವನ್ನೆ ಪಡೆಯುವುದು; ಪಡೆಯಬೇಕು. ಆದರೆ ಹಾಗಾಗಿಲ್ಲ.

ಬೇಂದ್ರೆಯಲ್ಲಿ ಕವಿ ಬೇಂದ್ರೆ ಎಂಬ ಮುಖ್ಯ ಭಾಗವು ಆಕ್ರಮಿತವಾಗಿದ್ದರೂ ಮಾನವ ಬೇಂದ್ರೆ ಎಂಬ ಇನ್ನೊಂದು ಭಾಗವು—ಅಮುಖ್ಯ, ಸಾಮಾಜಿಕ ದೃಷ್ಟಿಯಿಂದ—ಇದೆ ಎಂಬುದನ್ನೂ ತಿಳಿಯಬೇಕು. ಮಾನವ ಬೇಂದ್ರೆಯು ಕವಿ ಬೇಂದ್ರೆಗೆ ತನ್ನ ಮಡಿಲಲ್ಲಿ ಆಶ್ರಯ ಕೊಟ್ಟಿದ್ದಾನೆ. ಒಬ್ಬರು ಇನ್ನೊಬ್ಬರ ಮೇಲೆ ತಮ್ಮ ಪ್ರಭಾವ ಬೀರಲೆಸಗುತ್ತಿದ್ದರೂ ಇಬ್ಬರೂ ತಮ್ಮ ತಮ್ಮ ವ್ಯಕ್ತಿತ್ವ ಕಾಯಿದುಕೊಳ್ಳಬೇಕೆಂದು ಹವಣಿಸುತ್ತಿರುತ್ತಾರೆ. ಒಬ್ಬರು ಇನ್ನೊಬ್ಬರನ್ನು ಲೆಕ್ಕಿಸುವದಿಲ್ಲ. ಇಬ್ಬರಿಗೂ ಬೇರೆಬೇರೆಯಾದ ಇತಿಹಾಸವಿದೆ; ಪರಂಪರೆಯಿದೆ. ಇಬ್ಬರ ದಾರಿ—ಒಲವುಗಳು ಬೇರೆ. ಕವಿಯು ಗಗನಮಂಡಲದಲ್ಲಿ ಹಾಯಾಗಿ ಹಾರಾಡಬಲ್ಲ; ಮಾನವನಾಗಿದ್ದಾಗ್ಯ ನೆಲಬಿಟ್ಟು ಏಳಲಾರ. ಒಂದು ಬಾನಬಯಲಲ್ಲಿ ಬೆಳೆದರೆ ಇನ್ನೊಂದು ಸಂಸಾರ ಸಾಗರದಲ್ಲಿ ತೊಳಲುವುದು. ಈ ಎರಡು ಭಿನ್ನ ಪ್ರಕೃತಿಗಳು ಕೂಡಿಯಿರಬೇಕಾದ ಪ್ರಸಂಗ ಬಂದಿರುವುದರಿಂದ ಬೇಂದ್ರೆಯವರ ಇಡೀ ಜೀವನದಲ್ಲಿ ಕಳವಳ—ತಳಮಳ ಹೆಚ್ಚಾಗಿದೆ. ಈ ತಿಕ್ಕಾಟದ ಮೂಲಕ ಭಾವನಾಲಹರಿಯು ಒಮ್ಮೊಮ್ಮೆ ಅಗಮ್ಯವಾಗುವದು; ಅರ್ಥವಿಲ್ಲದುದಾಗುವುದು; ಸಾಂಕೇತಿಕವಾಗುವುದು, ರಹಸ್ಯಮಯವಾಗುವುದು ಆಗ ಬೇಂದ್ರೆ, ಎಂದರೆ ಅದೊಂದು ಜಟಿಲವಾದ ಸಮಸ್ಯೆಯಾಗುವುದು. ರಹಸ್ಯಮಯ ವ್ಯಕ್ತಿಯಾಗುವುದು. ಸಾಮಾನ್ಯನಿಗೆ ಅದು ತಿಳಿಯಲಾರದು. ಎಂದು ಕಾವ್ಯದ ಮಟ್ಟ ಏರುವದು. ಆ ಸಾಮಾನ್ಯರಿಗೂ ಒಮ್ಮೊಮ್ಮೆ ತಿಳಿಯಲಸಾಧ್ಯವಾದ . ಸನ್ನಿವೇಶಗಳು ಬರುವುವು. ಆಗ ಆ ಪ್ರಸಂಗದ, ಮಾತಿನ ವಿಷಯದ ಬೆಲೆ ಇನ್ನೂ ಹೆಚ್ಚುವುದು.

ಇಂಥ ಸ್ಥಿತಿಯಲ್ಲಿ ಬಿಡಿಸಿ ನೋಡಿ ತುಸು ತಿಳಿದುಕೊಳ್ಳಲು ಪ್ರಯತ್ನಿಸೋಣ, ಎಂದು ಸಾಗುವುದು ಉಚಿತ. ಎರಡು ವಿಭಾಗ ಮಾಡಿದ ಮೇಲೆ ಒಂದೊಂದನ್ನು ನೋಡುವುದು ಯೋಗ್ಯ. ಕವಿ ಬೇಂದ್ರೆಯನ್ನು ಮೊದಲು ನೋಡೋಣ. ಏಕೆಂದರೆ ಬೇಂದ್ರೆ ಎಂದುಸುರಿದ ಕೂಡಲೆ ಕಣ್ಣು ಮುಂದೆ ಬರುವ ಚಿತ್ರ ಕವಿಯದೆ. ಕವಿಯ ಕಾರ್ಯ ಕವಿತೆ ಬರೆವುದು ಎಂದು ಹೇಳಬೇಕೆ ? ಕವಿತೆ ಬರೆವುದರಿಂದಲೆ ಅವನಿಗೆ ಕವಿಯೆಂಬ ಹೆಸರು ಸಾಮಾನ್ಯವಾಗಿ ಸ್ಥೂಲಾರ್ಥದಲ್ಲಿ ಬಂದಿರುವುದು. ೧೯೧೬ರಿಂದ ಇಲ್ಲಿಯ ವರೆಗೆ ಅದನ್ನು ಮಾಡುತ್ತಲಿದ್ದಾರೆ. ಮೂವತ್ತು ವರುಷ ಈ ಸಾಧನೆಯಲ್ಲಿದ್ದಾರೆ. ಮೂವತ್ತು ವರುಷಗಳಲ್ಲಿಯು ಮೊದಲ ಹದಿನೈದು ವರುಷಗಳು ಫಲ ಬಿಡುವ ಕಾಲ ಎಂದು ಹೇಳಬಹುದು. ಜನತೆಗೆ ಅವರು ಅನೇಕ ಪದ್ಯಗಳನ್ನು ನೀಡಿದ್ದಾರೆ. ಬರೆದುವೆಲ್ಲವೂ ಅಚ್ಚಾಗಿ, ‘ಗರಿ’ ‘ನಾದಲೀಲೆ,’ ‘ಉಯ್ಯಾಲೆ,’ ‘ಸಖೀಗೀತ,’ ‘ಮೇಘದೂತ,’ ಬೇಗನೆ ಬರಲಿರುವ ‘ಗಂಗಾವತರಣ,’ ಇವಲ್ಲದೆ ಕಾಮುಕಸ್ತೂರಿ, ಮೂರ್ತಿ, ‘ಕೃಷ್ಣಕುಮಾರಿ,’ ಎಂಬ ಕಿರುಹೊತ್ತಿಗೆಗಳು ಬಂದಿವೆ.

ಒಂದೊಂದು ಸಂಗ್ರಹ ಒಂದೊಂದು ವೈಶಿಷ್ಟ್ಯ ತೋರುತ್ತಿದ್ದರೂ ಇವೆಲ್ಲವೂ ಬೇಂದ್ರೆ ವೈಶಿಷ್ಟ್ಯವಾದ ಜಾನಪದ ಮಟ್ಟವನ್ನೆ ಹೆಚ್ಚಾಗಿ ತೋರುವುವು. ಹಳ್ಳಿಗರ ದನಿಯಲ್ಲಿ, ಕನ್ನಡದ ಜೀವಾಳದ ಮಾತುಗಳನ್ನು ಹೆಣೆದು ಶಬ್ದಗಳಿಂದ ಚಿತ್ರ ತೋರುವುದು ಬೇಂದ್ರೆಯವರು ಮಾಡುತ್ತಿದ್ದ—ಮಾಡಿದ ಕಾರ್ಯ. ಉದಾ:

ಒಡೆದಿಲ್ಲ ಇನ್ನೂ ಮುಕಮೀಸಿ ಒಡೆದಿಲ್ಲ
ಹಿಡಿದಿಲ್ಲ ಇನ್ನೂ ಕಣ್ಣಿಗೆ ಹೆಣ್ಣುಚ್ಚು ಹಿಡಿದಿಲ್ಲ.

ಇವೆರಡು ಸಾಲುಗಳಿಂದ ಆ ಹುಡುಗ—ಹರೆಯದಲ್ಲಿ ಹಣೆಯಿಕ್ಕುವ ಹುಡುಗನ ಭಾವ ಸಹಿತ ಚಿತ್ರ ಬರುವುದಿಲ್ಲವೆ? ಮದುವೆಗೆ ಮುಂಚೆ ಗಂಡು ಹೆಣ್ಣನ್ನು ಹಳ್ಳದ ದಂಡ್ಯಾಗ ಕಂಡಾಗ ಏಸೊಂದು ನಗಿ ಇತ್ತು; ಆದರೆ ಆದೆ ಸಂಸಾರದ ಜಳ ತಾಗಿ ಮೊಗ ಬಾಡಿತೆಂದು,

ಸುಟ್ಟುಹಪ್ಪಳದ್ಹಾಂಗ ಸೊರಗೀದಿ ಸೊಪ್ಪಾಂಗ
ಬಂತಂತ ಮುಪ್ಪ ಬ್ಯಾಗ॥

ಈ ಸಾಲುಗಳು ಎಷ್ಟು ಮಾರ್ಮಿಕವಾಗಿ ತೋರುವುವು ಬಳಕೆಯ ಮಾತುಗಳಿಂದ ಬಲಿತ ಭಾವನೆಗಳನ್ನು ಕೂಡ ಸುಲಲಿತವಾಗಿ ಮಂಡಿಸುವುದರಲ್ಲಿ ಬೇಂದ್ರೆಯವರದೆ ಮೇಲುಗೈ (ಮಾಯಾಕಿನ್ನರಿ).

ಹೇಳುತ್ತ ಹೋದಂತೆ ಹೇಳಿದ್ದೆಲ್ಲವೂ ಕಡಿಮೆ ಎನ್ನಿಸುವಷ್ಟು ಇವೆ ಬೇಂದ್ರೆಯವರು ಕೊಟ್ಟ ಶಬ್ದ ಚಿತ್ರಗಳು. ಚಿತ್ರಗಳು ಸ್ಫುಟವಾಗಿರುವುವು ಎಂಬುದಕ್ಕೆ ಇದೊಂದು ಸಾಕು.

ಕೊಕ್ಕಿನಲಿ ಕೊಕ್ಕು ರೆಕ್ಕೆಗೆ ರೆಕ್ಕೆ ನೋಟದಲಿ
ನೋಟ ಹುದುಗೊಳಿಸಿರುವ ಹಕ್ಕಿ ಎರಡು
ಎಲೆ ಚವರ ಬೀಸೆ; ಹೂಗಂಪು ಸಲೆಸೂಸೆ,
ಎಲರೂದೆ ಬೆಳಕಾಡೆ, ಹೊರಜಗವ ಮರೆದು
ಕೂಡಿರಲು; ಬೇಡ ನೋಡನೋಡಿರಲು
ಹೂಡಿದನು ಎದೆಮಾಡಿ ಹೆದೆಗೆ ಕಣೆಯ.

ಒಂದು ನೆಲಕುದುರೆ ಇನ್ನೊಂದು ಬಾನ್‌ಬಿರಿವಂತೆ ಚೀರುತಿದೆ “ ಅಗಲದಿರು ಗೆಳತಿ ಗೆಣೆಯ.”

ಬೇಡನಿದ್ದವನು ಒಳ್ಳೆಯ ಕವಿಯಾದ ಎಂದು ವಾಲ್ಮೀಕಿಯ ಕತೆಯಲ್ಲಿ ಓದಿದ್ದರೂ ಈ ಸಂನಿವೇಶವು ಆ ಮಾರ್ಪಾಟನ್ನು ತರುವ ಶಕ್ತಿಯುಳ್ಳದಿದ ಎಂದು ಮೇಲಿನ ಶಬ್ದ ಚಿತ್ರದಿಂದ ಹೇಳಬಹುದು.

ಬೇಕಾದರೆ ಇನ್ನೂ ಒಂದು ಉದಾಹರಣೆ ಕೊಡಬಹುದು.

ಬುದ್ಧಮೂರ್ತಿಯ ಮೊಗದ ನಗು ಹೇಗಿತ್ತು ? ಕೆಲವು ಸಲ ಹೇಗಿತ್ತು ಎಂದು ಹೇಳುವದಕ್ಕಿಂತ ಹೇಗಿದ್ದಿಲ್ಲ ಎಂದು ಹೇಳುವುದರಿಂದಲೂ ಹೀಗಿತ್ತು ಎಂಬ ಕಲ್ಪನೆ ಬರುವುದುಂಟು. “ಬುದ್ಧಮೂರ್ತಿಯ ಅಮೃತಸ್ಮಿತ” ಎಂಬ ಕವನ ಓದಿನೋಡಬೇಕು. ಮಾದರಿಗಾಗಿ ಕೆಲವು ಸಾಲು ಇಲ್ಲಿ ಕೊಡಬಹುದು.

“ ಉದಯಾಸ್ತ ಜನ್ಮ ಮರಣಗಳ ಚಕ್ರದ ಬಾಧೆ ಇದಕಿಲ್ಲ, ಇದು ಕುಂದ ಮೀರಿದೆ. ಗ್ರಹಣ ಹತ್ತದಿದಕೆಂದಿಗೂ; ಅಜ್ಞಾನ ಮುಗ್ಧ ಮಾಧುರ್ಯ ಮಧುವಲ್ಲ; ಹೊಸಹರೆಯ ಹುಮ್ಮಸದ ಹುಸಿಬಿಸಿ ಲುಗುದುರೆಯ ಬಾಯಬರುಗು ಬೆಳಕಲ್ಲ; ಹೊಳೆಯ ದಾಟದ ಮೇಲೆ ಹೊರಳಿ ನೋಡದ ಮಿಂಡ ಪುಂಡ ಬಗೆಯಲ್ಲ; ಮರುಳಿರುಳನು ಮಣ್ಣು ಮುದ್ದಿಡಲು ಬಹ _ ದಿಗ್ಭ್ರಾಂತ ನಕ್ಷತ್ರಗಳ ಹುಚ್ಚು ಹೊಳಪಲ್ಲ;.......

ಸಾಕು ಕಾಣುತ್ತದೆ. ಬೇಂದ್ರೆಯವರ—ಯಾವ ಕವಿತೆ ತೆಗೆದು ಓದಿದರೂ ಅದರಲ್ಲಿ ಬೇಂದ್ರೆ ಮುದ್ರಣ ಇದ್ದೆ ಇರುವುದು. ಜಾನಪದ ದನಿಯ ಮೇಳ. ಶಬ್ದ ಜೋಡಣೆಯ ಜೋರು; ಅದರಿಂದ ಸ್ಫುಟವಾದ ಚಿತ್ರ; ಬಳಕೆಯ ಮಾತು ಎಂತಹ ಭಾವನೆಯನ್ನು ಮೂಡಿಸುವದು; ಮಾತಿನಲ್ಲಿಯ ಸಾಕಷ್ಟು ಬಿಗುಹಿದ್ದಾಗ ಛಂದಸ್ಸಿನ ಕಟ್ಟೇಕೆ, ಎಂಬುದು ಪದ್ಯಗಳಲ್ಲಿ ಬರುವ ಕುಣಿತ ಓಟ, ಇವು ಕೆಲವು ಬೇಂದ್ರೆಯವರ ವೈಶಿಷ್ಟ್ಯವೆಂದು ಹೇಳಬಹುದು.

ಕೇವಲ ಕವಿತೆಗಳನ್ನಷ್ಟೆ ಬರೆದು ತಮ್ಮ ಕಾರ್ಯಕ್ಷೇತ್ರವನ್ನು ಕಾರ್ಯರಂಗವನ್ನು ಮರ್ಯಾದಿತ ಮಾಡಿಕೊಂಡಿಲ್ಲ. ಹುಚ್ಚಾಟಗಳನ್ನು ಬರೆದಿದ್ದಾರೆ. “ ತಿರುಕರ ಪಿಡುಗನ್ನು ” ನೆನೆಯಬಹುದು. ಪ್ರಬಂಧಗಳನ್ನು ಬರೆದಿದ್ದಾರೆ; ನಿರಾಭರಣ ಸುಂದರಿ, ಸಾಹಿತ್ಯಸಂಶೋಧನೆ, ವಿಚಾರಮಂಜರಿ ಈ ಮೂರು ಸಂಗ್ರಹಗಳು ಅವಕ್ಕೆ ಸಾಕ್ಷಿ. ಸಾಹಿತ್ಯದ ಪ್ರತಿಯೊಂದು ರೂಪವನ್ನು ಒಲಿಸಿಕೊಂಡು ಕೈಯಾಡಿಸಿ, ಕಳೆಕಟ್ಟಿಸಬೇಕೆಂದು ಹಂಬಲಿಸಿದರೂ ಕವಿತೆಯೆ ಅವರನ್ನು ಬಲವಾಗಿ ಜಗ್ಗಿದುದು ಬಿಗ್ಗಿದುದು. ಅದೆ ಅವರನ್ನು ಮುಂದೆ ತಂದುದು; ಹೆಸರು ಗಳಿಸಿಕೊಟ್ಟದು.

ಕವಿಯಾಗಿ ಮಾಡಿದುದನ್ನು ನೋಡಿಯಾಯಿತು. ೫೦ ವರುಷದ ಅವರ ಜೀವನದಲ್ಲಿ ಕವಿಯ ಭಾಗ ಕೇವಲ ೩೦ ವರುಷದ್ದು, ಅದರಲ್ಲಿಯೂ ಇತ್ತೀಚಿನ ೧೫ ವರುಷಗಳು. ಏನೆ ಆದರೂ ಕವಿತೆ ಬರೆವುದು ಒಂದೆ ಅವರನ್ನು ೨೪ ಗಂಟೆ ಕಾಲ ಹಿಡಿವುದಿಲ್ಲ. ಅವರು ಸದಾ ಕಾಲ ಕವಿಗಳಾಗಿರುವುದಿಲ್ಲ. ಮಾನವನಾಗಿ ಬಾಳುವೆ ಮಾಡಿಕೊಂಡಿದ್ದಾರೆ. ಮಾನವನಾಗಿ ಬೆಳೆಯುತ್ತಿದ್ದಾರೆ. ಕಾವ್ಯದ ಜ್ವರ ಬಂದು ಕವಿತೆ ಬರೆದು ಬೆಮರಿಟ್ಟತೆಂದರೆ ಮತ್ತೆ ಬೇಂದ್ರೆ ಮಾನವನೆ. ಸುತ್ತಲಿನ ಜಗದ ಅರಿವು ಬರುವುದು. ಕವಿಯಾಗಿ ಆಲೆವಾಗ ಯಾರದೂ ಹಂಗು ಇಲ್ಲ; ಹೆದರಿಕೆ ಇಲ್ಲ. ಏಕಧ್ಯಾನ ಏಕಚಿತ್ತ. ಆ ರಾಜ್ಯದಲ್ಲಿ ತಾನೆ ಅಧಿದೇವತೆ ತನಗೆ ತಿಳಿದಂತೆ— ತೋಚಿದಂತೆ, ತನ್ನ ಆಯ್ಕೆಯ ಶಬ್ದಗಳಿಂದಲೆ ಹೆಣೆವುದು. ಅದರ ಪ್ರಭಾವ ಸರಿವಾಗ ಆವೆಂತಹ ಭೀಕರ ಅಂತರವು ಕಾಣುವುದು. ತಾನೂ ಸಾಮಾನ್ಯ ಮಾನವ. ಆಸೆ-ಆಕಾಂಕ್ಷೆ ದ್ವೇಷ ಅಸೂಯೆ ಏರಾಟಗಳಿಗೆ ಬಲಿಯಾದವ. ತನ್ನನ್ನು ಮೇಲ್ಮಟ್ಟದವನೆಂದು ಯಾರೂ ಒಪ್ಪುವುದಿಲ್ಲ. ಈ ಬಗೆಯ ಅಪಮಾನ ಹೇಗೆ ಸಹಿಸುವದು. ಸದಾ ಕವಿಯಾಗಿಯೆ ಇರಬೇಕೆಂದು ಎನ್ನಿಸುವುದು. ಆದರೆ ಅದು ೨೪ ಗಂಟೆ ಕಾಲ, ೧೨ ತಿಂಗಳೂ ನಡೆವ ವಿಷಯವಲ್ಲ; ಅದಕ್ಕೆ ಅದು ಸಾಧ್ಯವಿಲ್ಲ.

ಹಾಗಾದರೆ ಬೇರೆ ಏನು ಮಾಡಬೇಕು? ಸಂಸಾರಿಗನಾದ ಮೇಲೆ ಹಣ ಗಳಿಸಬೇಕು. ಅದಕ್ಕಾಗಿ ಶಿಕ್ಷಕ ವೃತ್ತಿಯನ್ನೂ ಅವಲಂಬಿಸಿಯಾಯಿತು. ಬರೆಹವೆ ಬಾಂಧವ್ಯ ತರುವುದೆಂದು ‘ಜಯಕರ್ನಾಟಕ ’ ತೆಗೆದುಕೊಂಡಾಯಿತು. ಗೆಳೆಯರಗುಂಪು ಕಟ್ಟುವ ಪ್ರಯತ್ನ ನಡೆಯಿತು. ಕವಿಯ ಮಹಿಮೆಯನ್ನು ನೋಡಿ ಕೇಳಿ ಓದಿ ಬಂದವರು, ಮಾನವನಾದ ಬೇಂದ್ರೆಯ ದರ್ಶನ ಸಹವಾಸಗಳಿಂದ ಕವಿಯಲ್ಲಿ ಕಂಡದ್ದನ್ನು ಕಾಣಲಾಗದೆ ಮಿಡುಕಿದರು. ಕಾವ್ಯರಾಜ್ಯದಲ್ಲಿ ತಾನು ಅಧಿಪತಿಯಾದಂತೆ ಮಾನವಭೂಮಿಯಲ್ಲೆ ಮನ್ನಣೆ—ಮೇಲಿನ ಮಟ್ಟದ ಮನ್ನಣೆ—ಸಿಕ್ಕಬಾರದೇಕೆ ಎಂಬ ವಿಚಾರ ತಲೆದೋರಿದುದರಿಂದ ಗೆಳೆಯರಲ್ಲಿರಬೇಕಾದ ಸದುಭಾವವು ಅಳಿಯತೊಡಗಿತು. ಗುಂಪು ಗಾಳಿಗೆ ಹೋಯಿತು. ಗೆಳೆಯರ ನೆರವಿಲ್ಲದೆ ‘ ಜಯಕರ್ನಾಟಕ ’ ಕೈಬಿಟ್ಟಿತು. ‘ ಜೀವನ ’ವು ತಲೆಯೆತ್ತಿದ್ದರೂ ಹಳೆಯ ಚೇನೆ ಬಿಡಲಿಲ್ಲ. ಅದು ಕೈತಪ್ಪಿತು. ರಾಷ್ಟ್ರಕಾರ್ಯದ ಮೂಲಕ ಶಿಕ್ಷಕವೃತ್ತಿಯನ್ನು ಬಿಡಬೇಕಾಗಿ ಬಂತು. ಇವೆಲ್ಲ ಏರಿಳಿತಗಳೊಂದಿಗೆ ರವೀಂದ್ರರ ಆದರ್ಶ ಮಾಯವಾಗಿ ಅರವಿಂದೋದಯವಾಯಿತು. ಈಗ ಅರವಿಂದರ ಭಕ್ತರಲ್ಲಿ ಒಬ್ಬರಾಗಿದ್ದಾರೆ ಬೇಂದ್ರೆಯವರು.

ಎರಡು ಭಿನ್ನ ಪ್ರಕೃತಿಗಳು ಕೂಡಿವೆಯಾದದರಿಂದ ಎರಡು ಕಾರ್ಯರಂಗ, ಎರಡು ರೀತಿಯ ಕಾರ್ಯ. ಕವಿಯು ವಿಶ್ವಸತ್ಯವನ್ನು ಸಾರಿದರೂ ಅದು ಕವಿಯ ವ್ಯಕ್ತಿಗೆ ಅನ್ವಯಿಸುತ್ತಿಲ್ಲ, ಕಾವ್ಯಶಕ್ತಿಯು ತನ್ನ ಪ್ರಭಾವವನ್ನು ಕವಿಯ ವ್ಯಕ್ತಿಯ ಮೇಲೆ ಮಾಡಲೆಸಗುತ್ತಿದೆ. ಪರಿಣಾಮವೂ ತುಸ ಆಗುತ್ತದೆ. ಅಲ್ಲದೆ ಕವಿಯ ವ್ಯಕ್ತಿಯಲ್ಲಿಯ ಕೆಲ ಲೋಪದೋಷಗಳ ಪರಿಣಾಮವು ಕಾವ್ಯಶಕ್ತಿಯ ಮೇಲೆ ಆಗಿ ಕಾವ್ಯಕೆ ಧಕ್ಕೆ ತಗಲುವುದು.

ಬೇಂದ್ರೆಯವರ ಕಾರ್ಯರಂಗವಾವುದು ? ಕಾವ್ಯರಚನೆಯೆ ಕಾರ್ಯ, ಜೀವನವೆ ರಂಗ ಎರಡರಲ್ಲಿಯೂ ಅತೃಪ್ತಿ, ಅತೃಪ್ತಿಯೆ ಏಳ್ಗೆಯ ಮೂಲವಾಗಬಹುದು; ಅತೃಪ್ತಿಯಿಂದ ಅಸಹನೆಯೂ ಬರುವದುಂಟು. ಅಸಹನೆಯಿಂದ ಯಾವುದೂ ಒಳಿತಾಗುವುದಿಲ್ಲ. ಆದರೆ ಹಿನ್ನೆಲೆ ಹಾಗಿದ್ದರೆ ಆರೇನ ಮಾಡುವುದು? ಹಿನ್ನೆಲೆಯ ನೆಲೆ ನೋಡುವುದು ಕಾರ್ಯರಂಗ ತಿಳಿವಾಗಿನ ಕಾರ್ಯವಲ್ಲ.

ಸಂಪಾದಕೀಯ
ಟೀಕೆ-ಟಿಪ್ಪಣೆಗಳು

ಅಭಿನಂದನೆ

ಪಂಡಿತ ಜವಾಹರಲಾಲ ನೆಹರು ಅವರು ಕಾಂಗ್ರೆಸ ಅಧ್ಯಕ್ಷಪದಕ್ಕೆ ನಾಲ್ಕನೆಯ ಸಲ ಅವಿರೋಧವಾಗಿ ಆರಿಸಿಬಂದ ಸುದ್ದಿ ಕೇಳಿ ಅದಾವ ಭಾರತೀಯನಿಗೆ ಸಂತೋಷವಾಗಲಿಕ್ಕಿಲ್ಲ ಪಂಡಿತರ ದಿವ್ಯ ವ್ಯಕ್ತಿತ್ವ, ಲೋಕೋತ್ತರ ಗುಣಗಳು, ವಿಶಾಲ ಮಾನವೀಯತೆ, ಅಂತರ ರಾಷ್ಟ್ರೀಯ ದೃಷ್ಟಿ ಮೊದಲಾದ ಸದ್ಗುಣಗಳನ್ನು ಪುನಃ [illegible]ಸ್ತುತಿ ಬರೆಯುವ ಅವಶ್ಯಕತೆ ಇಲ್ಲ. ಅವು ಸರ್ವಶ್ರುತವಿರುವವು. ಅವರು ಸಹ ಬಹುಶ್ರುತರಿದ್ದಾರೆ. ಗಾಂಧೀಜಿಯ ತರುವಾಯ ಈ ಭೂಮಂಡಲದಲ್ಲಿ ಯಾರಾದರೂ ಭಾರತೀಯರ ಹೆಸರು ಕೇಳಬರುತ್ತಿದ್ದರೆ ಅದು ಪಂಡಿತಜವಾಹರಲಾಲರದೆಂದು ಧೈರ್ಯವಾಗಿ ಹೇಳಬಹುದು. ದಾಸಜನರ —ಅವರು ಹಿಂದೀಯರಿರಲಿ ಅಥವಾ ಪರದೇಶದವರಿರಲಿ— ಬಂಧಮುಕ್ತತೆಗೆ ಅವರಲ್ಲಿದ್ದ [illegible] ಸಮಸ್ತ ಮಾನವಕೋಟಿಯ ಹೃದಯವನ್ನು ಸೆಳೆದುಕೊಂಡಿರುತ್ತದೆ. ಅಂತೆಯೇ ಇಂಡೋನೇಶಿಯದ ವೀರಾಧಿವೀರ ಡಾ. ಸೋಯಕರ್ನೋರವರು ಸಂಕಟಕಾಲದಲ್ಲಿ ಅವರ ಸಹಾಯ ಅಪೇಕ್ಷಿಸಿದರು ಹಿಂದೀ ಸಂಸ್ಥಾನ ಪ್ರಜರಂತೂ ಅವರನ್ನು ತಮ್ಮವರನ್ನಾಗಿ ಮಾಡಿಕೊಂಡಿರುತ್ತಾರೆ. ಇಂಥ ಸಂಧಿಕಾಲದಲ್ಲಿ ಅವರಿಗೆ ಪುನಃ ಅಧ್ಯಕ್ಷಪದ ದೊರೆತುದು ಅತ್ಯಂತ ಸಮರ್ಪಕ ಹಾಗು ಸಕಾಲಿಕವಿದೆಯೆಂದು ಹೇಳಲಡ್ಡಿಯಿಲ್ಲ. ೧೯೨೯ ರಲ್ಲಿ ಇವರು ಮೊದಲ ಸಲ ಈ ಮಹಾ ಸಭೆಯ ಅಧ್ಯಕ್ಷರಾದಾಗ ಲಾಹೋರದಲ್ಲಿ ಪೂರ್ಣ ಸ್ವಾತಂತ್ರ್ಯ ಘೋಷಿಸಲ್ಪಟ್ಟಿತು [illegible] ಅವರ ಅಧ್ಯಕ್ಷತೆಯಲ್ಲಿಯೇ ಆ ಧ್ಯೇಯ ಪೂರ್ತಿಯಾಗುವ ಯೋಗಾಯೋಗವನ್ನು ಪರಮಾತ್ಮನು ಕೂಡಿಸಿಕೊಟ್ಟಂತೆ ಕಾಣುತ್ತದೆ. ಹಿಂದುಸ್ತಾನವು ಸ್ವತಂತ್ರವಾದ ನಂತರ ಸ್ವದೇಶ ಮತ್ತು ವಿದೇಶಗಳಲ್ಲಿ ಮಹತ್ವದ ಪಾತ್ರವಹಿಸಬೇಕಾಗಿದೆ. ಈ ಮಹತ್ಕಾರ್ಯದ ಸೂತ್ರಧಾರಿಗಳಾಗಲು ಪಂಡಿತ ಜವಾಹರಲಾಲರು ತುಂಬ ಸಮರ್ಥರೆಂದು ಹೇಳುವದವಶ್ಯವಿಲ್ಲ. ಅವರ ನೇತೃತ್ವದಲ್ಲಿ ಹಿಂದುಸ್ತಾನವು ಮುನ್ನಡೆಯುವದರಲ್ಲಿ ಯಾವ ಸಂಶಯವೂ ಇಲ್ಲ. ಕಾಂಗ್ರೆಸ ಅಧ್ಯಕ್ಷಪದಕ್ಕೆ ನಾಲ್ಕನೆಯ ಸಲ ಆರಿಸಿಬಂದು ಕಾಂಗ್ರೆಸ ಇತಿಹಾಸದಲ್ಲಿಯೇ ಅಪೂರ್ವ ಗೌರವ ಪಡೆದುದುದರಿಂದ ನಾವು ಪಂಡಿತರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಸರಕಾರದ ಅಸಹಾಯತೆ

ಈಗ ಅಧಿಕಾರದಲ್ಲಿದ್ದ ಸರಕಾರದ ಅಸಹಾಯತೆಯನ್ನು ಎಷ್ಟು ಖಂಡಿಸಿದರೂ ಸಾಲದು. ಯುದ್ಧ ನಡೆದಾಗ ಯುದ್ಧೋತ್ತರ ಪುನರ್ರಚನೆ ಬಗ್ಗೆ ಉದ್ದುದ್ದ ಮಾತುಗಳನ್ನಾಡಿದರು. ಆದರೆ ಅದೆಲ್ಲ ಪೊಳ್ಳೆಂದು ಈಗ ತಿಳಿಯಹತ್ತಿದೆ. ಸರ್ ಅರ್ದೇಶೀರ ದಲಾಲರು ಕೆಲಕಾಲದ ಹಿಂದೆ ಮುಂಬೈ ರೋಟರಿ ಕ್ಲಬ್ಬಿನಲ್ಲಿ ಭಾಷಣ ಮಾಡುವಾಗ ಯುದ್ಧಕಾಲಪಲ್ಲಾದ ಹಿಂದುಸ್ತಾನದ ಔದ್ಯೋಗಿಕ ಪ್ರಗತಿಯನ್ನು ವಿವರಿಸಿದರು. ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಆ ಪ್ರಗತಿ ಪ್ರಗತಿಯೇ ಅಲ್ಲವೆಂದು ಹೇಳಬೇಕಾಗುತ್ತದೆ. ಪ್ರಗತಿಯಂತೂ ಒತ್ತಟ್ಟಿಗಿರಲಿ, ಇದ್ದ ಜನರಿಗೆ ಅನ್ನ ವಸ್ತ್ರ ಕೊಟ್ಟು ಬದುಕಿಸಿದರೆ ಸಾಕು. ಅನ್ನದ ಹಾಹಾಕಾರವಂತೂ ಜನರಿಗೆ ಗೊತ್ತಿದೆ. ಈಗ ಬ[illegible] ಬರಗಾಲವೂ ತಲೆದೋರಹತ್ತಿದೆ. ಯುದ್ಧಕಾಲದಲ್ಲಿ ಅರಿವೆಯ ತುಟಾಗ್ರತೆಯನ್ನು ಹೇಗಾದರೂ ಸಹಿಸಿಕೊಂಡದ್ದಾಯಿತು. ಯುದ್ಧ ಮುಗಿದಮೇಲೂ ಮೂಗ ಕುರಿಗಳಂತೆ ಬಂದುದನ್ನು ಅನುಭೋಗಿಸುವದು ಸಾಧ್ಯವಿಲ್ಲ. ಜವಳಿ ಉದ್ಯೋಗ ಬೆಳೆದಿದ್ದರೂ ಜವಳಿ ಉತ್ಪಾದನೆ ಇಳಿದಿದೆ. ಯುದ್ಧ ಮೊದಲು ಪ್ರತಿಯೊಬ್ಬರಿಗೆ ಸರಾಗ ೧೮ ಗಜ ಅರಿವೆ ಲಭ್ಯವಿದ್ದರೆ ಈಗ ಅದು ೧೨ ಗಜಕ್ಕೆ ಇಳಿದಿರುವದು. ಇನ್ನು ಮೂರು ವರ್ಷ ಯಂತ್ರ ಸಾಮುಗ್ರಿಗಳು ದೊರೆಯುವ ಸಂಭವವಿಲ್ಲದ್ದರಿಂದ ಉತ್ಪಾದನೆ ಬೆಳೆಯುವದು ಸಾಧ್ಯವಿಲ್ಲ. ಕಾರಣ ಸರಕಾರದವರು ದಿಙ್ಮೂಢರಾಗಿದ್ದಾರೆ. ಯಂತ್ರಗಳು ಸರಕಾರವನ್ನು ನಡುನೀರಿನಲ್ಲಿ ಕೈಬಿಟ್ಟಮೇಲೆ ರಾಟೆಯಂಥ ಸರಳ ಯಂತ್ರದ ಪ್ರಯೋಗವನ್ನಾದರೂ ಏಕೆ ಮಾಡಬಾರದು ?

ಆಹಾರ ಪರಿಸ್ಥಿತಿ

ಹಿಂದುಸ್ತಾನದ ಆಹಾರ ಪರಿಸ್ಥಿತಿ ದಿನದಿನಕ್ಕೆ ಕೆಡುತ್ತ ನಡೆದಿದೆ. ಭಾರತಕ್ಕೆ ೫ ಲಕ್ಷ ಟನ್ ಆಹಾರ ಧಾನ್ಯ ಬೇಕೆಂದು ಯುಕ್ತ ಆಹಾರ ಮಂಡಳಕ್ಕೆ ತಿಳಿಸಿದ್ದರೂ ಅದು ಕೇವಲ ೧೨೦ ಸಾವಿರ ಟನ್ನನ್ನು ಮಾತ್ರ ಮಂಜೂರ ಮಾಡಿದೆ. ಇದು ಹಿಂದುಸ್ತಾನಕ್ಕೆ ಬಹಳ ಕಡಿಮೆ ಬೀಳುವದರಿಂದ ಹಿಂದುಸ್ತಾನ ಸರಕಾರದವರು ಇದನ್ನು ಸ್ವೀಕರಿಸಲು ನಿರಾಕರಿಸಿರುವರು. ಬೇರೆ ಬೇರೆ ರಾಷ್ಟ್ರಗಳಿಂದ ಬಂದ ಬೇಡಿಕೆಗಳು ೩೨ ಲಕ್ಷ ಟನ್ನಿಗೆ ಮೇಲ್ಪಟ್ಟಿದ್ದು ಯುಕ್ತ ಆಹಾರ ಮಂಡಳದ ಹತ್ತಿರ ಕೇವಲ ೨೪ ಲಕ್ಷ ಟನ್ ಧಾನ್ಯ ಇವೆಯಂತೆ. ಇದರಿಂದ ಆಯಾ ರಾಷ್ಟ್ರಗಳ ಬೇಡಿಕೆಯಲ್ಲಿ ಪ್ರಮಾಣಕ್ಕನುಸಾರವಾಗಿ ಕಡಿತ ಹಾಕಿದೆಂದೂ ಅದರಲ್ಲಿಯೂ ಹಿಂದುಸ್ತಾನಕ್ಕೆ ಹೆಚ್ಚಿಗೆ ಕೊಡಲಾಗಿದೆಯೆಂದೂ ವಾದಿಸಲಾಗುತ್ತದೆ. ಆದರೆ ಬೇಡಿದಷ್ಟು ಆಹಾರ ಪದಾರ್ಥ ಹಿಂದುಸ್ತಾನಕ್ಕೆ ಕೊಡಲು ಯುಕ್ತ ಆಹಾರ ಮಂಡಳಕ್ಕೆ ಸಾಧ್ಯವಾಗದ್ದರಿಂದ ಬ್ರಿಟಿಶ್ ಮುಖ್ಯ ಮಂತ್ರಿ ಅ್ಯಟ್ಲಿಯವರು ಕಾಮನ್ಸದಲ್ಲಿ ಕಳವಳ ವ್ಯಕ್ತ ಮಾಡಿದರು. ಆದರೆ ಬರಿ ಕಳವಳ ವ್ಯಕ್ತ ಮಾಡುವದರಿಂದ ಹಿಂದುಸ್ತಾನದ ಹಸಿದ ಜನರಿಗೆ ಅನ್ನ ನೀಡಿದಂತಾಗಲಿಲ್ಲ. ಹೊರಗಿನಿಂದ ಆಹಾರ ಪದಾರ್ಥಗಳು ಬಾರದಿದ್ದರೆ ಹಿಂದುಸ್ತಾನದಲ್ಲಿ ಉಪವಾಸ ಮಾರಿಗೆ ಲಕ್ಷಗಟ್ಟಲೆ ಜನ ಬಲಿಬೀಳುವ ಪ್ರಸಂಗ ಬರುವದು. ಮೊದಲಿನ ಆರು ತಿಂಗಳುಗಳಲ್ಲಿ ೧ ಲಕ್ಷ ಟನ್ ಆಹಾರ ಪದಾರ್ಥಗಳನ್ನು ಕೊಡಲು ಅಮೇರಿಕೆ ಒಪ್ಪಿದ್ದರೂ ಒಂದು ಔಂಸು ಕೂಡ ಕೊಡದ್ದರಿಂದ ಆಹಾರ ಸದಸ್ಯರಾದ ನಾನಾವಟಿಯವರು ಆ ಸರಕಾರದ ಧೋರಣ ತೀವ್ರವಾಗಿ ನಿಷೇಧಿಸಿದ್ದಾರೆ. ಹೊರಗಿನಿಂದ ಆಹಾರ ಪದಾರ್ಥಗಳು ಕಡಿಮೆ ಪ್ರಮಾಣದಲ್ಲಿ ಬರುವವೆಂದು ಗೊತ್ತಾದ್ದರಿಂದ ಹಿಂದುಸ್ತಾನದ ಪೇಟೆಯ ಮೇಲೆ ದುಷ್ಪರಿಣಾಮಗಳಾಗುವ ಸಂಭವವಿದೆ. ಧಾರಣೆಗಳನ್ನು ಮಿತಿಮೀರಿ ಏರಿಸುವ ಸಂಭವವೂ ಉಂಟು. ಸರಕಾರದವರು ಧಾರಣೆ ನಿಯಂತ್ರಿಸಿದ್ದಾದರೆ ಆಹಾರ ಪದಾರ್ಥಗಳು ಕಳ್ಳಪೇಟೆಗೆ ಹೋಗುವದು ಉಂಟು. ಹೀಗಾದಲ್ಲಿ ಪರಿಸ್ಥಿತಿ ಮತ್ತಷ್ಟು ಭೀಕರವಾಗುವದು. ಜಪಾನ ಜರ್ಮನ್ ಬೇಡಿಕೆಗಳನ್ನು ಅಮೇರಿಕೆಯ ಸರಕಾರವು ಸಂಪೂರ್ಣವಾಗಿ ಬೆಂಬಲಿಸಿದ್ದು ಹಿಂದುಸ್ತಾನಕ್ಕೆ ಮಾತ್ರ ಈ ಕಡಿತವೇಕೊ ತಿಳಿಯದಾಗಿದೆ. ಜರ್ಮನ್ ಜಪಾನಗಳಲ್ಲಿ ಮಾಂಸಾಹಾರಿಗಳಿರುವದರಿಂದ ಅಲ್ಲಿ ಆಹಾರ ಪದಾರ್ಥ ಕಡಿಮೆ ಹೋದರೆ ನಡೆಯಬಹುದು. ಆದರೆ ಹಿಂದೀಯರು ಹೆಚ್ಚಾಗಿ ಧಾನ್ಯದವಸಗಳನ್ನೇ ಅವಲಂಬಿಸಿರುವುದರಿಂದ ಇಲ್ಲಿಗೆ ಕಳಿಸುವ ಧಾನ್ಯಗಳಲ್ಲಿ ಕಡಿತವಾಗಕೂಡದು. ಬ್ರಿಟಿಶ ಸರಕಾರದವರು ಹೆಚ್ಚು ಒತ್ತಾಯ ಮಾಡಿ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುವದತ್ಯವಶ್ಯವಾಗಿದೆ. ಹಿಂದುಸ್ತಾನದಲ್ಲಿಯ ವಾಹನ ಸೌಕರ್ಯಗಳನ್ನು ನೋಡಿದರೆ ಒಮ್ಮೆಲೆ ಎಲ್ಲ ಆಹಾರ ಪದಾರ್ಥ ಕಳಿಸಿದರೆ ವ್ಯವಸ್ಥಿತವಾಗಲಾರದು. ಅಷ್ಟಷ್ಟೇ ಆಹಾರ ಪದಾರ್ಥಗಳನ್ನು ಕಳಿಸುತ್ತ ಹೋಗಬೇಕು. ಇಲ್ಲಿನ ಸರಕಾರದವರೂ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳಸುವದನ್ನು ಜೋರಿನಿಂದ ಸಾಗಿಸಬೇಕು. ಜನರಾದರೂ ಒಳ್ಳೇ ಮಿತವ್ಯಯದಿಂದ ಆಹಾರ ಪದಾರ್ಥಗಳ ಉಪಯೋಗ ಮಾಡಬೇಕು. ಹೀಗೆ ಎಲ್ಲರೂ ವರ್ತಿಸಿ ಲಕ್ಷಾವಧಿ ಜನರ ಪ್ರಾಣವುಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಪೋಲೀಸ ಅಧಿಕಾರಿಗಳಿಗೆ ಎಚ್ಚರಿಕೆ

ಸಾರ್ವಜನಿಕರೊಡನೆ ಸಭ್ಯತೆಯಿಂದ ನಡೆದುಕೊಳ್ಳಬೇಕೆಂದು ಮುಂಬಯಿ ಪ್ರಾಂತದ ಪೋಲಿಸ ಅಧಿಕಾರಿಗಳಿಗೆ ಮತ್ತು ಪೋಲೀಸರಿಗೆ ಸರಕಾರದವರು ಸೂಚನೆಗಳನ್ನು ಕಳಿಸಿರುತ್ತಾರೆ. ಪ್ರತಿಯೊಬ್ಬ ಪೋಲೀಸ ಅಧಿಕಾರಿಯು ತಾನು ಜನತೆಯ ಸೇವಕನು ಮತ್ತು ರಕ್ಷಕನು ಎಂದು ಭಾವಿಸಿ ಅವರನ್ನು ಯೋಗ್ಯ ರೀತಿಯಿಂದ ನಡೆಸಿಕೊಳ್ಳಬೇಕೆಂದು ತಿಳಿಸಿದ್ದಾರೆ. ಸಹಾಯ ಸಹಕಾರಗಳನ್ನು ಬೇಡಿದಾಗೆಲ್ಲ ಸಾರ್ವಜನಿಕರಿಗೆ ಅವು ದೊರೆಯುವಂತೆ ಅದಿಕಾರಿಗಳು ನೋಡಿಕೊಳ್ಳತಕ್ಕದ್ದೆಂದೂ ವಿಧಿಸಿದ್ದಾರೆ. ಪರಕೀಯ ಸರಕಾರವಿದ್ದಾಗ ಜನತೆಯ ಹಕ್ಕುಬಾಧ್ಯತೆಗಳನ್ನು ಮತ್ತು ಸ್ವಾತಂತ್ರ್ಯ ಚಟುವಟಿಕೆಗಳನ್ನು ಹತ್ತಿಕ್ಕುವುದಕ್ಕಾಗಿಯೆ ಈ ಪೋಲೀಸ ಪಡೆಯ ಉಪಯೋಗ ಹೆಚ್ಚಾಗಿ ಮಾಡಿದ್ದರಿಂದ ಪೋಲೀಸ ಅಧಿಕಾರಿಗಳ ಮನಃಪ್ರವೃತ್ತಿ ಆ ರೀತಿಯದೆ ಆಗಿದೆ. ಇದನ್ನು ಹೋಗಲಾಡಿಸುವುದು ಅತ್ಯವಶ್ಯವಾಗಿದೆ. ಮುಂಬಯಿ ಸರಕಾರದವರು ತಮ್ಮ ಪ್ರಕಟನೆಯಲ್ಲಿ ಹೇಳಿದಂತೆ ಅಧಿಕಾರಿಗಳು ಜನತೆಯ ಸೇವಕರು ಮತ್ತು ರಕ್ಷಕರು ಎಂದು ತಿಳಿದುಕೊಂಡು ನಡೆದದ್ದಾದರೆ ಅವರಿಂದ ಜನತೆಯ ಹಿತ ಬಹಳಮಟ್ಟಿಗೆ ಆಗುವದು ಮತ್ತು ಅವರ ಬಗ್ಗೆ ಜನತೆಯಲ್ಲಿ ಈಗಿದ್ದ ಅನಾದರ, ಒಂದುಬಗೆಯ ತ್ವೇಷ ಮುಂತಾದವುಗಳೆಲ್ಲ ಮಾಯವಾಗಿ ಪರಸ್ಪರ ಸ್ನೇಹ ಸೌಹಾರ್ದದಿಂದ ಕಾರ್ಯ ಸಾಗಲನುವಾಗುವುದು. ಪೋಲೀಸ ಅಧಿಕಾರಿಗಳು ತಮ್ಮ ವರ್ತನದಲ್ಲಿ ಅವಶ್ಯಕ ಬದಲಾವಣೆ ಮಾಡಿಕೊಳ್ಳಬೇಕೆಂದೂ, ಜನರಾದರೂ ಪೋಲೀಸರೆಂದರೆ ಮೂರುಮೊಳ ದೂರ ಹಾರದೆ ಅವರ ಸೇವೆ ಸಹಕಾರವನ್ನು ಸ್ವೀಕರಿಸಲು ಸಿದ್ಧರಾಗಬೇಕೆಂದೂ ಸೂಚಿಸದಿರಲಾರೆವು.

ಪ್ರಾಥಮಿಕ ಶಿಕ್ಷಣ

ಮುಂಬಯಿ ಸರಕಾರದವರು ಪ್ರಾಥಮಿಕ ಶಿಕ್ಷಣದ ಆಡಳಿತವನ್ನು ಮತ್ತೆ ತಮ್ಮ ಕೈಯಲ್ಲಿ ತೆಗೆದುಕೊಳ್ಳುವರೆಂಬ ಸುದ್ದಿ ಹಬ್ಬಿದ್ದು ಇದರಿಂದ ಕೆಲವು ವಿಶಿಷ್ಟ ಹಿತಸಂಬಂಧಗಳನ್ನು ಬಿಟ್ಟು ಉಳಿದವರಿಗೆಲ್ಲ ಸಂತೋಷವಾಗಿದೆ. ಪ್ರಾಥಮಿಕ ಶಿಕ್ಷಣದಂಥ ಮಹತ್ವದ ವಿಷಯವು ಯಾವುದೊಂದು ಪಕ್ಷಪಂಗಡಗಳ ಇಲ್ಲವೆ ಜಾತೀಯ ತಿಕ್ಕಾಟಕ್ಕೊಳಗಾಗದೆ ಅಡೆತಡೆಗಳಿಲ್ಲದೆ ಸಾಗಬೇಕು ದೇಶದಲ್ಲಿಯ ಎಲ್ಲ ಸ್ತ್ರೀ ಪುರುಷರಿಗೆ ಪ್ರಾಥಮಿಕ ಶಿಕ್ಷಣವು ಸಿಕ್ಕಬೇಕು. ಒತ್ತಾಯದ ಪುಕ್ಕಟೆ ಶಿಕ್ಷಣವು ದೊರೆಯಬೇಕು ಇದೆಲ್ಲವನ್ನು ವಿಚಾರ ಮಾಡಿದರೆ ಅದು ಸದ್ಯದಂತೆ ಸ್ಥಾನಿಕ ಸಂಸ್ಥೆಗಳ ವಶದಲ್ಲಿ ಉಳಿಯುವುದು ಹಿತಕರವಲ್ಲೆಂದು ಹೇಳಬಹುದಾಗಿದೆ. ೧೯೨೫ ನೆಯ ಇಸ್ವಿಯಿಂದ ಈ ಪ್ರಾಥಮಿಕ ಶಿಕ್ಷಣದ ಸೂತ್ರಗಳು ಸ್ಥಾನಿಕ ಸಂಸ್ಥೆಗಳ ಕೈಯಲ್ಲಿವೆ. ಈ ಅವಧಿಯಲ್ಲಿನ ವರದಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಶಿಕ್ಷಣ ಪ್ರಗತಿ ಯಾವ ಮಟ್ಟದಲ್ಲಿ ಆಗಬೇಕಾಗಿದೆಯೋ ಆ ಮಟ್ಟದಲ್ಲಿ ಆಗಿಲ್ಲೆಂದು ವಿಷಾದಪೂರ್ವಕ ಒಪ್ಪಬೇಕಾಗುತ್ತದೆ. ಈ ಪರಿಸ್ಥಿತಿಗೆ ಸ್ಥಾನಿಕ ಸಂಸ್ಥೆಗಳಲ್ಲಿಯ ಪಕ್ಷಪಂಗಡಗಳ ಜಾತೀಯತೆಯ ತಿಕ್ಕಾಟವೇ ಕಾರಣವೆಂದು ಹೇಳಬೇಕಾಗುವುದು. ಶಿಕ್ಷಕರ ವರ್ಗಾವರ್ಗಿ, ನೇಮಕ, ಬಡತಿ ಮುಂತಾದವುಗಳಲ್ಲಿ ಶಿಕ್ಷಣ ಪ್ರಗತಿಗೆ ವಿಘಾಯಕವಾದ ಧೋರಣವನ್ನು ಆಯಾ ಸ್ಥಾನಿಕ ಸಂಸ್ಥೆಗಳು ವಹಿಸದಿದ್ದುದರಿಂದ ಶಿಕ್ಷಕರಲ್ಲಿ ಅಸಂತೋಷವುಂಟಾಗಿ ಶಿಕ್ಷಣ ಪ್ರಗತಿಯಾಗಲಿಲ್ಲ. ಶಿಕ್ಷಕ ಶಿಕ್ಷಕಿಯರಾದರೂ ಈ ಸ್ಥಾನಿಕ ಸಂಸ್ಥೆಗಳಲ್ಲಿಯ ಆಯಾ ಪಕ್ಷಪಂಗಡಗಳ ಬೆನ್ನುಹತ್ತಿ ಶಿಕ್ಷಣ ಕಾರ್ಯವನ್ನೆ ಅಲಕ್ಷಿಸಿದರು. ಇತ್ತೀಚಿನ ವರದಿಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವದು. ಈ ಪರಿಸ್ಥಿತಿಯಲ್ಲಿ ಸರಕಾರದವರೆ ಪ್ರಾಥಮಿಕ ಶಿಕ್ಷಣ ಸೂತ್ರಗಳನ್ನು ಕೈಕೊಳ್ಳುವದು ಅತ್ಯವಶ್ಯವಾಗಿದೆಂದು ಹೇಳಬಹುದು. ಸದ್ಯಕ್ಕಂತೂ ಲೋಕಪ್ರತಿನಿಧಿಗಳೆ ಅಧಿಕಾರಸೂತ್ರಗಳನ್ನು ವಹಿಸಿರುವದು ಪ್ರಜಾಪ್ರಭುತ್ವ ಸರಕಾರದ ಕೈಯಲ್ಲಿ ಪ್ರಾಥಮಿಕ ಶಿಕ್ಷಣವನ್ನೆ ಒಪ್ಪಿಸುವುದು ಯಾವ ರೀತಿಯಿಂದಲೂ ಪ್ರತಿಗಾಮಿಯಾಗಲಾರದು. ಆದುದರಿಂದ ಸ್ಥಾನಿಕ ಸಂಸ್ಥೆಗಳಿಗೊಪ್ಪಿಸಲ್ಪಟ್ಟ ಈ ವಿಷಯವನ್ನು ಮತ್ತೆ ಸರಕಾರದ ವಶಕ್ಕೊಪ್ಪಿಸುವದು ಪ್ರತಿಗಾಮಿಯೆಂದು ಯಾರೂ ಮೂಗುಮುರಿಯುವ ಕಾರಣವಿಲ್ಲ ಮತ್ತು ವಿರೋಧಿಸುವದೂ ಸಮಂಜಸವಾಗಲಾರದು. ಸರಕಾರದವರು ಬೇಗನೆ ಪ್ರಾಥಮಿಕ ಶಿಕ್ಷಣ ಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅದರಲ್ಲಿ ಸಂಪೂರ್ಣ ಬದಲಾವಣೆ ಮಾಡಿ ಶಿಕ್ಷಣ ಮಟ್ಟ ಏರುವಂತೆ ನೋಡಿಕೊಳ್ಳಬೇಕೆಂದು ಸೂಚಿಸದಿರಲಾರೆವು.

ರೇಲ್ವೆ ಸಂಪು

ತಮ್ಮ ಬೇಡಿಕೆಗಳನ್ನು ಸರಕಾರದವರು ಮನ್ನಿಸದಿದ್ದರೆ ಜೂನ ೧ನೇ ತಾರೀಕಿಗೆ ನೋಟೀಸ ಕೊಟ್ಟು ೨೭ನೇ ತಾರೀಕಿನಿಂದ ಸಂಪು ಪ್ರಾರಂಭಿಸಬೇಕೆಂದು ರೇಲ್ವೆ ಕೆಲಸಗಾರರ ಮಹಾಮಂಡಳದವರು ಮುಂಬಯಿಯಲ್ಲಿಯ ತಮ್ಮ ಅಧಿವೇಶನದಲ್ಲಿ ನಿರ್ಣಯಿಸಿರುವರು. ಇದನ್ನು ಕೇಳಿ ಇಡೀ ಭಾರತನೆ ವಿವಂಚನೆಗೊಳಗಾಗಿರುವುದೆಂದು ಬೇರೆ ಹೇಳಬೇಕಿಲ್ಲ. ಯಾರನ್ನೂ ಕೆಲಸದಿಂದ ದೂರ ಮಾಡಬಾರದು. ಸಂಬಳದ ಪ್ರಮಾಣದ ಪುನಃ ಪರಿಶೀಲನೆಯಾಗಬೇಕು, ರಾವ ಸಮಿತಿಯ ಸೂಚನೆಗಳಂತೆ ಭತ್ತೆ ಕೊಡಬೇಕು, ಮೂರು ತಿಂಗಳ ಬೋನಸ್ಸು ಕೊಡಬೇಕು, ಮೊದಲಾದವುಗಳು ಮುಖ್ಯ ಬೇಡಿಕೆಗಳಾಗಿವೆ. ಸರಕಾರದವರು ಯುದ್ಧದ ನೆವ ಮುಂದೆ ಮಾಡಿ ಅತಿಪ್ರಸರಣವನ್ನು ವಿಪರೀತ ಮಾಡಿರುವುದರಿಂದ ಹಿಂದೀಯರ ಜೀವನಮಟ್ಟದ ಹದವೆ ಕೆಟ್ಟುಹೋಗಿದೆ. ಯುದ್ಧ ಮುಗಿದು ಒಂದು ವರ್ಷವಾಗಿದ್ದರೂ ಯುದ್ಧ ಪರಿಸ್ಥಿತಿಯಲ್ಲಿಯ ಧಾರಣೆ ಮೊದಲಾದವುಗಳೇನು ಕಡಮೆಯಾಗಿಲ್ಲ ಕೆಲ ಸಂದರ್ಭಗಳಲ್ಲಿ ಮತ್ತಷ್ಟು ಹೆಚ್ಚಹತ್ತಿವೆ. ಈ ಪರಿಸ್ಥಿತಿಯಲ್ಲಿ ಕೆಲಸಗಾರರು ಹೆಚ್ಚಿನ ಸಂಬಳ ಬೇಡುವುದು ಸಮಂಜಸವೆನಿಸಬಹುದು.

ಅದಲ್ಲದೆ ಇದೀಗ ಸಂಪಿನ ಗಾಳಿಯೆ ಬೀಸಿರುವುದರಿಂದ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಪೂರಯಿಸಿಕೊಳ್ಳುವುದಕ್ಕಾಗಿ ಸಂಪಿನಂಥ ಕೊನೆಯ ಅಸ್ತ್ರವನ್ನೂ ಹಿರಿಯಲಣಿಯಾಗುತಿರುವರು. ಸದ್ಯದಂಥ ಆಹಾರಾಭಾವದ ಪರಿಸ್ಥಿತಿಯಲ್ಲಿ ರೇಲ್ವೆಗಳು ಸಂಪಿನ ಮೂಲಕ ಮುಚ್ಚಲ್ಪಟ್ಟರೆ ಜನ ಅದೆಷ್ಟು ಕಂಗಾಲ ಸ್ಥಿತಿಗೆ ಮುಟ್ಟಬಹುದೆಂಬದನ್ನು ಊಹಿಸಿದರೆ ಮೈ ಜುಮ್ಮೆನ್ನದಿರಲಾರದು. ಆದರೆ ಸಂಪಿನ ಮೂಲಕ ಜನರನ್ನು ಉಪವಾಸ ಸಾಯಗೊಡುವುದಿಲ್ಲ ಎಂದು ರೇಲ್ವೆ ಮಹಾಮಂಡಲಳದ ಶ್ರೀ ಖೇಡಗೀಕರರು ಅಶ್ವಾಸನ ಕೊಟ್ಟಿರುವರು. ರೇಲ್ವೆ ಕೆಲಸಗಾರರ ಬೇಡಿಕೆಗಳ ಬಗೆಗೆ ಸಹಾನುಭೂತಿಯಿದ್ದರೂ ಸದ್ಯದ ಪ್ರಸಂಗದಲ್ಲಿ ಅವರು ಸಂಪು ಹೂಡಬಾರದೆಂದು ರಾಜಕೀಯ ಧುರೀಣರು ಅಭಿಪ್ರಾಯ ಪಡುತಿರುವರು. ಕೂಲಿಕಾರ ಮುಖಂಡರೂ ಈ ಬಗೆಯ ಅಭಿಪ್ರಾಯ ಪಟ್ಟಿರುವರು- ರೇಲ್ವೆ ಕೆಲಸಗಾರರು ತಾವು ನಾಗರಿಕರೆಂಬದನ್ನು ಮರೆಯಬಾರದೆಂದು ಬಿನ್ನವಿಸಿಕೊಳ್ಳಲಾಗಿದೆ. ಸಂಪು ಹೂಡುವದರಿಂದ ದೇಶದಲ್ಲಿ ಉದ್ಭವಿಸಬಹುದಾದ ಗಂಡಾಂತರವನ್ನೂ ಕೆಲಸಗಾರರು ಅಲಕ್ಷಿಸಲಾಗದು. ಸರಕಾರದವರಾದರೂ ಇಂಥ ನಿರ್ಣಯದಗೂಡೆ ಚಿನ್ನಾಟವಾಡದೆ ಸಮಂಜಸ ಧೋರಣ ವಹಿಸಿ ಸಮಸ್ಯೆಯನ್ನು ಬಿಡಿಸಬೇಕು ಕೆಲಸಗಾರರನ್ನು ದೇಶ ಪ್ರಮುಖರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಶಕ್ಯವಿದ್ದಮಟ್ಟಿಗೆ ಅವರ ಬೇಡಿಕೆಗಳನ್ನು ಮನ್ನಿಸಿ ಸಂಪು ಸುರುವಾಗದಂತೆ ನೋಡಿಕೊಳ್ಳಬೇಕು. ಸಂಪು ತಪ್ಪಿಸುವ ಹೊಣೆ ಯಾರೊಬ್ಬರ ಮೇಲೆಯೆ ಇರದೆ ಕೆಲಸಗಾರರು ಸರಕಾರದವರು ಮತ್ತು ಪ್ರತಿಷ್ಠಿತ ಮುಖಂಡರ ಮೇಲಿದೆಂದು ಬೇರೆ ಹೇಳಬೇಕಿಲ್ಲ. ಅವರೆಲ್ಲರ ಪ್ರಯತ್ನದಿಂದ ಸಂಪು ಸುರುವಾಗದಿರಲಿ.

ಕೇಂದ್ರದಲ್ಲಿ ಒಡನೆ ನಡುಗಾಲ ಸರಕಾರ ಸ್ಥಾಪಿಸುವ ನಿರ್ಧಾರ—ಕಾರ್ಯಕಾರಿ ಮಂಡಲದ ರಾಜೀನಾಮೆ- ಶಾಶ್ವತ

ರಾಜ್ಯಘಟನೆಯ ಬಗ್ಗೆ ಇನ್ನೂ ಕಾಂಗ್ರೆಸ—ಲೀಗಗಳಲ್ಲಿ ಒಮ್ಮತವಿಲ್ಲ ?

ಮೊದಲೇ ನಿರ್ಣಯಿಸಿದಂತೆ ಸಿಮಲೆಯಲ್ಲಿ ತ್ರಿಪಕ್ಷಗಳ ಸಭೆ ತಾ. ೫ ಆದಿತ್ಯವಾರ ಮುಂಜಾನೆ ೧೦ ಗಂಟೆಗೆ ಪ್ರಾರಂಭವಾಯಿತು. ಕಾಂಗ್ರೆಸ್ ಪರವಾಗಿ ಮೌ ಅಝಾದ, ಖಾನ ಅಬ್ದುಲ ಗಫಾರಖಾನ, ಪಂ. ಜವಾಹರಲಾಲ ನೆಹರು, ಹಾಗು ಸರದಾರ ಪಟೇಲ ಮತ್ತು ಲೀಗ ಪರವಾಗಿ ಮಿ. ಎಂ. ಎ ಜಿನ್ನಾ, ನವಾಬಜಾದಾ ಲಿಯಾಕತ ಅಲ್ಲಿ, ನವಾಬ ಮಹಮ್ಮದ ಇಸ್ಮಾಯಿಲ ಮತ್ತು ಅಬ್ದುಲ ರಾಬ ನಿಷ್ತಾರ ಇವರು ಸಭೆಯಲ್ಲಿ ಭಾಗವಹಿಸಿದ್ದರು

ಸಭೆ ಆದಿತ್ಯವಾರ, ಸೋಮವಾರ, ಎರಡು ದಿನ ಚರ್ಚಿಸಿ ಸಂದುಕಟ್ಟಿನ ಪರಿಸ್ಥಿತಿಯನ್ನು ಸೇರಿತು. ಸೋಮವಾರ ಮಧ್ಯದಲ್ಲಿಯೇ ಸಭೆ ನಿಂತು ಬುಧವಾರಕ್ಕೆ ಮುಂದುವರಿಸಲ್ಪಟ್ಟಿತು. ಆ ದಿನ ಬ್ರಿಟಿಶ ಸರಕಾರದ ಪರವಾಗಿ ಹೊಸ ಸೂಚನೆಗಳು ಒಪ್ಪಿಸಲ್ಪಟ್ಟು ಅವುಗಳ ವಿಷಯು ಚಿಂತಿಸಲು ಉಭಯ ಪಕ್ಷಗಳಿಗೂ ಇನ್ನೊಂದು ದಿನ ಸಮಯ ಕೊಡಲಾಯಿತು. ಇದನ್ನು ಬರೆಯುತಿರುವಾಗ ಆ ಸಭೆ ನಡೆದಿದೆ.

ಕಾಂಗ್ರೆಸ—ಲೀಗುಗಳ ನಡುವೆ ಒಡಂಬಡಿಕೆಯನ್ನುಂಟುಮಾಡಲು ಸಮರ್ಥವಾಗದೆ ಎರಡೂ ಪಕ್ಷಗಳ ದೃಷ್ಟಿಕೋನಗಳನ್ನು ಸಾಧ್ಯವಾದಷ್ಟು ತೃಪ್ತಿಪಡಿಸಲು ಬ್ರಿಟಿಶ ಸರಕಾರದ ಪರವಾಗಿ ಹೊಸ ಸೂಚನೆಗಳು ಮಾಡಲ್ಪಟ್ಟವೆ— ವಾತಾವರಣ ನಿರಾಶಾಜನಕವಾಗಿದೆಯೆಂದು ವಾರ್ತೆಗಳು ಹೇಳುತ್ತವೆ. ಅದರೂ ಪೂರ್ಣ ಹದಗೆಟ್ಟಿಲ್ಲವಂತೆ.

ಈ ನಡುವೆ ನಡುಗಾಲ ಸರಕಾರ ಸ್ಥಾಪನೆಗೆ ಅನುಕೂಲವಾಗುವಂತೆ ಮುಖ್ಯ ಸೇನಾಪತಿಗಳನ್ನೊಳಗೊಂಡು ವಾಯಿಸರಾಯ ಕಾರ್ಯಕಾರಿ ಮಂಡಲದ ಸದಸ್ಯರೆಲ್ಲರೂ ತಮ್ಮ ರಾಜೀನಾಮೆಗಳನ್ನು ಚಕ್ರವರ್ತಿ ಮತ್ತು ವಾಯಿಸರಾಯ ಇವರಿಗೆ ಒಪ್ಪಿಸಿರುವರೆಂದು ಇದೀಗ ಒಂದು ಸರಕಾರಿ ಪ್ರಕಟನೆ ಹೊರಟಿದೆ. ಇದರಿಂದ ಬ್ರಿಟಿಶ ಸರಕಾರವು ಒಡನೆ ಕೇಂದ್ರದಲ್ಲಿ ನಡುಗಾಲ ಸರಕಾರ ಸ್ಥಾಪಿಸುವ ನಿರ್ಣಯಿಸಿದೆಯೆಂದು ಅರ್ಥವಾಗುತ್ತದೆ. ಆದರೆ ಶಾಶ್ವತ ರಾಜ್ಯಘಟನೆಯ ಪ್ರಶ್ನೆ ಮಾತ್ರ ಗುರುವಾರದ ಸಭೆಯ ಪರಿಣಾಮವನ್ನೆ ಅವಲಂಬಿಸಿದೆ.

ಸಂಪೂರ್ಣ ಗುಟ್ಟು

ತ್ರಿಪಕ್ಷಗಳ ಸಭೆಯಲ್ಲಿ ನಿಜವಾಗಿ ಏನೇನು ನಡೆಯಿತೋ ಅದು ಬೀಗ ಮುದ್ರೆ ಹಾಕಿದ ವಿಷಯ. ಆದರೂ ಊಹಾಪೋಹಗಳ ಬೆಳೆ ಹುಲುಸಾಗಿದೆ. ಪತ್ರಿಕಾಪ್ರತಿನಿಧಿಗಳಿಗೆ ಚೋಟುದ್ದದ ಅಧಿಕೃತ ಪ್ರಕಟನೆಗಳನ್ನು ಹೊರತು ಬೇರೇನನ್ನೂ ಅಧಿಕೃತವಾಗಿ ಯಾರೂ ತಿಳಿಸುವದಿಲ್ಲವಾದರೂ ಅವರಿಗೆ ವಸತಿ ಸೌಕರ್ಯಗಳನ್ನು ಒದಗಿಸಲಾಗಿದೆ. ಅವರು ವಾಯಿಸರಾಯರ ಶಿಬಿರ, ಕಾಂಗ್ರೆಸ್ ಮತ್ತು ಲೀಗ ವರ್ಗಗಳು, ಗಾಂಧೀಜಿಯ ವಸತಿ ಇವುಗಳಲ್ಲಿ ಯಾತಾಯಾತ ಹಾಕಿ ಬರಹೋಗುವವರ ಭಾವಭಂಗಿ, ಆಕಾರ ಇಂಗಿತಗಳನ್ನು ನೋಡಿ, ಅಥವಾ ಅವರ ಪರಿವಾರದವರನ್ನು ತಡವಿ ತಮ್ಮ ಊಹಾಪೋಹಗಳ ಗಗನಮಹಲನ್ನು ಕಟ್ಟುವರು. ಸಭೆ ಬುಧವಾರಕ್ಕೆ ಮುಂದೆ ಬಿದ್ದೊಡನೆ ಬಿಕ್ಕಟ್ಟಿನ ಸ್ಥಿತಿಯುಂಟಾಗಿದೆಯೆಂದು ಅನುಮಾನಿಸಿಕೊಂಡರು. ಆದರೆ ಮಹಾತ್ಮಾ ಗಾಂಧಿಯವರು ಪ್ರಾರ್ಥನಾಸಭೆಯೊಂದರಲ್ಲಿ ಬ್ರಿಟಿಶ ಮಂತ್ರಿಗಳ ಪ್ರಾಮಾಣಿಕತೆಯಲ್ಲಿ ವಿಶ್ವಾಸವನ್ನು ಪುನರಪಿ ಒತ್ತಿ ಹೇಳಿ ಆಶೆಗೆಡದಂತೆ ಜನರಿಗೆ ಉಪದೇಶಿಸಿದರೂ "ಒಂದು ವೇಳೆ ಒಡಂಬಡಿಕೆ ಸಾಧ್ಯವಾಗದಿದ್ದರೇನಂತೆ ? ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಲು ರಾಮನಾಮದ ನೆರವು ನಮಗಿಲ್ಲವೆ ?" ಎಂದೊಮ್ಮೆ ಹೇಳಿದ್ದರಿಂದ ಅವರ ಆಶಾವಾದವೂ ಬಾರಿ ತಾತ್ವಿಕವಾದುದೆಂದು ತರ್ಕಿಸುವವರಿದ್ದಾರೆ. ಮೌಲಾನಾ ಅಝಾದರು ಇನ್ನೂ ನಾಲ್ಕೂ ದಿನ ಸಮಾಧಾನ ತಾಳಿರಿ ಆಗ ಏನಾದರೊಂದು ನಿರ್ದಿಷ್ಟವಾಗಿ ಹೇಳಬಂದೀತು ಎಂದಿದ್ದಾರೆ.

ಇದು ಹೊರತು ಜಗತ್ತು ಅರಿತಿರುವದೆಂದರೆ ಪರಿಷತ್ತು ಪ್ರಾರಂಭವಾದಾಗ ಸಭಾ ಭವನದಲ್ಲಿ ಯಾರುಹೇಗೆ ಕುಳಿತಿದ್ದರು, ಯಾರು ಯಾರು ಮೊದಲು ಬಂದರು, ಮೇಜಿನ ಆಕಾರ ಹೇಗಿತ್ತು, ಯಾವ ಯಾವ ಮುಂದಾಳುಗಳು ಏನೇನು ತೊಟ್ಟಿದ್ದರು ಎಷ್ಟೆಷ್ಟು ಹೊತ್ತು ಎಂದೆಂದು ವಾಯಿಸರಾಯರು ಪ್ರಭುಗಳನ್ನು ಕಂಡರು ಇತ್ಯಾದಿ ಮಾತ್ರ.

ಮೊದಲ ಸೂಚನೆ

ಪ್ರಾರಂಭದಲ್ಲಿ, ಸಭೆಯನ್ನು ಕರೆದಾಗ ಮಂತ್ರಿತ್ರಯರು ನಾಡಕೂಟದ ಯೋಜನೆಯ ಸಂಬಂಧದಲ್ಲಿ ಕೆಲ ಸೂಚನೆಗಳನ್ನು ಮಾಡಿ ಅದರ ಚರ್ಚೆಗೆಂದು ಕಾಂಗ್ರೆಸ ಲೀಗಗಳೆರಡನ್ನೂ ಸಭೆಗೆ ಕರೆದಿದ್ದರು. ಎರಡೂ ಪಕ್ಷಗಳು ಆಮಂತ್ರಣವನ್ನು ಸ್ವೀಕರಿಸುವ ಮೊದಲು ಈ ಸೂಚನೆಗಳಿಗೆ ತಾವು ಬದ್ಧರಲ್ಲವೆಂದೂ ಬೇಕಾದ ಹೊಸ ಸೂಚನೆ ಮಾಡುವ ಅಧಿಕಾರ ತಮಗಿರಬೇಕೆಂದೂ ಹೇಳಿ ಆ ಶರ್ತಿನ ಮೇಲೆಯೇ ಸಭೆಗೆ ಬರಲೊಪ್ಪಿದವು. ಮೊದಲನೆ ದಿನ ಅಖಿಲಭಾರತ ನಾಡಕೂಟ ಕೇಂದ್ರದ ಯೋಜನೆಯನ್ನು ಚರ್ಚಿಸಲಾಯಿತೆಂದು ಅಧಿಕೃತ ಪ್ರಕಟನೆಯನ್ನು ಹೊರಡಿಸಲಾಯಿತು.

ಆದರೆ ಆ ಚರ್ಚೆ ಬಹಳ ದೂರದ ವರೆಗೆ ಸರಾಗವಾಗಿ ಸಾಗಲಿಲ್ಲ. ಸೋಮವಾರವೇ ಸಭಿಕರು ತಡೆಹಾಯಲಾರದ ಗೋಡೆಗೆ ಮುಖ ಮಾಡಿ ನಿಂತಿದ್ದರು. "ಉಪಸ್ಥಿತವಾದ ಮುದ್ದೆಗಳ ವಿಷಯ ಚಿಂತಿಸಲು ಪಕ್ಷಗಳಿಗೆ ಅವಕಾಶ ಮಾಡಿಕೊಡುವ" ಸಲುವಾಗಿ ಬುಧವಾರಕ್ಕೆ ಸಭೆಯನ್ನು ಮುಂದುವರಿಸಲಾಗಿದೆಯೆಂದು ಅಧಿಕೃತ ಪ್ರಕಟನೆ ಸಾರಿತು.

ಚರ್ಚೆಯ ಕಾಲಕ್ಕೆ ಒಂದು ವಿಷಯ ಸ್ಪಷ್ಟವಾಗಿರಬೇಕು— ಕಾಂಗ್ರೆಸ ಮತ್ತು ಲೀಗ ಇವೆರಡೂ ತಮ್ಮ ತಮ್ಮ ನಿಲುಮೆಯಿಂದರವಷ್ಟು ಚಲಿಸಿದ್ದಿಲ್ಲ. ಅಲ್ಪಸಂಖ್ಯಾಕರಿಗೆ ಪರಮಾವಧಿ ಸಂರಕ್ಷಣೆ, ಪ್ರಾಂತಗಳಿಗೆ ಪರಮಾವಧಿ ಸ್ವಾಯತ್ತತೆ ಮತ್ತು ಶೇಷಾಧಿಕಾರಗಳು ಇವನ್ನು ಕೊಟ್ಟು ಸಂಶಯ, ಭಯಗಳನ್ನು ನಿವಾರಿಸಿ ಸಂಯುಕ್ತ ಘಟನೆಯ ಮೂಲಕ ಭಾರತದ ಐಕ್ಯವನ್ನು ಕಾಪಾಡಿಕೊಳ್ಳಬೇಕು ಎಂಬುದು ಕಾಂಗ್ರೆಸ್ಸಿನ ಅಚಲನಿರ್ಧಾರವೆಂಬ ಮಾತನ್ನು ಕಾಂಗ್ರೆಸ ಪ್ರತಿನಿಧಿಗಳು ಮನದಟ್ಟು ಮಾಡಿರಬೇಕು. ಆದರೆ ಲೀಗ್ ಮುಂದಾಳುಗಳು ಯಾವದೇ ಬಗೆಯ ಕೇಂದ್ರ ಆಡಳಿತೆಗೆ ತಲೆವಾಗದ ಪೂರ್ಣ ಸ್ವತಂತ್ರ ಮತ್ತು ಸಾರ್ವಭೌಮ ಪಾಕಿಸ್ತಾನ ಸರಕಾರದ ಹಟವನ್ನೇ ಗಟ್ಟಿಯಾಗಿ ಹಿಡಿದುಕೊಂಡಿರಬೇಕು. ಹೀಗೆ ಮೂಲಭೂತ ವಿಷಯದಲ್ಲೇ ಚರ್ಚೆಗೆ ಅವಕಾಶಕೊಡುವ ಸಾಮಾನ್ಯ ನೆಲೆಕಟ್ಟಿಲ್ಲದಂತಾಯಿತು. ಆ ಮೇಲೆ ಆ ವಿಷಯವನ್ನು ಅಲ್ಲಿಗೇ ಬಿಟ್ಟು ಪ್ರಾಂತಗಳ ಅಧಿಕಾರ ಮೊದಲಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡಂತೆ ತೋರುವದು.

ಮಹಾತ್ಮರ ಸೂಚನೆ

ಈ ನಡುವೆ ಕಾಂಗ್ರೆಸ, ಲೀಗ ಪ್ರಮುಖರೂ ಕಾಂಗ್ರೆಸ್ಸಿಗೂ ಮಂತ್ರಿತ್ರಯರಿಗೂ ಸಲಹೆಗಾರರಾಗಿ ವರ್ತಿಸುತಿರುವ ಮಹಾತ್ಮರು ಹಲವಾರು ಬಾರಿ ಮಂತ್ರಿತ್ರಯರನ್ನೂ ವಾಯಿಸರಾಯರನ್ನೂ ಕಂಡು ದೀರ್ಘ ವಿಚಾರವಿನಿಮಯ ಮಾಡಿದ್ದು ಕಾಣಬರುತ್ತಿತ್ತು. ಮಹಾತ್ಮಾ ಗಾಂಧಿಯವರು ಮಂಗಳವಾರ ರಾತ್ರಿ ದೀರ್ಘಕಾಲದ ವರೆಗೆ ಯಾವುದೋ ಒಂದು ಕಾಗದವನ್ನು ಸಿದ್ಧಗೊಳಿಸುವದರಲ್ಲಿ ಮಗ್ನರಾಗಿದ್ದರು. ಮರುದಿನ ಅವರು ಮಂತ್ರಿಗಳನ್ನು ಕಂಡು ವಿಚಾರವಿನಿಮಯ ನಡೆಸಿದಾಗ ಕೆಲವೊಂದು ವಿಷಯಗಳನ್ನು ಅವರ ಮನಸ್ಸಿಗೆ ಬಿಂಬಿಸಿದರೆಂದು ಹೇಳಲಾಗಿದೆ. ಅಧಿಕಾರವನ್ನು ಬಿಟ್ಟುಕೊಡುವ ಉದ್ದೇಶದಿಂದ ಬಂದ ಬ್ರಿಟಿಶ ಮಂತ್ರಿಗಳು ಇಷ್ಟಕ್ಕೆ ಇದನ್ನು ಕೈಬಿಡತಕ್ಕದ್ದಲ್ಲವೆಂದೂ "ನಾವು ಅಧಿಕಾರ ವರ್ಗಾಯಿಸುವ ಸಾಧನವನ್ನು ನಿರ್ಮಿಸಲು ನಿಶ್ಚಯಿಸಿದ್ದೇವೆ," ಎಂದು ಹೇಳಿದ ಆಟ್ಲೀಯವರ ಮಾತನ್ನು ನೆನೆದುಕೊಂಡು ಮಂತ್ರಿತ್ರಯರು ಸ್ಪಷ್ಟ ಕೃತಿಗೆ ಮುಂದಾಗಬೇಕೆಂದೂ ಅವರು ಮಂತ್ರಿಗಳಿಗೆ ಹೇಳಿದರಂತೆ.

ಇದಲ್ಲದೆ ಮಹಾತ್ಮರು ಮಂತ್ರಿಗಳನ್ನು ಮುಂದೆ ನುಗ್ಗಿಸುವ ಸಲುವಾಗಿ ತಮ್ಮ ಬತ್ತಳಿಕೆಯಿಂದ ಅಧ್ಯಾತ್ಮಿಕ ಅಸ್ತ್ರವನ್ನೂ ಬೇಗನೆ ಹೊರತೆಗೆಯಬಹುದೆ?ಎಂಬ ಗಾಳೀಪಟವೊಂದನ್ನು ಕೆಲವರು ಹಾರಿಸಿದರು. ಮಹಾತ್ಮರು ಸಿಮ್ಲೆಗೆ ಬಂದೊಡನೆ ತಮ್ಮ ಪರಿವಾರದವರಲ್ಲಿ ಹೆಚ್ಚಿನವರನ್ನು ದಿಲ್ಲಿಗೆ ಕಳಿಸಿಬಿಟ್ಟರು. ಸಾಧ್ಯವಿದ್ದಷ್ಟು ನಿರ್ಲಿಪ್ತರಾಗಿದ್ದುಕೊಂಡು ಕೆಲಸ ಮಾಡಬೇಕೆಂಬ ಇಚ್ಛೆಯೇ ಇದಕ್ಕೆ ಕಾರಣವೆಂದು ಅವರು ಹೇಳಿದರೂ ಅದರಲ್ಲಿ ಗಂಭೀರವಾದ ಅರ್ಥವನ್ನು ಕಂಡು ಮಹಾತ್ಮರು ಉಪವಾಸ ಮಾಡುವ ವಿಚಾರ ನಡೆಸಿದ್ದಾರೆಂದು ಈ ಗಾಳೀಪಟಗಾರರ ತರ್ಕವಾಗಿತ್ತು.

ಹೊಸ ಸೂಚನೆಯೇನು?

ಮೊದಲಿನ ದಿನಗಳಲ್ಲಿಯೆ ಮುಳ್ಳುಬೇಲಿಯನ್ನು ಎದುರಿಸಿ ನಿಂತ ಮಂತ್ರಿತ್ರಯರು ಬ್ರಿಟಿಶ ಮಂತ್ರಿಮಂಡಲದೊಡನೆ ತಂತಿವ್ಯವಹಾರ ನಡೆಸಿ ಈಗ ಕಾಂಗ್ರೆಸ ಲೀಗಗಳ ಅವಗಾಹನೆಗೆ ಹೊಸ ಅಥವಾ ಬದಲು ಮಾಡಿದ ಯೋಜನೆಯೊಂದನ್ನು ಇಟ್ಟಿರುವರೆಂದು ಹೇಳಲಾಗಿದೆ. ಈ ಸೂಚನೆಗಳನ್ನು ಕುರಿತು ಲೀಗು ತನ್ನ ಉತ್ತರವನ್ನು ಒಡನೆ ಕಳಿಸಿದೆಯೆಂದು ತಿಳಿಯುತ್ತದೆ. ಈ ಸೂಚನೆಗಳನ್ವಯ ಎರಡು ಬೇರೆ ಬೇರೆ ಸಂಯುಕ್ತ ಘಟನೆಗಳು- ಒಂದು ಮುಸ್ಲಿಂ, ಇನ್ನೊಂದು ಹಿಂದೂ- ಒಂದುಗೂಡಿ ನಾಡಕೂಟವಾಗಬೇಕೆಂದು ಸೂಚಿಸಲಾಗಿದೆಯಂತೆ. ಸಂಸ್ಥಾನಗಳಿಗೆ ಹಿಂದೂ ಅಥವಾ ಮುಸ್ಲಿಂ ಸಂಯುಕ್ತ ರಾಜ್ಯದಲ್ಲಿ ಸೇರುವ ಕಾಮಚಾರಾನುಜ್ಞೆ ಕೊಡಲಾಗುವದು. ಈ ಎರಡೂ ರಾಜ್ಯಗಳೂ ಸೇರಿ ಮಾಡಿಕೊಳ್ಳುವ ನಾಡಕೂಟದಲ್ಲಿ ಒಂದು ಶಾಸನ ಸಭೆ ಇರತಕ್ಕದ್ದು. ಅದಕ್ಕೆ ಎರಡೂ ಸಂಯುಕ್ತ ರಾಜ್ಯಗಳು ಕೆಲ ಅಧಿಕಾರಗಳನ್ನು ಬಿಟ್ಟುಕೊಡಬೇಕು-- ಇದಿಷ್ಟು ಶಾಶ್ವತ ಉಪಾಯ. ಮಧ್ಯಕಾಲದಲ್ಲಿ ಕೇಂದ್ರದಲ್ಲಿ ರಚಿಸುವ ತಾತ್ಪೂರ್ತಿಕ ಸರಕಾರದಲ್ಲಿ ಹಿಂದೂ-ಮುಸ್ಲಿಂ ಮತ್ತು ಸಂಸ್ಥಾನಗಳಿಗೆ ಸಮಪ್ರಾತಿನಿಧ್ಯವಿರಬೇಕು.

ಮೊದಲನೆಯ ಯೋಜನೆಗೂ ಈ ಹೊಸ ಯೋಜನೆಗೂ ವ್ಯತ್ಯಾಸವೇನು ? ಮೊದಲನೆ ಯೋಜನೆಯನ್ವಯ ಸ್ವಾಯತ್ತ ಪ್ರಾಂತಗಳ ಹಿಂದೂ ಮುಸ್ಲಿಂ ನಾಡಕೂಟವೊಂದು ಸೂಚಿತವಾಗಿತ್ತು. ಅದರಲ್ಲಿ ಕೇಂದ್ರದಲ್ಲಿ ಶಾಸನ ಸಭೆಯಿದ್ದಿಲ್ಲ. ಅಲ್ಲದೆ ಅವುಗಳಲ್ಲಿ ಹಿಂದುಸ್ತಾನ ಪಾಕಿಸ್ತಾನವೆಂಬ ಬೇರೆ ಬೇರೆ ಸ್ವತಂತ್ರ ಘಟಕಗಳಿಲ್ಲದೆ ಎಲ್ಲವೂ ನೇರವಾಗಿ ಕೇಂದ್ರದೊಡನೆ ಜೋಡಿಸಲ್ಪಟ್ಟಿದ್ದವು. ಹೊಸ ಸೂಚನೆಯಲ್ಲಿ ಹಿಂದೂ-ಮುಸ್ಲಿಂ ಸ್ತಾನಗಳೆರಡು ಬೇರೆ ಬೇರೆಯಾಗಿ ಸಂಘಟಿತವಾಗಿ ಮತ್ತೆ ನಾಡಕೂಟದಲ್ಲಿ ಜೋಡಿಸಲ್ಪಡುತ್ತವೆ ಮತ್ತು ಅದಕ್ಕೆ ಒಂದು ಶಾಸನ ಸಭೆಯಿದೆ. ಇದು ಸ್ಪಷ್ಟವಾಗಿ ಮುಸ್ಲಿಂ ಲೀಗ ಮತಕ್ಕೆ ಅನುಕೂಲವಾದ ಮಾರ್ಪಾಟಾಗಿತ್ತು.

ಆದರೆ ಮುಸ್ಲಿಂ ಲೀಗು ಇದರಿಂದ ಸಂತುಷ್ಟವಾಗಿಲ್ಲವೆಂದು ನಂಬಲರ್ಹವಾದ ಕಡೆಯಿಂದ ತಿಳಿಯುತ್ತದೆ. ಕೇಂದ್ರದಲ್ಲಿ ಒಂದು ನಾಡಕೂಟವಿರಬೇಕೆಂದಕ್ಕೆ ತಾವು ಒಪ್ಪಬೇಕಾದರೆ ಕೂಡ ಕೇಂದ್ರ ಶಾಸನ ಸಭೆಯಲ್ಲಿ ಹಿಂದೂ-ಮುಸ್ಲಿಂ ಸಮಪ್ರಾತಿನಿಧ್ಯವಿರಬೇಕು ಮಾತ್ರವಲ್ಲ ಹಿಂದೂ ಸಂಯುಕ್ತ ರಾಜ್ಯದ ಶಾಸನ ಸಭೆಯಲ್ಲಿಯೂ ಮುಸ್ಲಿಮರಿಗೆ ಸಮಪ್ರಾತಿನಿಧ್ಯ ಕೊಡಬೇಕೆಂದು ಅವರು ಬೇಡಿರುವರಂತೆ. ಅರ್ಥಾತ್ ಹಿಂದುರಾಜ್ಯದಲ್ಲಿರುವ ೩॥ ಕೋಟಿ ಮುಸ್ಲಿಮರು ಹಿಂದೂ ಸಂಯುಕ್ತ ಶಾಸನ ಸಭೆಯಲ್ಲಿ ಅವರಿಗಿಂತ ೫ ಪಾಲು ಹೆಚ್ಚು ಹಿಂದುಗಳೊಡನೆ ಸಮಪ್ರಾತಿನಿಧ್ಯ ಬೇಡಿದಂತಾಯಿತು.

೧೩ನೇ ಪುಟ ನೋಡಿರಿ

ಅಂತರ್ ರಾಷ್ಟ್ರೀಯ

ವಿಜಯಗಳಲ್ಲಿ ಜಗಳ

ಯುರೋಪಿನ ರಾಷ್ಟ್ರಗಳ ಶಾಂತಿ ಪರಿಷತ್ತಿನ ಪೂರ್ವಭಾವಿಯಾಗಿ ಈಗ ಹಲದಿನಗಳಿಂದ ಶಾಂತಿ ಒಪ್ಪಂದಗಳ ರೂಪರೇಷೆಗಳನ್ನು ಗೊತ್ತುಪಡಿಸಲು ಸೇರುತ್ತಿರುವ ವಿದೇಶ ಮಂತ್ರಿಗಳ ಪರಿಷತ್ತು ಪ್ರತಿಯೊಂದು ವಿಷಯದಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬಿಡಿಸಿಕೊಳ್ಳಲಾರದೆ ಒದ್ದಾಡುತ್ತಿದೆ. ಚತುರ್ರಾಷ್ಟ್ರಗಳ ವಿದೇಶ ಮಂತ್ರಿಗಳು ಒಮ್ಮತಕ್ಕೆ ಬರಬಾರದೆಂಬ ನಿರ್ಧಾರದಿಂದಲೇ ಪ್ಯಾರೀಸಿನಲ್ಲಿ ಸೇರಿರುವರೋ ಎಂಬಂತಿದೆ ಅವರ ಚರ್ಚೆಗಳ ಸ್ವರೂಪ. ಇಟಲಿಯ ವಸಾಹತುಗಳನ್ನು ಹಂಚಿಕೊಳ್ಳುವ ವಿಚಾರವಾಗಲಿ ಅದರ ಹಡಗಪಡೆಯನ್ನು ಪಾಲುಮಾಡಿಕೊಳ್ಳುವ ರೀತಿಯಾಗಲಿ ಸರ್ವಸಮ್ಮತಿಯಿಂದ ನಿಶ್ಚಿತವಾಗದೆ ಹೋಯಿತು. ಟ್ರೀಸ್ಟ್ ಬಂದರವನ್ನು ಯುಗೊಸ್ಲಾವಿಯಾಕ್ಕೆ ಕೊಡಿಸಬೇಕೆಂಬ ರಶಿಯನ್ ಪ್ರಯತ್ನವನ್ನು "ಅನ್ಯಾಯ"ದ್ದೆಂದು ಅಂಗ್ಲೊ ಅಮೇರಿಕನ್ನರು ಎದುರಿಸಿದರೆ, ಲೀಬಿಯಾಕ್ಕೆ "ಸ್ವಾತಂತ್ರ್ಯ" ಕೊಡುವ ಬ್ರಿಟಿಶ ಸೋಗನ್ನು ಸಾಮ್ರಾಜ್ಯವನ್ನು ಶಾಶ್ವತವಾಗಿರಿಸುವ ಬ್ರಿಟಿಶ ಪ್ರಯತ್ನವೆಂದು ಮೊಲಟೊಫರು ಟೀಕಿಸುವರು. ಕೊನೆಗೆ ಅವರು ಇಟಾಲಿಯನ್ ಒಪ್ಪಂದದ ಪ್ರಶ್ನೆಯ ಚರ್ಚೆಯನ್ನೇ ಮೂಲೆಗೊತ್ತಿ ಇತರ ವಿಷಯಗಳ ಚರ್ಚೆಯನ್ನು ಪ್ರಾರಂಭಿಸಿದರು. ಅಲ್ಲಿಯೂ ಒಮ್ಮತದ ಹಾದಿಯಲ್ಲಿ ಮುಳ್ಳುಗಳೇ. ಅಸ್ಟ್ರಿಯಾದಿಂದ ಬೇಗನೆ ಮಿತ್ರಸೇನೆಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಆಂಗ್ಲೊ ಅಮೇರಿಕನ್ ಸೂಚನೆಗೆ ರಶಿಯಾದ ವಿರೋಧವೊದಗಿತು. ಹಂಗೇರಿ, ರುಮೇನಿಯಾ, ಬಲ್ಗೇರಿಯಾ, ಫಿನ್ಲಂಡ್‌ಗಳ ಶಾಂತಿ ಒಪ್ಪಂದಗಳ ಚರ್ಚೆಯನ್ನು ಆರಂಭಿಸುವದಾಗಿದೆ. ವಿದೇಶ ಮಂತ್ರಿಗಳಲ್ಲಿ ಒಪ್ಪಂದವಾದ ಒಂದೇ ಒಂದು ಸಂಗತಿಯೆಂದರೆ, ಹಿಟ್ಲರನು ಹಂಗೇರಿಗೆ ಕೊಡಿಸಿದ ಟ್ರಾನ್ಸಿಲ್ವೇನಿಯಾವನ್ನು ರುಮಾನಿಯಾಕ್ಕೆ ತಿರುಗಿ ಕೊಡಿಸಬೇಕೆಂಬದು. ಹಾರುಸುದ್ದಿಗಳು ವಿದೇಶ ಮಂತ್ರಿ ಪರಿಷತ್ತು ಈ ವಾರಾಂತ್ಯದಲ್ಲಿ ಕೊನೆಗಂಡು ಇನ್ನೆರಡು ತಿಂಗಳಿಗೆ ಮತ್ತೆ ಕೂಡುವದೆಂದು ಹೇಳುತ್ತಿವೆ. ಅಂತೂ ಬರಗಾಲದ ತೆರೆಬಾಯಿಯ ಮುಂದೆ ನಿಂತಿರುವ ಯುರೋಪು ಈ ಮೇ ತಿಂಗಳಿಂದ, ಯುದ್ಧ ಮುಗಿದು ಹನ್ನೆರಡು ತಿಂಗಳ ನಂತರವಾದರೂ ಶಾಂತಿಯ ಮುಖವನ್ನು ಕಾಣಬಹುದೆಂಬ ಆಸೆಗೆ ತಣ್ಣೀರು ಬಿದ್ದಂತಾಗಿದೆ.

ಪಾಲಿಸ್ತಾನದ ವರದಿ

ಅಂಗ್ಲೋ ಅಮೇರಿಕನ್ ವಿಚಾರಣಾ ಸಮಿತಿಯವರು ಪಾಲಿಸ್ತಾನವನ್ನು "ಯಾರಿಗೂ ಸೇರಿಲ್ಲ"ವೆಂದು ನಿರ್ಣಯಿಸಿ ಮಾಡಿದ ವರದಿ ಅರಬ—ಯಹೂದ್ಯರಿಬ್ಬರಲ್ಲಿಯೂ ಭುಗಿಲೆಂದು ಅಸಂತುಷ್ಟಿಯನ್ನು ಎಬ್ಬಿಸಿದೆ. ಈ ವರದಿಯಲ್ಲಿ ಮಾಡಿರುವ ಸೂಚನೆಗಳನ್ನು ಆಚರಣೆಗೆ ತರಲು ಬ್ರಿಟಿಶರೇನಾದರೂ ಪ್ರಯತ್ನಿಸಿದರಾದರೆ, "ಜಿಹಾದ್"—ಧರ್ಮಯುದ್ಧ ಹೂಡುವದಾಗಿ ಅರಬರು ಡಾಣಾಡಂಗುರವಾಗಿ ಸಾರಿದ್ದಾರೆ. ಇದರಲ್ಲಿ ಸೀರಿಯಾ–ಲೆಬನಾನ್, ಸೌದಿ ಅರೇಬಿಯಾ, ಇರಾಕ ಇಜಿಪ್ತಗಳ ಬೆಂಬಲ ಅವರಿಗೆ ಸಂಪೂರ್ಣವಾಗಿದೆ. ಅರಬರು ತಮ್ಮ ಸ್ವಾತಂತ್ರ್ಯಕ್ಕಾಗಿ ದಂಗೆಯೆದ್ದಾಗ ಅವರನ್ನು ಉಕ್ಕಿನ ಮುಷ್ಟಿಯಿಂದ ಅಮುಕಿ ಮುರಿಯಲಾಗಿತ್ತು. ಆದರೆ ಇದೀಗ ಕಾಂ[illegible]ಯುದ್ಧವಾಗಿ ಯಹೂದ್ಯರು ಪಾಲಿಸ್ತಾನದಲ್ಲಿ ನುಗ್ಗುತ್ತಿರುವಾಗ ಮತ್ತು ಬ್ರಿಟಿಶ ಪೋಲೀಸರನ್ನು ನೂರಾರುಗಟ್ಲೆ ಕೊಲ್ಲುತ್ತಿರುವಾಗ ಅವರ ಈ ದುಷ್ಕರ್ಮಕ್ಕೆ ಪ್ರತಿಫಲವಾಗಿ ಪಾಲಿಸ್ತಾನದಲ್ಲಿ ಒಂದು ಲಕ್ಷ ಯಹೂದ್ಯರಿಗೆ ಪ್ರವೇಶ ಕೊಡಲು ಈ ವರದಿ ಮುಂದಾಗಿದೆಯೆಂದು ಸೀರಿಯಾ ಮುಖ್ಯಮಂತ್ರಿ ಸಾದಲ್ಲಾ ಹೇಳಿದ್ದಾನೆ. ಇಜಿಪ್ತದಲ್ಲಂತೂ ಅರಬರ "ಧರ್ಮಯುದ್ಧ"ಕ್ಕಾಗಿ ಗುಪ್ತವಾಗಿ ಸೈನಿಕ ಶಿಕ್ಷಣವನ್ನು ಕೊಡುವದು ಕೂಡ ನಡೆದಿದೆಯೆಂದು ಸುದ್ದಿ ಹಬ್ಬಿದೆ. ಅತ್ತ ಯಹೂದ್ಯರು ಈ ವರದಿ, ಪಾಲಿಸ್ತಾನದಲ್ಲಿನ ತಮ್ಮ ಇರವಿಗೆ "ಮರಣದಂಡನೆಯ ತೀರ್ಪಿ"ನಂತಿದೆಯೆಂದು ಸಾರಿರುವರು.

ಅರಬರೀಗ ರಶಿಯಾದ ಕಡೆಗೆ ಸಹಾಯಕ್ಕಾಗಿ ಕೈನೀಡುವ ಲಕ್ಷಣಗಳು ತೋರತೊಡಗಿವೆ. ಅರಬರ ಶಿಷ್ಟಮಂಡಲವೊಂದು ಮಾಸ್ಕೋಕ್ಕೆ ಹೋಗುವದೆಂದು ತಿಳಿದುಬರುತ್ತದೆ. ಆದರೆ ಮಾಸ್ಕೋದ ಭಾಗ್ಯವಿಧಾತರು ದಾರಿನೋಡದೆ ಹೆಜ್ಜೆಯಿಡುವಂತೆ ಕಾಣಲಿಲ್ಲ. ಅರಬರು ಅವರಿಗೆ ಕಳಿಸಿದ ಮೊರೆವುನವಿಯೊಂದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಇಜಿಪ್ತದಿಂದ "ಚಲೇಜಾವ್"

ಬ್ರಿಟಿಶ ಸರಕಾರದವರು ಈ ವಾರ ಪಾರ್ಲಿಮೆಂಟನಲ್ಲಿ ಇಜಿಪ್ತದಿಂದ ಬ್ರಿಟಿಶ ಸೈನ್ಯವನ್ನು ಹಿಂತೆಗೆದುಕೊಳ್ಳಲಾಗುವದೆಂಬ ಹೇಳಿಕೆಯನ್ನು ಕೊಟ್ಟು ಚರ್ಚಿಲ್ ಪ್ರಭೃತಿಗಳನ್ನು ಬೆಚ್ಚಿಸಿಬಿಟ್ಟರು. ಈಗ ಕೆಲವಾರಗಳಿಂದ ಬ್ರಿಟಿಶ ಮತ್ತು ಇಜಿಪ್ಶಿಯನ್ ಸರಕಾರದ ಹಾಗು ಸೇನಾಧಿಕಾರಿಗಳ ನಡುವೆ ೧೯೩೬ ರ ಅಂಗ್ಲೋ—ಇಜಿಪ್ಶಿಯನ್ ಒಪ್ಪಂದದ ಪುನರ್ವಿಮರ್ಶೆಯ ಬಗ್ಗೆ ಮಾತುಕತೆ ನಡೆದಿತ್ತು. ಈಗ ಕೆಲ ತಿಂಗಳುಗಳಿಂದ ಇಜಿಪ್ತದಲ್ಲಿ ಉಕ್ಕುತ್ತಿರುವದೆಂದು ಸ್ಪಷ್ಟವಾಗಿರುವ ಬ್ರಿಟಿಶ ವಿರೋಧಿ "ಚಲೇಜಾವ್" ಭಾವನೆ ಮತ್ತು ಅದರ ವ್ಯಕ್ತಸ್ವರೂಪವಾಗಿ ನಡೆದ ಗಲಭೆಗಳು ಬ್ರಿಟಿಶ ಸರಕಾರವನ್ನು ಈ ಬಗ್ಗೆ ಹೆಚ್ಚು ಒತ್ತಾಯಗೊಳಿಸಿರಬೇಕು. ಇಜಿಪ್ಶಿಯನ್ನರಲ್ಲಿ ನಮ್ಮ ಬಗ್ಗೆ ವಿಶ್ವಾಸವನ್ನು ಹುಟ್ಟಿಸಬೇಕಾದರೆ ಅಲ್ಲಿಂದ ಸೈನ್ಯವನ್ನು ಹಿಂತೆಗೆದುಕೊಳ್ಳುವ ಆಶ್ವಾಸನ ಕೊಡುವದು ಅತ್ಯವಶ್ಯವೆಂದು ಬ್ರಿಟಿಶ ಸರಕಾರಕ್ಕೆ ಮನವರಿಕೆಯಾಗಿದೆಯೆಂದು ಅಟ್ಲಿಯವರು ಹೇಳಿದರು. "ಯಾರಿಗೂ ಗೊತ್ತಿಲ್ಲದಂತೆ ಈ ಸಾರ್ವಜನಿಕ ಮಹತ್ವದ ಪ್ರಶ್ನೆಯನ್ನು ಸರಕಾರ ತಾನೇ ತಾನು ತೀರ್ಮಾನಿಸಿದ್ದಕ್ಕಾಗಿ" ಆಚ್ಚರಿಗೊಂಡ ಚರ್ಚಿಲ–ಈಡನ್ನರು ತಂದ ಅವಸರದ ನಿಲುವಳಿಯ ಚರ್ಚೆಯ ಕಾಲಕ್ಕೆ ಆ ಮಹನೀಯರು ಸುಯೇಜ ಕಾಲುವೆಯ ಭದ್ರತೆಯ ಬಗ್ಗೆ ತೀವ್ರ ಚಿಂತೆಯನ್ನು ವ್ಯಕ್ತಗೊಳಿಸಿ "ಬಹಳ ಪರಿಶ್ರಮದಿಂದ ಕಟ್ಟಿದ್ದನ್ನು ಮರುಳರಂತೆ ಹಾಳುಗೆಡಹುತ್ತಿರುವರೆಂ"ದು ಕೂಲಿಕಾರ ಸರಕಾರವನ್ನು ಟೀಕಿಸಿದರು.

ಈ ಕಾನ್ಸರ್ವೇಟಿವ್ಹ ಸದಸ್ಯರು ತೋರಿಸಿದ ಚಿಂತೆಯನ್ನು ನೋಡಿದರೆ ಬ್ರಿಟಿಶ ಸೇನೆ ಇಜಿಪ್ತದಿಂದ ಈಗಾಗಲೆ ಹೊರಡತೊಡಗಿದೆಯೇನೋ ಎಂಬಂತೆ ತೋರುತಿತ್ತು. ಆದರೆ ಅವರ ಸುದೈವಕ್ಕೆ ಇದು ಕೃತಿಯಿಂದ ಸಿದ್ಧವಾದ ಮಾತಾಗಿರದೆ ಬರಿ ಆಶ್ವಾಸನೆಯಾಗಿತ್ತು. ಆದರೆ ಇಷ್ಟು ನಿಜ: ಇಜಿಪ್ತದಲ್ಲಿ ಬೀಡು ಹೂಡಿರುವ ಬ್ರಿಟಿಶ ಸೇನೆಯ ಹೊರಪಯಣದ ಪರ್ಯಾಯ, ರೀತಿಗಳನ್ನು ನಿರ್ಣಯಿಸುವ ಸಲುವಾಗಿ ಇನ್ನೆರಡು ವಾರದೊಳಗೆ 'ಮಾತುಕತೆ' ಪ್ರಾರಂಭವಾಗುವ ನಿಶ್ಚಿತ ಸೂಚನೆ ತೋರುತ್ತಲಿದೆ. ಇಷ್ಟಕ್ಕೇ ಇಷ್ಟು ರಂಬಾಟ. ಮೊದಲು ಇಜಿಪ್ತದಿಂದ 'ಚಲೇಜಾವ'ವನ್ನು ಸ್ವಲ್ಪ ಸ್ವಲ್ಪವಾಗಿ ಅನೇಕ ವರ್ಷಗಳ ಅವಧಿಯಲ್ಲಿ ಮುಗಿಸಬೇಕೆಂಬ ಅಭಿಪ್ರಾಯ ವ್ಯಕ್ತಗೊಳಿಸಿದ್ದರೂ ಈಗ ಅದನ್ನು ಲಗುಬಗೆಯಿಂದ ಮುಗಿಸಬಹುದೇನೊ ಎಂದು ಕಾಣುತಿದೆ.

೧೯೩೨ ರಲ್ಲಿ ಇಜಿಪ್ತು ಸ್ವತಂತ್ರವಾಗುವ ಮೊದಲು ಅದು ಬ್ರಿಟಿಶ 'ರಕ್ಷಿತ' ಭೂಭಾಗವಾಗಿತ್ತು. ೧೯೩೬ ರಲ್ಲಿ ಆ ಎರಡು ರಾಷ್ಟ್ರಗಳಲ್ಲಿ ಒಂದು ಒಪ್ಪಂದವಾಯಿತು. ಅದರನ್ವಯ ಸಂಕಷ್ಟಕಾಲದಲ್ಲಿ ಉಭಯ ರಾಷ್ಟ್ರಗಳು ಪರಸ್ಪರ ಸಹಾಯ ಮಾಡಿಕೊಳ್ಳುವ ಮತ್ತು ಸುಯೇಜ ಕಾಲಿವೆಯ ರಕ್ಷಣೆಗಾಗಿ ೧೦೦೦೦ ಕ್ಕೆ ಮಿಕ್ಕದ ಬ್ರಿಟಿಶ ಸೈನ್ಯ ಮತ್ತು ೪೦೦ ವೈಮಾನಿಕರನ್ನು ಇಜಿಪ್ತದಲ್ಲಿಡುವ ಹಕ್ಕನ್ನು ಇಂಗ್ಲಂಡು ಸಂಪಾದಿಸಿತು. ಈ ಒಪ್ಪಂದ ೧೯೫೬ ಕ್ಕೆ ಮುಕ್ತಾಯವಾಗುವದಿತ್ತು. ಆ ವರೆಗೆ ಬ್ರಿಟಿಶ ಸೈನ್ಯಗಳು ಅಲ್ಲಿರಬೇಕೆಂಬ ಹಟವನ್ನು ಬ್ರಿಟಿಶ ಸರಕಾರ ತೊಡಬಲ್ಲದಾಗಿತ್ತು. ಒಪ್ಪಂದ ರದ್ದಾಗಬೇಕಾದರೆ ೫ ವರ್ಷಗಳ ನೋಟೀಸು ಕೊಡಬೇಕಾಗುತಿತ್ತು. ಈ ಸವಲತ್ತುಗಳನ್ನು ಬಿಟ್ಟುಕೊಡಲು ಸಿದ್ಧವಾದುದು— ಇನ್ನೂ ಬಿಟ್ಟುಕೊಟ್ಟಿಲ್ಲ— ಬ್ರಿಟಿಶ ಸರಕಾರ ತೋರಿಸಿದ ಔದಾರ್ಯ.

ಎಲ್ಲ ಇಜಿಪ್ಶನ್ನರೂ ಈ ಬ್ರಿಟಿಶ ಇಂಗಿತದಿಂದ ಸಂತುಷ್ಟರಾದಂತಿಲ್ಲ. ಅಗ್ನಿಭಕ್ಷಕ ಭೂತಪೂರ್ವ ಮುಖ್ಯ ಮಂತ್ರಿ ನಾಹಸಪಾಶಾ ಅವರು ಸುಡಾನವನ್ನು ಇಜಿಪ್ತದಿಂದ ಬೇರ್ಪಡಿಸುವ ಬ್ರಿಟಿಶ ತಂತ್ರಕ್ಕೆ ಮುಖ್ಯ ಮಂತ್ರಿ ಸಿದ್ದಿಕಿಪಾಶಾ ಅವರು ಸಂಮತಿಸಿರಬೇಕೆಂದು ಸಂದೇಹ ತಳೆದಿದ್ದಾರೆ. ಸದ್ಯಕ್ಕೆ ಆಂಗ್ಲೊ ಇಜಿಪ್ಶನ್ ಜತೆ ಆಡಳಿತೆಯಲ್ಲಿರುವ ಸುಡಾನವನ್ನು ಇಜಿಪ್ತದೊಡನೆ ಸಂಯುಕ್ತವಾಗಿ ಘಟಿಸಿ ನೀಲ ನದೀವಲಯದ ಐಕ್ಯವನ್ನು ಅವಿಭಾಜ್ಯವಾಗಿ ಉಳಿಸಿಕೊಳ್ಳಬೇಕೆಂದು ಎಲ್ಲ ಇಜಿಪ್ಶನ್ ರಾಷ್ಟ್ರಪ್ರೇಮಿಗಳೂ ಆಶಿಸುತ್ತಾರೆ. ಸುಡಾನದ ಪ್ರಶ್ನೆ ಬೇರೆಯೆ— ಎಂದು ಪಾರ್ಲಮೆಂಟನಲ್ಲಿ ಬ್ರಿಟಿಶ ಸರಕಾರದವರು ಹೇಳಿದ್ದರಿಂದ ಸುಡಾನದ ಮೇಲಿನ ತಮ್ಮ ರಕ್ಷಣ ಕವಚವನ್ನು ಕಳಚಲು ಬ್ರಿಟಿಶರು ಸಿದ್ಧರಿಲ್ಲವೆಂಬ ಸಂದೇಹಕ್ಕೆ ಬಲವುಂಟಾಗಿದೆ. ಆದರೆ ಮುಖ್ಯ ಮಂತ್ರಿ ಸಿದ್ದಿಕಿ ತಾನು ವಾಗ್ಬದ್ಧನಾಗಿಲ್ಲವೆಂದು ಹೇಳಿದ್ದಾನೆ.

ಇರಾಣದಿಂದ ಹೊಸ ಪಯಣ

ಇರಾಣ-ರಶಿಯಾ ಪ್ರಶ್ನೆಯಲ್ಲಿ, ಇದನ್ನು ಬರೆಯುತ್ತಿರುವಾಗ ಸೇರಿರುವ ಅಂತರ್‌ರಾಷ್ಟ್ರೀಯ ಭದ್ರತಾ ಮಂಡಲ, ಒಂದು ವಿಚಿತ್ರ ಪರಿಸ್ಥಿತಿಯನ್ನು ಎದುರಿಸಿದೆ. ಇರಾಣದ ಬೇರೆ ಎಲ್ಲ ಭಾಗಗಳನ್ನು ಮೊದಲೇ ತೆರವು ಮಾಡಿದ್ದ ರಶಿಯಾ ಮೇ ೬ ಕ್ಕೆ ಅಜರಬೈಜಾನದಿಂದಲೂ ಸರ್ವ ಪರಿವಾರ ಸಹಿತ ಹೊರಟು ಹೋಯಿತೆಂದು ತಾಬ್ರಿಝು (ಅಜರಬೈಜಾನ) ಆಕಾಶವಾಣಿ ಸಾರಿತು. ಈ ಪ್ರಕಾರ ರಶಿಯಾ ತನ್ನ ಕಳೆದ ತಿಂಗಳ ಒಪ್ಪಂದವನ್ನು ಪಾಲಿಸಿದಂತಾಗಿದೆ. ಆದರೆ ಹೇಳುತ್ತದೆ ತೆಹರಾಣದಲ್ಲಿರುವ ಕೇಂದ್ರ ಸರಕಾರ: ರಶಿಯಾದ ಹೊರಪಯಣದ ಸತ್ಯಾಸತ್ಯತೆಯನ್ನು ನಿರ್ಧರಿಸಿಕೊಳ್ಳುವ ಸಾಧನ ತನ್ನ ಹತ್ತಿರ ಇಲ್ಲವಾಗಿ ಒಪ್ಪಂದದಂತೆ ರಶಿಯಾ ಮೇ ೬ ಕ್ಕೆ ಇರಾಣವನ್ನು ಪೂರ್ಣ ತೆರವು ಮಾಡಿತೆಂದು ಅಧಿಕೃತವಾಗಿ ಸಾರುವದು ಸಾಧ್ಯವಿಲ್ಲ— ಎಂದು. ಅಝುರಬೈಜಾನವೀಗ ಸ್ವಾಯತ್ತ ಸರಕಾರದ ವಶದಲ್ಲಿದ್ದು ಅದರೊಡನೆ ಕೇಂದ್ರ ಸರಕಾರಕ್ಕೆ ಸಂಪರ್ಕವಿಲ್ಲದ್ದರಿಂದ ಹೀಗೆ ಹೇಳಲಾಗಿದೆ. ಆದರೆ ಇದರೊಳಗೆ ಇನ್ನೂ ಏನೋ ತೊಡಕು ಹುದುಗಿದೆಯೇನೊ. ಅಜರಬೈಜಾನ "ರಾಷ್ಟ್ರೀಯ" ಸರಕಾರದ "ಮುಖ್ಯ ಮಂತ್ರಿ" ಪಿಶೆವಾರಿಯೊಡನೆ ಕೇಂದ್ರ ಸರಕಾರದವರು ಅಝುರಬೈಜಾನದ ಭವಿಷ್ಯತ್ ಸ್ಥಿತಿಯನ್ನು ನಿರ್ಧರಿಸುವ ಬಗ್ಗೆ ನಡೆಸಿದಮಾತುಕತೆಗಳು ಮೇ೬ಕ್ಕೆ ಮೊದಲೇ ಮುಗಿಯಬಹುದೆಂದು ನಿರೀಕ್ಷಿಸಲ್ಪಟ್ಟಿದ್ದರೂ ಅದಿನ್ನೂ ಸಾಧ್ಯವಾಗಿಲ್ಲ ಒಪ್ಪಂದದ ಮಾತುಕತೆಗಳಲ್ಲಿ ಬಿಕ್ಕಟ್ಟುಂಟಾಗಿರಬೇಕು. ಈ ನಡುವೆ ಕುರ್ಡ ಜನರು ಇರಾಣದೊಳಗೆ ಸ್ಥಾಪಿಸಿಕೊಂಡ "ಸ್ವಾಯತ್ತ" ಸರಕಾರದೊಡನೆ ಅಝುರ ಬೈಜಾನ "ಸರಕಾರ" ಒಪ್ಪಂದ ಬೇರೆ ಮಾಡಿಕೊಂಡಿದೆ. ಇದರಿಂದ ಇರಾಣದಿಂದ ಇನ್ನೊಂದು ಚಿಪ್ಪು ಹಾರಿದಂತಾಗುತ್ತದೆ. ಇದನ್ನು ಕಂಡು ಕಂಗೆಟ್ಟ ಇರಾಣ ಕೇಂದ್ರ ಸರಕಾರ ಹೀಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಿರಬೇಕೆಂದು ತೋರುತ್ತದೆ.

ಇಂಡೋನೇಶಿಯಾದ ಗತಿ

ಹಾಲಂಡಿಗೆ ವಿಚಾರವಿನಿಮಯಕ್ಕಾಗಿ ಹೋದ ಇಂಡೋನೇಶಿಯನ್ ಪ್ರಭೃತಿಗಳು ಪೂರ್ಣ ನಿರಾಶರಾಗಿ ಹಿಂದೆ ಬರದಿದ್ದರೂ ಅಷ್ಟು ಆಶಾಪೂರ್ಣರಾಗಿ ಬಂದಿಲ್ಲವೆಂದು ತೋರುತ್ತದೆ. ಗವ್ಹರ್ನರ ವಾನ್ ಮೂಕರು ಅಲ್ಲಿ ಕೈಬಿಟ್ಟಿದ್ದ ಮಾತುಕತೆಗಳ ಎಳೆಗಳನ್ನು ಪುನಃ ಹಿಡಿದು ಮುಂದೆ ಸಾಗಿಸಲು ಬಟೇವಿಯಾಕ್ಕೆ ಮರಳಿದ್ದಾರೆ ನಿಜ. ಆದರೆ, ಇಂಡೋನೇಶಿಯಾದಲ್ಲಿ ಅಡ್ಡಾಡಿ ಪರಿಸ್ಥಿತಿಯನ್ನು ಅಭ್ಯಸಿಸಿ ಹೋದ ಡಚ್ ಪಾರ್ಲಮೆಂಟರಿ ಶಿಷ್ಟಮಂಡಲದವರು ಇದೇ ಹೊತ್ತಿಗೆ ಸರಿಯಾಗಿ ತಮ್ಮ ವರದಿಯನ್ನು ಪ್ರಸಿದ್ಧಿಸಿ ಪಾರ್ಲಮೆಂಟಿನ ಮುಂದಿಟ್ಟರು. ಮೊನ್ನೆ ಮೊನ್ನೆಯವರೆಗೆ ಇಂಡೋನೇಶಿಯನ್ನರು ಡಚ್ ಪಕ್ಷಪಾತಿಗಳಾಗಿದ್ದು ಆ ಮೇಲೆ ಪ್ರಚಾರದಿಂದ ಅವರು ಮನಸು ತಿರುಗಿಸಲಾಗಿದೆಯೆಂದೂ ಇಂಡೋನೇಶಿಯದ ಇಂದಿನ ಪರಿಸ್ಥಿತಿಗೆ ಇಂಡೊನೇಶಿಯದಲ್ಲಿದ್ದ ಡಚ್ ಅಧಿಕಾರಿಗಳೂ ಆಗ್ನೇಯ ಏಶಿಯಾ ಸನ್ನಿಧಿಕೇಂದ್ರದ ಮುಖ್ಯರಾದ ಆ್ಯಡ್ಮಿರಲ್ ಮೌಂಟಬ್ಯಾಟನ್ನರೂ ಕಾರಣರೆಂದೂ ಆ ವರದಿಯಲ್ಲಿ ದೂರಲಾಗಿದೆ. ಆ ವರದಿ ಒಟ್ಟಿನ ಮೇಲೆ ಇಂಡೊನೇಶಿಯದ ಸ್ವಾತಂತ್ರ್ಯಕ್ಕೆ ವಿರೋಧವೊಡ್ಡಿದೆಯೆಂದರೆ ಸಾಕು.

ಈ ಶಿಷ್ಟಮಂಡಲ ಹಿಂದೆ ವಾನ್ ಮೂಕರು ಇಂಡೋನೇಶಿಯನ್ನರೊಡನೆ ಮಾತುಕತೆ ಆರಂಭಿಸಲು ಹೋದೊಡನೆ ಅವರ ಬೆನ್ನುಗಡೆ ಗುಪ್ತಚಾರರೆಂಬಂತೆ ಹೋದುದನ್ನೂ ಈ ಬಾರಿ ಅವರು ಹೊರಟೊಡನೆ ಈ ವರದಿ ಪ್ರಸಿದ್ಧವಾದುದನ್ನೂ ನೋಡಿದರೆ ಡಚ್ ಪಾರ್ಲಮೆಂಟಿನಲ್ಲಿ ಇಂಡೋನೇಶಿಯಾದ ಸ್ವಾತಂತ್ರ್ಯಕಾಂಕ್ಷೆಯನ್ನು ಮುರಿಯಲು ಕಂಕಣತೊಟ್ಟ ಬಂದು ಪ್ರಬಲ ಗುಂಪಿದೆಯೆಂದು ಸಿದ್ಧವಾಗುತ್ತದೆ. ಈಗ ಸಾಕಷ್ಟು ಡಚ್ ಪಡೆಗಳು ಬ್ರಿಟಿಶ ಮಿತ್ರರ ಸಾಮ–ಭೇದ–ದಂಡ ಸಹಾಯದಿಂದ ಇಂಡೋನೇಶಿಯಾದಲ್ಲಿ ಸಜ್ಜಿತವಾದುದರಿಂದ ಇಂಡೋನೇಶಿಯನ್ನರನ್ನು ಮುರಿಯುವ ಧೈರ್ಯ ಡಚ್‌ರಿಗೆ ಬಂದಿದ್ದರೆ ಆಚ್ಚರಿಯಲ್ಲ. ಸುಮಾತ್ರದಲ್ಲಿ ಪ್ರತಿಗಾಮಿ ಸುಲ್ತಾನರ ಸಹಾಯದಿಂದ ಈ ದಂಡನೀತಿ ಈಗಾಗಲೆ ಆಚರಣೆಗೆ ಬರತೊಡಗಿದೆ. ಇಂಡೊಚೀನದಂತೆ ಇಂಡೊನೇಶಿಯವೂ ಏಶಿಯಾಟಿಕ್ ಜನರಿಗೆ ಬಿಳಿಯರ ಪ್ರಾಮಾಣಿಕತೆಯ ಒಂದು ಪಾಠವಾಗಿ ಪರಿಣಮಿಸುವದೆ ?

ಫ್ರಾನ್ಸದ ರಾಜ್ಯಘಟನೆ

ಫ್ರಾನ್ಸದ ಹಿಂದಿನ ರಾಜ್ಯಘಟನೆಯನ್ವಯ ಇದ್ದ ಸಿನೇಟ ಮತ್ತು ಪ್ರತಿನಿಧಿ ಸಭೆಯೆಂಬೆರಡು ಶಾಸನ ಸಭೆಗಳನ್ನು ಕಿತ್ತುಹಾಕಿ ಒಂದೇ ಶಾಸನ ಸಭೆ ಮತ್ತು ಆ ಸಭೆಯೆ ಆರಿಸಿದ ರಾಷ್ಟ್ರಾಧ್ಯಕ್ಷ ಹಾಗು ಮುಖ್ಯಮಂತ್ರಿಯಿರುವಂತೆ ಮತ್ತು ಇತರ ಕೆಲ ಬದಲಾವಣೆಗಳನ್ನು ಮಾಡಿ ಹೊಸ ರಾಜ್ಯಘಟನೆಯೊಂದನ್ನು ಸಿದ್ಧಗೊಳಿಸಿ ಘಟನಾಸಮಿತಿ ಆದರ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸಿದಾಗ ಅದು ಈ ಹೊಸ ರಾಜ್ಯಘಟನೆಗೆ ವಿರುದ್ಧವಾಗಿ ಪರಿಣಮಿಸಿತು. ಫ್ರಾನ್ಸದ ಜನತೆ ಎರಡು ಶಾಸನ ಸಭೆಗಳಿರಬೇಕೆಂದೇ ಅಭಿಪ್ರಾಯ ಪಡುವದೆಂದು ಇದರಿಂದ ಆರ್ಥವಾಯಿತು. ಕಮ್ಯುನಿಸ್ಟರ ಮತ್ತು ಸರ್ವಾಧಿಕಾರತ್ವ ಸ್ಥಾಪನೆಯ ಭಯದಿಂದ ಹೀಗಾಗಿದೆಯೆಂದು ಹೇಳಲಾಗಿದೆ.

ಸುದ್ದಿಗಳು

ಕರಾಚಿ ಹತ್ತರದ ಕಾಳಿಕಾ ಮಂದಿರದಲ್ಲಿ ಇಬ್ಬರ ಕೊಲೆಯಾಗಿದೆ ಆ ಸ್ಥಳದಲ್ಲಿ ಕೊಡಲಿಯು ಬಿದ್ದದ್ದು ಸಿಕ್ಕಿರುವದು.

ಲಾಹೋರ ಕಾರ್ಪೊರೇಶನದ ಚುನಾವಣೆಗೆ ಕಾಂಗ್ರೆಸ ಹುರಿಯಾಳುಗಳನ್ನು ನಿಲ್ಲಿಸಿದ್ದು ನಾಲ್ವರು ಅವಿರೋಧ ಆರಿಸಿ ಬಂದಿರುವರು.

ನ್ಯಾ ಬೇವೂರರು ಪಾಟಣಾ ಹಾಯಕೋರ್ಟಿನ ಹೆಚ್ಚಿನ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿದ್ದಾರೆ.

ದರೋಡೆಗಾರರು ಸಿಂಧದ ಹಳ್ಳಿಯಲ್ಲಿ ತಾಂಡೊ ಮಹಮ್ಮದಖಾನನ ಮನೆ ದರೋಡೆ ಮಾಡಿ ೫೫ ಸಾವಿರ ರೂ. ಅಪಹರಿಸಿಕೊಂಡು ಹೋಗಿದ್ದಾರೆ.

ಭಾರತದಲ್ಲಿಯ ಕೂಲಿಕಾರರ ಸಮಸ್ಯೆಯನ್ನು ಕುರಿತು ವಿಚಾರ ಮಾಡುವದಕ್ಕಾಗಿ ಭಾರತದ ಎಲ್ಲ ಪ್ರಾಂತಗಳ ಕೂಲಿಕಾರ ಮಂತ್ರಿಗಳ ಸಭೆಯು ಬೇಗನೆ ಸೇರಲಿದೆ.

AC 53. —8

"ಬರಗಾಲವನ್ನು ತಪ್ಪಿಸಿಕೊಳ್ಳಲು ಎಲ್ಲರೂ ಕೆಲಸ ಮಾಡತಕ್ಕದ್ದು"

—ಶ್ರೀಮತಿ ನಾಯಡು

ಫೆಬ್ರುವರಿ ೧೩ಕ್ಕೆ ಶ್ರೀಮತಿ ನಾಯಡು ಅವರು ಹೈದರಾಬಾದ (ಡೆಕ್ಕನ)ದಲ್ಲಿ ಮಾತನಾಡುತ್ತ, "ಸದ್ಯದ ಪ್ರಸಂಗದಲ್ಲಿ ಬಳಲುವವರಿಗೆ ನೀವು ಮುಂದೆಬಂದು ಸಹಾಯಮಾಡುವಿರೋ ಅಥವಾ ಇಲ್ಲವೋ? ಭಾರತದ ದೆಸೆಯು ಎಲ್ಲರಿಗೂ ಒಂದೇ; ಅದು ಅಭಿನ್ನವಾಗಿದೆ. ಆದ್ದರಿಂದ ಈಗ ಒದಗಿದ ಸಂಕಟ ಸಮಯದಲ್ಲಿ, ದೊಡ್ಡ ಸಂಸ್ಥಾನಗಳನ್ನು ಮತ್ತು ರಾಜ್ಯಗಳನ್ನು ಆಳುವ ಬಲಶಾಲಿಗಳಾದ ರಾಜಕುಮಾರರಾಗಲಿ ಇಲ್ಲವೆ ಗುಡಿಸಲುಗಳಲ್ಲಿ ಬಡವಾಗಿರುವ ಮಕ್ಕಳನ್ನು ಮತ್ತು ಉಪವಾಸದಿಂದ ಸಾಯುವ ಹೆಂಡಂದಿರನ್ನು ರಕ್ಷಣೆಮಾಡುವ ಕೆಲಸದಲ್ಲಿ ತೊಡಗಿದ ಹಸಿದ ಒಕ್ಕಲಿಗರಾಗಲಿ—ಯಾರಾದರೂ ಸಹ ತಮ್ಮ ಕರ್ತವ್ಯವನ್ನು ಮಾಡಲು ತಪ್ಪುವಂತಿಲ್ಲ. ಹಸಿದವರ ಹೊಟ್ಟೆಗಳನ್ನು ತುಂಬುವುದಕ್ಕೆ ನೆರವಾಗುವುದರಲ್ಲಿ ದೊಡ್ಡವರು ಸಣ್ಣವರು ಎಂಬ ಭೇದ ಉಳಿಯಲಾರದು," ಹೀಗೆಂದು ಹೇಳಿದರು.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲ ನೀಯುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶಿದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರದ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶಿದಾ ಕ್ರಮವನ್ನು ಕಡಿಮೆಮಾಡಿದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಹಿಮ್ಮನಸ್ಸಿನಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ.

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ—ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟನೆ

ಕರ್ಮವೀರ
ಹರಿಜನ ಪುರವಣಿ

ಕೆಲ ಪ್ರಶ್ನೆಗಳು

ಲಂಡನ ಗೆಳೆಯನೊಬ್ಬನು ಅಹಿಂಸೆಯ ವ್ಯಾಪಾರವನ್ನು ಕುರಿತು ಏಳು ಪ್ರಶ್ನೆಗಳನ್ನು ಕೇಳಿದ್ದಾನೆ. ಇಂಥ ಪ್ರಶ್ನೆಗಳನ್ನು ಹಿಂದೆ "ಯಂಗ್ ಇಂಡಿಯಾ" ಅಥವಾ "ಹರಿಜನ"ದಲ್ಲಿ ಉತ್ತರಿಸಿದ್ದುಂಟು. [illegible]ರೂ ಒಂದೇ ಲೇಖದಲ್ಲಿ ಅವುಗಳನ್ನು ವಿವರಿಸಿದರೆ ಒಂದು ವೇಳೆ ಅದು ಉಪಯುಕ್ತವಾದರೂ ಆದೀತು.

ಪ್ರಶ್ನೆ ೧— ಮೂಲತಃ ಬಲಪ್ರಯೋಗದ ತಳಹದಿಯ ಮೇಲೆಯೆ ನಿಂತಿರುವ ಆಧುನಿಕ ಸರಕಾರಕ್ಕೆ ಒಳಗಿನ ಮತ್ತು ಹೊರಗಿನ ಅಶಾಂತಿ ಜನಕ ಸತ್ವಗಳನ್ನು ಅಹಿಂಸಾತ್ಮಕ ಪ್ರತಿಭಟನೆಯಿಂದ ಎದುರಿಸಲು ಸಾಧ್ಯವಾದೀತೆ? ಇಲ್ಲವೆ, ಅಹಿಂಸಾತ್ಮಕವಾಗಿ ಪ್ರತಿಭಟಿಸಲು ಅಪೇಕ್ಷಿಸುವವರು ಮೊಟ್ಟಮೊದಲು ಸರಕಾರದ ಅಧಿಕಾರವನ್ನು ಬಿಟ್ಟುಕೊಟ್ಟು ವಿರೋಧಿಯನ್ನು ಪೂರ್ತಿ ವೈಯಕ್ತಿಕವಾಗಿ ಎದುರಿಸುವದು ಅವಶ್ಯವೆ?

ಉತ್ತರ:— ಬಲಾತ್ಕರವನ್ನೇ ತಳಹದಿಯಾಗಿಟ್ಟುಕೊಂಡ ಆಧುನಿಕ ಸರಕಾರವೊಂದು ಅಶಾಂತಿ ಜನಕ ಸತ್ವಗಳನ್ನು—ಅವು ಒಳಗಿನವಿರಲಿ ಹೊರಗಿನವಿರಲಿ—ಅಹಿಂಸೆಯಿಂದ ಪ್ರತಿಭಟಿಸಲಾರದು. ಮನುಷ್ಯನು ಏಕಕಾಲಕ್ಕೆ ದೇವರನ್ನೂ ದೆವ್ವವನ್ನೂ ಆರಾಧಿಸಲಾರ. ಒಂದೇ ಉಸುರಿಗೆ ಶಾಂತನೂ ಉಗ್ರನೂ ಆಗಿರಲಾರ. ಅಹಿಂಸೆಯ ತಳಹದಿಯಾಗುಳ್ಳ ರಾಜ್ಯವನ್ನು ಕಟ್ಟುವದು ಸಾಧ್ಯವಿದೆ, ಅರ್ಥಾತ್, ಸಶಸ್ತ್ರ ಬಲವನ್ನು ಅವಲಂಬಿಸಿರುವ ಇಡಿ ಜಗತ್ತಿನ ಕೂಟವನ್ನು ಅದು ಅಹಿಂಸೆಯಿಂದ ಪ್ರತಿಭಟಿಸಬಲ್ಲದು, ಎಂದು ನನ್ನ ವಾದ. ಅಶೋಕನ ರಾಜ್ಯ ಅಂಥದೆ ಆಗಿತ್ತು. ಆ ಮೇಲ್ಪಂತಿಯನ್ನು ಪುನರಾವರ್ತಿಸುವದು ಸಾಧ್ಯವಿದೆ. ಒಂದು ವೇಳೆ ಅಶೋಕನ ರಾಜ್ಯ ಅಹಿಂಸೆಯ ತಳಹದಿಯುಳ್ಳದ್ದಾಗಿರಲಿಲ್ಲವೆಂಬುದನ್ನು ತೋರಿಸಿಕೊಟ್ಟರೂ ಮೇಲಿನ ಸಿದ್ಧಾಂತ ದುರ್ಬಲವಾಗುವದಿಲ್ಲ. ಅದರ ಸ್ವಂತ ಗುಣದೋಷಗಳನ್ನು ಒರೆದು ನೋಡಿಯೇ ಅದನ್ನು ತೀರ್ಮಾನಿಸಬೇಕಾಗಿದೆ.

ಪ್ರಶ್ನೆ ೨— ಕಾಂಗ್ರೆಸ್ ಸರಕಾರವಾದರೆ ಅಂತರಿಕ ಗಲಭೆಗಳನ್ನಾಗಲಿ ವಿದೇಶದ ಅಭಿಯೋಗವನ್ನಾಗಲಿ ಪೂರ್ಣ ಅಹಿಂಸಾತ್ಮಕ ರೀತಿಯಿಂದ ಎದುರಿಸಬಲ್ಲದೆಂದು ನೀವು ಭಾವಿಸುತ್ತೀರಾ?

ಉತ್ತರ— "ಅಂತರಿಕ ಗಲಭೆಗಳನ್ನಾಗಲಿ ವಿದೇಶದ ಅಭಿಯೋಗವನ್ನಾಗಲಿ" ಅಹಿಂಸಾತ್ಮಕವಾಗಿ ಎದುರಿಸುವದು ಕಾಂಗ್ರೆಸ್ ಸರಕಾರಕ್ಕೆ ಖಂಡಿತ ಸಾಧ್ಯವುಂಟು. ನನ್ನೀ ನಂಬಿಕೆಯಲ್ಲಿ ಕಾಂಗ್ರೆ[illegible]ಭಾಗಿಯಾಗದಿರಬಹುದು. ಕಾಂಗ್ರೆಸ್ಸು ತನ್ನ [illegible]ವನ್ನು ಬದಲಿಸಿದರೆ, ಅದರಿಂದ ಬೇರೇನೂ ಸಿದ್ಧವಾಗದೆ, ಕಾಂಗ್ರೆಸ್ಸಿನ ಈ ವರೆಗಿನ ಅಹಿಂಸೆ ದುರ್ಬಲರ ಅಹಿಂಸೆಯಾಗಿತ್ತೆಂದೂ ಕಾಂಗ್ರೆಸ್ಸಿಗೆ ಸರಕಾರಿ ಅಹಿಂಸೆಯಲ್ಲಿ ನಂಬಿಕೆಯಿಲ್ಲವೆಂದೂ ಮಾತ್ರವೇ ಸಿದ್ಧವಾಗುತ್ತದೆ.

ಪ್ರಶ್ನೆ ೩— ವಿರೋಧಿ ಅಹಿಂಸೆಗೆ ಕಟ್ಟುಬಿದ್ದಿರುವನೆಂಬ ಅರಿವಿನಿಂದ ಎಷ್ಟೋ ವೇಳೆ ತುಂಟನಿಗೆ ಮತ್ತಷ್ಟು ಹುರುಪು ಬರುವದಿಲ್ಲವೆ?

ಉತ್ತರ— ಬಲಹೀನರ ಅಹಿಂಸೆ ಎದುರಾದಾಗ ಮಾತ್ರ ತುಂಟನಿಗೆ ಈ ಅವಕಾಶ ದೊರೆಯುತ್ತದೆ. ಪೂರ್ಣ ಸಜ್ಜಿತನಾದ ಅತಿ ಶೂರ ಸೈನಿಕನಿಗಿಂತಲೂ ಅಥವಾ ಎಂಥ ದೊಡ್ಡ ಸೈನ್ಯಕ್ಕಿಂತಲೂ ಬಲಿಷ್ಠರ ಅಹಿಂಸೆ ಯಾವಾಗಲೂ ಬಲವತ್ತರವಾಗಿದೆ.

ಪ್ರಶ್ನೆ— ಹಿಂದೀ ಜನರಲ್ಲಿ ಒಂದು ಗುಂಪು ಖಡ್ಗಬಲದಿಂದ ಯಾವುದೊಂದು ಸ್ವಾರ್ಥಪರ ಕ್ರಮವನ್ನು ಜಾರಿಗೆ ತರಲು ಹವಣಿಸುವದೆಂದೂ ಆ ಕ್ರಮ ಇತರರಿಗೆ ಒಗ್ಗದುದು ಮಾತ್ರವಲ್ಲ ಮೂಲತಃ ನ್ಯಾಯಬಾಹಿರವಾದುದು ಎಂದೂ ಭಾವಿಸೋಣ. ಅಂಥ ಸಂದರ್ಭದಲ್ಲಿ ನೀವು ಯಾವ ದಾರಿ ಸೂಚಿಸುವಿರಿ? ಅಂಥ ಸಂದರ್ಭದಲ್ಲಿ ಅಧಿಕಾರೇತರ ಸಂಸ್ಥೆಯೊಂದಕ್ಕೆ ಅಹಿಂಸಾತ್ಮಕ ಪ್ರತೀಕಾರ ಕೈಕೊಳ್ಳುವದು ಸುಲಭವಿದ್ದೀತು. ಆದರೆ ತಾತ್ಕಾಲೀನ ಸರಕಾರಕ್ಕೂ ಹಾಗೆ ಮಾಡುವದು ಸಾಧ್ಯವೆ?

ಉತ್ತರ— ಈ ಪ್ರಶ್ನೆಯಲ್ಲಿ ಅನುಮಾನಿಸಲಾದ ಸಂದರ್ಭ ಅಸಂಭವವೇ ಸರಿ. ಅಹಿಂಸಾತ್ಮಕ ಸರಕಾರವೆಂದಮೇಲೆ ಅದು ತಿಳಿವಳಿಕೆಯುಳ್ಳ ಜನರ ಇಚ್ಛೆಯ ವಿಶಾಲ ತಳಹದಿಯ ಮೇಲೆ ನಿಂತಿರಬೇಕಾಗುತ್ತದೆ. ಆ ಜನರು ತಮ್ಮ ಇಚ್ಛೆಯೇನೆಂದು ಚೆನ್ನಾಗಿ ಅರಿತು ಅವಕ್ಕೆ ಸರಿಯಾಗಿ ವರ್ತಿಸಬಲ್ಲವರೇ ಇರುವರು. ಇಂಥ ರಾಜ್ಯದಲ್ಲಿ ಮೇಲೆ ಅನುಮಾನಿಸಲ್ಪಟ್ಟಂಥ ಗುಂಪು ಉಪೇಕ್ಷಣೀಯವೆನಿಸುವಷ್ಟು ಚಿಕ್ಕದಿದ್ದೀತು. ಪ್ರಚಂಡ ಬಹುಮತದ ಇಚ್ಛೆಯ ಪ್ರತೀಕವಾಗಿರುವ ಸರಕಾರದ ವಿರುದ್ಧ ಈ ತುಚ್ಛ ಗುಂಪು ನಿಲ್ಲಲಾರದು. ತತ್ಕಾಲೀನ ಸರಕಾರ ಜನತೆಗಿಂತ ಹೊರಗಿನದೇನೂ ಅಲ್ಲ. ಅದು ಪ್ರಚಂಡ ಬಹುಮತದ ಇಚ್ಛೆಯ ಪ್ರತೀಕವಾಗಿರುವದು. ಆ ಇಚ್ಛೆ ಅಹಿಂಸಾತ್ಮಕವಾಗಿ ವ್ಯಕ್ತವಾಗಿರುವುದು ನಿಜವಾದರೆ ಅದು ನೂರಕ್ಕೆ ೫೧ ರ ಬಹುಮತವಾಗಿರಲಾರದು. ೧೦೦ ಕ್ಕೆ ೯೯ ರ ಬಹುಮತವಾಗಿರಬೇಕಾಗುವದು.

ಪ್ರಶ್ನೆ ೫— ಸೇನಾಶಕ್ತಿಯಲ್ಲಿ ಪ್ರಬಲರಾಗಿರುವವರ ಅಹಿಂಸಾತ್ಮಕ ಪ್ರತಿಭಟನೆಯೇ ಅದರಲ್ಲಿ ದುರ್ಬಲರಾಗಿರುವವರದಕಿಂತ ಹೆಚ್ಚು ಪರಿಣಾಮಕಾರಿಯಾಗಬಹುದಲ್ಲವೆ?

ಉತ್ತರ— ಇದು ಪೂರ್ವಾಪರ ವಿರುದ್ಧವಾದ ಹೇಳಿಕೆ. ಸೈನ್ಯಶಕ್ತಿಯಲ್ಲಿ ಬಲಿಷ್ಠರಾಗಿರುವವರು ಅಹಿಂಸಾತ್ಮಕ ಪ್ರತಿಭಟನೆ ಮಾಡುವದೆಂಬುದೇ ಇರಲಾರದು. ಹೀಗೆ, ರಶಿಯಾ ಅಹಿಂಸೆಯನ್ನು ವ್ಯಕ್ತಗೊಳಿಸಬೇಕಾದರೆ ಹಿಂಸೆಮಾಡುವ ತನ್ನ ಸಮಸ್ತ ಶಕ್ತಿಯನ್ನೂ ತ್ಯಜಿಸಿಬಿಡಬೇಕಾಗುವದು. ಆದರೆ ಇಷ್ಟು ಮಾತ್ರ ಸತ್ಯ- ಒಂದುಕಾಲದಲ್ಲಿ ಸಶಸ್ತ್ರ ಶಕ್ತಿಯಲ್ಲಿ ಪ್ರಬಲರಾಗಿದ್ದವರು ಮುಂದೆ ಮನಸು ಬದಲಿಸಿದ್ದರೆ, ಅವರು ಜಗತ್ತಿಗೆ, ಅಂತಲೇ ತಮ್ಮ ವಿರೋಧಿಗಳಿಗೆ, ತಮ್ಮ ಅಹಿಂಸೆಯ ಶಕ್ತಿಯನ್ನು ಹೆಚ್ಚು ಚನ್ನಾಗಿ ಪ್ರದರ್ಶಿಸಬಲ್ಲರು. ಅಹಿಂಸೆಯಲ್ಲಿ ಬಲಿಷ್ಠರಾದವರು, ತಮ್ಮ ಎದುರಾಳಿಗಳು ಸೈನಿಕ ಬಲದಲ್ಲಿ ದುರ್ಬಲರೋ ಬಲಿಷ್ಠರೋ ಎಂದು ಚಿಂತಿಸುವುದೇ ಇಲ್ಲ

ಪ್ರಶ್ನೆ ೬— ಅಹಿಂಸಾತ್ಮಕಸೈನ್ಯಕ್ಕೆ ಯಾವ ಬಗೆಯ ತರಬೇತಿ, ಯಾವ ಬಗೆಯ ಶಿಸ್ತು ಇರಬೇಕು? ಸಾಂಪ್ರದಾಯಿಕ ಸೈನಿಕ ತರಬೇತಿಯ ಕೆಲವೊಂದು ಅಂಗಗಳು ಆ ಶಿಕ್ಷಣ ಪದ್ಧತಿಯಲ್ಲಿಯೂ ಸೇರಿರಬಾರದೇ?

ಉತ್ತರ— ಪ್ರಾಥಮಿಕ ತರಬೇತಿಯ ಒಂದು ಬಹಳ ಸ್ವಲ್ಪ ಅಂಶ ಮಾತ್ರ ಸಶಸ್ತ್ರ ಸೈನ್ಯಕ್ಕೂ ಅಹಿಂಸಾ ಸೈನ್ಯಕ್ಕೂ ಸಮಾನವಾಗಿರುವದು. ಅದೇನಂದರೆ ಶಿಸ್ತು, ಕವಾಯತ್ತು, ಸಾಮೂಹಿಕ ಹಾಡಿಕೆ, ಧ್ವಜಾರೋಹಣ, ಸಂಕೇತ(ಸಿಗ್ನಲಿಂಗ್) ಮೊದಲಾದವುಗಳು. ಇದು ಕೂಡ ಸರ್ವಥಾ ಅವಶ್ಯಕವೆಂದಲ್ಲ. ಏಕೆಂದರೆ ಇವೆರಡರ ತಳಹದಿಯೇ ಬೇರೆ ಬೇರೆ. ದೇವರಲ್ಲಿ ಅಚಲವಿಶ್ವಾಸ, ಅಹಿಂಸಕ ಸೇನೆಯ ನಾಯಕನಿಗೆ ಇಚ್ಛಾಪೂರ್ವಕ ಹಾಗು ಪೂರ್ಣ ವಿಧೇಯತೆ ಮತ್ತು ಸೇನೆಯ ಪಥಕಗಳಲ್ಲಿ ಪರಿಪೂರ್ಣ ಅಂತರಿಕ ಮತ್ತು ಬಾಹ್ಯ ಸಹಕಾರ, ಇವೇ ಅಹಿಂಸಕ ಸೈನ್ಯಕ್ಕೆ ಬೇಕಾದ ಅನಿವಾರ್ಯವಾದ ತರಬೇತಿ.

ಪ್ರಶ್ನೆ ೭— ಹಿಂದುಸ್ತಾನ ಇಂಗ್ಲಂಡುಗಳಂಥ ದೇಶಗಳು ಸದ್ಯ ಪರಿಸ್ಥಿತಿಯಲ್ಲಿ ಸಶಸ್ತ್ರ ಕ್ರಮವನ್ನು ಕೈಕೊಳ್ಳುವ ಮೊದಲು ಅಹಿಂಸಾತ್ಮಕ ಪ್ರತಿಭಟನೆಯನ್ನು ಪ್ರಯೋಗಿಸಿ ಪರೀಕ್ಷಿಸಿ ನೋಡುವ ನಿರ್ಧಾರ ಮಾಡಿಕೊಂಡರೂ ಅದೇ ಸಮಯದಲ್ಲಿ ಪೂರ್ಣ ಸಶಸ್ತ್ರ ಸಿದ್ಧತೆಯನ್ನಿಟ್ಟುಕೊಳ್ಳುವದು ಒಳಿತಲ್ಲವೆ?

ಉತ್ತರ— ಈ ಹಿಂದಿನ ಉತ್ತರಗಳಿಂದ ಹಿಂದುಸ್ತಾನ, ಇಂಗ್ಲಂಡಗಳು ಪೂರ್ಣ ಸಶಸ್ತ್ರ ಸಿದ್ಧತೆಯನ್ನಿಟ್ಟಿರುವಷ್ಟು ಕಾಲ ಅಹಿಂಸಕ ಪ್ರತಿಭಟನೆಯನ್ನು ಪ್ರಯೋಗಿಸಿ ಯೋಗ್ಯ ಪರೀಕ್ಷೆ ಮಾಡುವದು ಎಂದೆಂದೂ ಸಾಧ್ಯವೇ ಇಲ್ಲವೆಂಬದು ನಿಚ್ಚಳವಾಗಿರಬೇಕು. ವಿವಾದಾತ್ಮಕ ಪ್ರಶ್ನೆಗಳನ್ನು ಶಾಂತಿಯಿಂದಲೇ ಬಗೆಹರಿಸಿಕೊಳ್ಳಲು ಎಲ್ಲ ಸಶಸ್ತ್ರ ದೇಶಗಳೂ ಸಂಧಾನ ಸಾಗಿಸುವವೆಂಬುದು ಸತ್ಯ. ಆದರೆ ನಾವಿಲ್ಲಿ ಚರ್ಚಿಸುತ್ತಿರುವದು ಯುದ್ಧದ ಉಪಾಯಕ್ಕೆ ಕೈಯಿಕ್ಕುವ ಮುನ್ನ ಸಾಗಿಸುವ ಪ್ರಾಥಮಿಕ ಸಂಧಾನಗಳನ್ನಲ್ಲ. ನಾವು ಚರ್ಚಿಸುತಿರುವದು ಯುದ್ಧವೆಂದು ಕರೆಯಲ್ಪಡುವ ಸಾಮೂಹಿಕ ಹೋರಾಟದ—ನೆಟ್ಟಗೆ ಹೇಳಬೇಕಾದರೆ ಸಾಮೂಹಿಕ ಕೊಲೆಯ— ಬದಲು ಬೇರೊಂದು ಶಾಶ್ವತ ಉಪಾಯವನ್ನು ಕಂಡು ಹಿಡಿಯುವ ವಿಚಾರ.

ಸಿಮಲಾ — ಮೋ. ಕ. ಗಾಂಧಿ

೨-೫-೪೬

ಟೀಕೆ — ಟಿಪ್ಪಣಿಗಳು

ದಿವಂಗತ ಭೂಲಾಭಾಯಿ ದೇಸಾಯಿ

ಶ್ರೀ ಭೂಲಾಭಾಯಿ ದೇಸಾಯರಂಥ ಜನರನ್ನು ಸಾರ್ವಜನಿಕ ಜೀವನ ರಂಗಕ್ಕೆ ತಂದುದು ಬಾರ್ಡೋಲಿಯ ಶೌರ್ಯ, ಯಾತನೆಗಳೇ. ಇಲ್ಲದಿದ್ದರೆ ಅವರು ಸುಪ್ರಸಿದ್ಧ ಸರಕಾರಿ ನೌಕರರಾಗಿಯೆ ಉಳಿದು ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರಾಗಿ ತಮ್ಮ ಚರಿತ್ರವನ್ನು ಮುಗಿಸುತಿದ್ದರು. ಅವರ ನ್ಯಾಯಶಾಸ್ತ್ರ ಕೌಶಲದ ಪರಿಣಾಮವಾಗಿ ಅಝಾದ ಹಿಂದ ಸೇನೆಯ ಬಂದಿಗಳ ಬಿಡುಗಡೆಯಾದಾಗ ಅವರು ಕೀರ್ತಿ ಶಿಖರವನ್ನು ಮುಟ್ಟಿದರು. ಅವರ ಮಗ-ಸೊಸೆಯರ ದುಃಖದಲ್ಲಿ ಇನ್ನೂ ಅನೇಕರಂತೆ ನಾನೂ ಸಹಭಾಗಿಯಾಗಿದ್ದೇನೆ. ದಿವಂಗತರಲ್ಲಿದ್ದ ದೇಶಸೇವಾಕಾಂಕ್ಷೆಯನ್ನು ತಮ್ಮಲ್ಲಿ ಅವಾಹಿಸಿಕೊಂಡು ಅವರು ತಮ್ಮ ದುಃಖವನ್ನು ಅನಂದವನ್ನಾಗಿ ಮಾರ್ಪಡಿಸಿಕೊಳ್ಳುವರೆಂದು ಆಶಿಸಲಾಗಿದೆ. ಅದೊಂದೇ ಜೀವನವನ್ನು ಸಾರ್ಥಕವಾಗಿ ಮಾಡಬಲ್ಲದು.

ಸಿಮಲಾ — ಮೋ. ಕ. ಗಾಂಧಿ

೬—೫—೪೬

ಶ್ರೀಮಂತರ ಔದಾರ್ಯ

ಈ ಕೆಳಗಿನದು ಗೆಳೆಯನೊಬ್ಬನು ಬರೆದುದರ ಸಾರಾಂಶ:—

"ನೀವು ಶ್ರೀಮಂತರಿಂದ ಎಷ್ಟೋ ಕಾಣಿಕೆಗಳನ್ನು ಸ್ವೀಕರಿಸುತ್ತೀರಿ. ಆ ಹಣದ ವೆಚ್ಚ ಸರಿಯಾಗಿಯೇ ಆಗುತ್ತದೆಂಬಲ್ಲಿ ಸಂದೇಹವಿರಲಾರದು. ಆದರೆ ನಿಮ್ಮ ಕಾರ್ಯಗಳಿಗಾಗಿ ಈ ಕಾಣಿಕೆಗಳನ್ನು ಸ್ವೀಕರಿಸುವದು ಸರಿಯೇ ಎಂಬುದೀಗ ಪ್ರಶ್ನೆ. ಆ ದಾನಿಗಳು ಆ ಮೂಲಕ ಹೆಸರುವಾಸಿಯಾಗುವದು ಖಂಡಿತ. ಅವರಲ್ಲಿ ಹಲವರು ಕಳ್ಳಪೇಟೆಗಾರರೂ ಇರಬಹುದು. ಅಂಥ ದಾನದಿಂದ ಬಡವರ ಹಿತವಾದೀತೆ?"

ಈ ಪ್ರಶ್ನೆಯನ್ನು ಒರೆದು ನೋಡಿದರೆ ಕಾಣಿಕೆಗಳೆಂಬುವೇ ಅಯೋಗ್ಯವಲ್ಲವೇ ಎಂಬ ತಿರುಳು ಹೊರಡುತ್ತದೆ. ಅವು ಅಂಥವೆಂಬಲ್ಲಿ ನನಗೇನೂ ಸಂದೇಹವಿಲ್ಲ. ಆದರೆ ಜಗತ್ತಿನ ನಡೆವಳಿ ಬೇರೆಯೆ ಬಗೆಯಾದುದು. ಗೀತೆಯ ಕರ್ತೃವಿನ ಹೇಳಿಕೆಯಂತೆ ಎಲ್ಲ ಕರ್ಮಗಳೂ ಸದೋಷವಾದವುಗಳೆ. ಅದುದರಿಂದ ಎಲ್ಲ ಕ್ರಿಯೆಗಳೂ ಪೂರ್ಣ ಅನಾಸಕ್ತಿಯಿಂದ ಮಾಡಲ್ಪಡಬೇಕು. ಈಶೋಪನಿಷತ್ತು ಪ್ರಾರಂಭದಲ್ಲಿಯೇ ಸರ್ವಸ್ವವನ್ನೂ ಈಶನಿಗೆ ಅರ್ಪಿಸಿಯೇ ಕರ್ಮವನ್ನು ಮಾಡಬೇಕೆಂದು ಹೇಳುತ್ತದೆ. ಅದಿರಲಿ, ಎಲ್ಲರೂ ದಾನ ಸ್ವೀಕರಿಸುವುದನ್ನು ಬಿಟ್ಟುಬಿಟ್ಟರೂ ಶ್ರೀಮಂತರು ಧನಸಂಗ್ರಹ ಮಾಡುವದನ್ನೇನೂ ಬಿಡಲಾರರಷ್ಟೇ? ಮಾತ್ರವಲ್ಲ, ಎಂದೆಂದೂ ಏನೂ ದಾನ ಮಾಡಲೊಲ್ಲದ ಕೆಲ ಶ್ರೀಮಂತರೂ ಇರುವರೆಂಬುದೂ ನಿಜ. ಇನ್ನು ಕೆಲವರು ದುಷ್ಟ ಉದ್ದೇಶಗಳಿಗಾಗಿ ಹಣ ಕೊಡುವುದೂ ಇದೆ. ಅದುಪರಿಂದ, ದಾನ ಪರಿಗ್ರಹಣ ಮಾಡುವಾಗ ಕೆಲವೊಂದು ತತ್ವಗಳನ್ನಿಟ್ಟುಕೊಳ್ಳಬೇಕೆಂದು ಮಾತ್ರ ನಾವು ಹೇಳಬಹುದಾಗಿದೆ. ಸ್ವಾರ್ಥಕ್ಕಾಗಿ ಒಂದೇ ಒಂದು ಕಾಸು ಪರಿಗ್ರಹಿಸತಕ್ಕದ್ದಲ್ಲ ಮತ್ತು ಎಲ್ಲವನ್ನೂ ಪರಮಾತ್ಮ ಸಾಕ್ಷಿಯಾಗಿ ಕೈಕೊಳ್ಳಬೇಕು.

ಆದರೂ ದಾನಪಾತ್ರನು ಯಾರನ್ನು ಅಯೋಗ್ಯರೆಂದು ಭಾವಿಸುವನೋ ಅವರಿಂದ ದಾನವನ್ನು ಅಂಗೀಕರಿಸುವದು ಸರಿಯಲ್ಲವೆಂದು ನಾನು ಒಪ್ಪುತ್ತೇನೆ. ಆದರೆ ಈ ಚರ್ಚೆಯೆಲ್ಲ ಅತ್ಮಸಾಕ್ಷಿಯಿಂದ ಪೀಡಿತರಾದವರಿಗೆ ಮಾತ್ರ ಅನ್ವಯಿಸುತ್ತದೆಂಬುದು ನಿಚ್ಚಳವಾಗಿದೆ.

ಸಿಮಲಾ — ಮೋ. ಕ. ಗಾಂಧಿ

೫-೫-೪೬ (ಹರಿಜನಬಂಧುವಿನಿಂದ)

ರಾಮನವಮಿ ಉತ್ಸವ

"ಅವರು ಅಸಾಧ್ಯ ವೆಚ್ಚ ಮಾಡಿ ದಕ್ಷಿಣದಿಂದ ಅತ್ಯುತ್ತಮ ಕಲಾವತಿಯರನ್ನು ಬರಿ ಮನೋರಂಜನೆಗಾಗಿ ಕರೆಸುತ್ತಾರೆ. ಉತ್ಸವದ ಅಧ್ವರ್ಯುಗಳಾದ ಕಲಾಭಿಜ್ಞರ ನೈತಿಕತೆ ಸಂಶಯಾಸ್ಪದವಾಗಿರುತ್ತದೆ. ಇಷ್ಟೆಲ್ಲ ಜರುಗುವುದು ಧಾರ್ಮಿಕ ಉತ್ಸವದ ಸಂದರ್ಭದಲ್ಲಿ." ಒಬ್ಬ ಪತ್ರ ಲೇಖಕನ ಕಾಗದದ ಸಾರಾಂಶವಿದು. ಮನುಷ್ಯನು ಅಧೋಗತಿಗಿಳಿಯತೊಡಗಿದನೆಂದರೆ ಅವನ ನೀಚತನ ಎಲ್ಲಿ ಎಲ್ಲೆ ಕಾಣುತ್ತದೆಂದು ಹೇಳುವದು ಕಠಿನ. ಧನಮದ ಎಷ್ಟೋ ವೇಳೆ ಹೆಂಡದ ಮದದಷ್ಟೇ ದುಷ್ಟವಾಗಿರುವದುಂಟು. ಧಾರ್ಮಿಕ ಅಥವಾ ಇನ್ನಾವದೇ ಉತ್ಸವದಲ್ಲಿ ಈ ಬಗೆಯ ನೀಚತನವಾಗುವದನ್ನು ತಡೆಯಬೇಕಾದರೆ ಅಂಥವುಗಳಿಗೆ ಸಾರ್ವಜನಿಕರು ಬೆಂಬಲ ಕೊಡದಿರುವದೊಂದೇ ಉಪಾಯ.

ಸಿಮಲಾ — ಮೋ. ಕ. ಗಾಂಧಿ

೨-೫-೪೬

ಗಾಂಧೀಜಿಯವರು ಈ ರೀತಿ ಪ್ರಕಟನೆ ಹೊರಡಿಸಿದ್ದಾರೆ.

ನನ್ನ ಪರಿವಾರದವರು ಏತಕ್ಕೆ ಹಿಂತಿರುಗುತ್ತಿರುವರೆಂದು ಪತ್ರಿಕಾಪ್ರತಿನಿಧಿಗಳು ನನ್ನನ್ನು ಆಗಲೇ ವಿಚಾರಿಸುತ್ತಿರುವರು. ಇದು ವೈಯಕ್ತಿಕ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕೊಡಬಾರದೆಂದು ನನಗನಿಸುತ್ತದೆ. ಊಹಾಪೋಹ ಮತ್ತು ಪ್ರಚಾರದ ದಿನಗಳಲ್ಲಿ ಇದಕ್ಕೆ ಉತ್ತರ ಕೊಡದೆ ಗತ್ಯಂತರವಿಲ್ಲ. ಪರಿವಾರದವರನ್ನು ಹಿಂದೆ ಕಳಿಸಲು ನಾನು ನಿರ್ಧರಿಸಿದ್ದುದರ ಕಾರಣವು ಕೇವಲ ಆಧ್ಯಾತ್ಮಿಕವೆಂದು ಹೇಳಲಿಕ್ಕೆ ಬಾರದಿದ್ದರೂ ಅದು ನೈತಿಕವೆಂದು ಹೇಳಬಹುದು. ಸದ್ಯಕ್ಕೆ ನಾನು ಬ್ರಿಟಿಶ ಮಂತ್ರಿತ್ರಯರಿಗೆ ಸ್ವಯಂನಿಯುಕ್ತ ಸಲಹೆಗಾರನಂತಿರುವಾಗ ನನ್ನ ಕೆಲಸವು ಅತಿಕಷ್ಟತರದ್ದಿದೆ.

—೮ನೇ ಪುಟ ನೋಡಿರಿ

ಸ್ತ್ರೀಯರ ಆದರ್ಶ

ಅನೇಕ ಸಮಾಜ ಸುಧಾರಕರು ಸ್ತ್ರೀಯರ ಧ್ಯೇಯವನ್ನೇ ತಮ್ಮ ಧ್ಯೇಯವನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಅವರಲ್ಲಿ ಅನೇಕರು ಸ್ತ್ರೀಯರನ್ನು ಗೃಹರಾಣಿಯೆಂದೇ ಬಗೆಯುತ್ತಿದ್ದರು. ಗಂಡನ ಸುಖ-ಸಂತೋಷವನ್ನು ಗಮನಿಸುವದು, ಮಕ್ಕಳ ಆರೈಕೆ ನೋಡಿಕೊಳ್ಳುವದು ಸ್ತ್ರೀಯರ ಕಾರ್ಯಕ್ಷೇತ್ರವೆಂಬ ತಿಳಿವಳಿಕೆಯಿರುತ್ತಿತ್ತು. ದೇಶದಲ್ಲಿ ಪಾಶ್ಚಿಮಾತ್ಯ ಶಿಕ್ಷಣ ಪ್ರಾರಂಭವಾದಾಗಿನಿಂದ ಮಾತ್ರ ಸ್ತ್ರೀಪುರುಷರ ಸಮಾನತೆಯ ಭಾವನೆಗಳು ಹಬ್ಬತೊಡಗಿದವು. ಆದರೆ ಈ ಸಮಾನತೆ ಬರಿ ಹೊರನೋಟದ್ದು, ಕೃತಕವಾದುದು. ಗಾಂಧೀಜಿಯವರು ನಿಜವಾದ ಸಮಾನತೆಯನ್ನು ಒಪ್ಪುವರಲ್ಲದೆ ತಾವೇನು ಹೇಳುವರೋ ಅದನ್ನು ಮಾಡಿತೋರಿಸುತ್ತಾರೆ. ಅವರ ಆಶ್ರಮದಲ್ಲಿ ಸಾರ್ವಜನಿಕ ಅಡಿಗೆಯ ಕೆಲಸವನ್ನು ಹೆಚ್ಚಾಗಿ ಗಂಡಸರಿಗೇ ಒಪ್ಪಿಸುವ ಪರಿಪಾಠ. ಸ್ತ್ರೀಪುರುಷರಿಬ್ಬರೂ ಸಮಾನವಾಗಿ ಮಾಡಬರುವಂಥ ಎಷ್ಟೋ ಕೆಲಸಗಳಿವೆಯೆಂದು ಇದರ ಅರ್ಥ. ಹೆಂಗಸು ಗಂಡಸಿಗೆ ಸಮಾನಳಂತೂ ಆಗಿಯೆ ಇರುವಳು. ಇಷ್ಟೇ ಅಲ್ಲ, ಅವನಿಗಿಂತ ಮೇಲಿನವಳು ಕೂಡ ಆಗಬಲ್ಲಳು. ಮಕ್ಕಳ ಮತ್ತು ಮನೆಯ ಆರೈಕೆ-ಪಾರೈಕೆ ಸ್ತ್ರೀಪುರುಷರಿಬ್ಬರ ಕೂಡು—ಹೊಣೆಯಾಗಿದೆ. ಹೆಂಗಸು ತಾಯಿ ನಿಜ. ಆದರೆ ಅವಳ ತಾಯ್ತನ ತನ್ನ ಮಕ್ಕಳಿಗಷ್ಟೆ ಸೀಮಿತವಾಗಿರದೆ ಅನಿರ್ಬಂಧಿತ ಬಿತ್ತರವಾಗಿ ಹಬ್ಬಿರಬೇಕು. ಅದಕಾಗಿಯೇ ಅವಳ ಕಾರ್ಯಕ್ಷೇತ್ರ ತನ್ನ ಮನೆಯ ಹೊರಗೂ ವಿಸ್ತರಿಸಬೇಕು.

ಮೊನ್ನಿನ ಬಂಗಾಲ ಸಂಚಾರದ ಸಮಯ ಕಾರ್ಯಕರ್ತರ ಸಭೆಯೊಂದರಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಗಾಂಧೀಜಿ ಹೇಳಿದ್ದು, ಯಾವ ಹೆಂಗಸು ತನ್ನ ಮಕ್ಕಳನ್ನು ಮಾತೃಭೂಮಿಯ ಸೇವೆಗಾಗಿ ಸರಿಯಾದ ರೀತಿಯಿಂದ ಸಿದ್ಧಗೊಳಿಸುತ್ತಿರುವಳೋ ಆಕೆ ಅದಕ್ಕಿಂತ ಹೆಚ್ಚಿನದೇನನ್ನೂ ಮಾಡಬೇಕಾಗಿಲ್ಲ, ಎಂದು. ಮನೆಯನ್ನು ನೋಡಿಕೊಳ್ಳುವದು, ಮಕ್ಕಳುಮರಿಗಳ ಆರೈಕೆ ಮಾಡುವದು ಇವೇ ಸ್ತ್ರೀಯರ ಏಕಮಾತ್ರ ಕರ್ತವ್ಯವೆಂಬ ಜನರಲ್ಲಿಯ ಪ್ರಚಲಿತ ಅಭಿಪ್ರಾಯವನ್ನೇ ಗಾಂಧೀಜಿ ಈ ಮೂಲಕ ಸಮರ್ಥಿಸಿದಂತಾಯಿತೆಂದು ಒಬ್ಬ ಗೆಳೆಯ ಇದಕ್ಕೆ ಅರ್ಥ ಮಾಡಿದ. ಇದನ್ನು ಕೇಳಿ ಗಾಂಧೀಜಿ ನಕ್ಕುಬಿಟ್ಟರು. ಹೇಳಿದರು: "ಇಂಥ ಮಾತುಗಳಲ್ಲಿ ಜನರು ಯಾವಾಗಲೂ ತಮ್ಮ ಅಭಿಮತಕ್ಕೆ ಹೊಂದುವ ಅರ್ಥವನ್ನೆ ಕಂಡುಕೊಳ್ಳುತ್ತಾರೆ. ಯಾವ ಸ್ತ್ರೀಪುರುಷರು ವಿಷಯ ಭೋಗದಲ್ಲಿ ಮುಳುಗಿರುವರೋ ಅವರು ತಮ್ಮ ಮಕ್ಕಳನ್ನು ತಾಯ್ನಾಡಿನ ಸೇವೆಗಾಗಿ ಸಿದ್ಧಗೊಳಿಸಲೇ ಆರರು. ಸಂಯಮದ ನಿಯಮಗಳನ್ನು ಪಾಲಿಸುತ್ತ ಬಾಳುವೆ ಸಾಗಿಸುವವರೇ ಈ ಕಾರ್ಯ ಸಾಧಿಸಬಲ್ಲರು. ಅಂಥವರಿಗೆ ಮನೆಯ ಹೊರಗಿನ ಕೆಲಸಗಳಲ್ಲಿ ತಮ್ಮ ಸೇವೆಯನ್ನು ನೀಡಲು ಹೊತ್ತೂ ಸಿಗುತ್ತದೆ."

ಕೃತ್ರಿಮ ಸಾಧನಗಳಿಂದ ಸಂತತಿ ನಿಯಮನ ಮಾಡುವ ವಿರುದ್ಧ ಗಾಂಧೀಜಿಯ ಅಭಿಪ್ರಾಯ ಬಹಳ ನಿಷ್ಠುರವಾಗಿದೆ. ಅವರೆನ್ನುತ್ತಾರೆ: "ಸಂತತಿ ನಿಯಮನಕ್ಕಾಗಿ ಕೃತ್ರಿಮ ಸಾಧನಗಳನ್ನು ಬಳಸುವದು ಸ್ತ್ರೀತ್ವಕ್ಕೆ ಅವಮಾನಕರವಾದುದು. ವೇಶ್ಯೆಗೂ ಕೃತ್ರಿಮೋಪಾಯಗಳಿಂದ ಸಂತಾನ ನಿರೋಧ ಮಾಡುವ ಗರತಿಗೂ ಇರುವ ಭೇದವಿಷ್ಟೆ: ಮೊದಲನೆಯವಳು ಅನೇಕ ಪುರುಷರಿಗೆ ತನ್ನ ದೇಹವನ್ನು ಮಾರುತ್ತಿದ್ದರೆ ಎರಡನೆಯವಳು ಒಬ್ಬನಿಗೇ ಮಾರುವಳು. ಎಲ್ಲಿಯವರೆಗೆ ಹೆಂಡತಿಗೆ ಸಂತಾನೇಚ್ಛೆಯಿಲ್ಲವೊ ಅವರೆಗೆ ಅವಳ ಮೇಲೆ ಕೈಮಾಡುವ ಅಧಿಕಾರ ಗಂಡನಿಗಿಲ್ಲ. ಸ್ತ್ರೀಯಾದರೂ ತನ್ನ ಪತಿಯ ಇಚ್ಛೆಗೆ ಕಟ್ಟುಬೀಳದಿರುವಷ್ಟು ದೃಢಸಂಕಲ್ಪವುಳ್ಳವಳಾಗಿರಬೇಕು."

ಮೊನ್ನಿನ ಮದ್ರಾಸ ಯಾತ್ರೆಯ ಸಮಯ ಸ್ತ್ರೀಯರ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಅವರು ಹೇಳಿದ್ದು: "ರಾವಣನಂಥ ಸಮರ್ಥ ಪುರುಷನನ್ನೂ ಸೋಲೊಪ್ಪಿಕೊಳ್ಳುವಂತೆ ಮಾಡಿದ ಸೀತಾದೇವಿಯ ಆ ಪಾವಿತ್ರ್ಯತೇಜ ಸ್ತ್ರೀಯರಲ್ಲಿ ಹೊಳೆಯಬೇಕೆಂದು ನಾನು ಆಶಿಸುತ್ತೇನೆ. ನಿಮ್ಮ ಇಂಥ ತೇಜಸ್ಸು ಇದ್ದರೆ ಹಿಂದುಸ್ತಾನದಲ್ಲಿ ನಿಮ್ಮದೇ ಸಾಮ್ರಾಜ್ಯ ನಡೆದೀತು. ನೀವು ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡಬಲ್ಲಿರಿ. ನೀವು ಬರಿ ಕಸ್ತೂರಬಾ ನಿಧಿಯ ಕಾರ್ಯವೊಂದನ್ನೆ ಸಾಗಿಸಬೇಕೆಂದಲ್ಲ, ರಾಷ್ಟ್ರದ ಬೇರೆ ಎಲ್ಲ ಕೆಲಸಗಳಲ್ಲಿಯೂ ಹೆಚ್ಚು ಹೆಚ್ಚು ಭಾಗ ವಹಿಸಬೇಕೆಂದು ನನ್ನ ಅಪೇಕ್ಷೆ. ಹಿಂದುಸ್ತಾನದ ಕೋಟಿ ಕೋಟಿ ಭಗಿನಿಯರು ಚರಕ ತಿರುಗಿಸತೊಡಗುವ, ತಮ್ಮ ಹೃದಯಗಳಿಂದ ಅಸ್ಪೃಶ್ಯತೆ ಜಾತಿಭೇದ ಮೊದಲಾದವುಗಳನ್ನು ಬೇರು ಸಹಿತ ಕಿತ್ತೊಗೆಯುವ ಮತ್ತು ಹಿಂದುಸ್ತಾನಿಯನ್ನು ಆಡತೊಡಗುವ ದಿನವನ್ನು ನಾನು ಆತುರದಿಂದ ಎದುರು ನೋಡುತ್ತಿರುವೆ."

ಹೆಂಗಸು ಅಹಿಂಸೆಯ ಮೂರ್ತಿ. ಮುಂಬಯಿಯಲ್ಲಿ ಕಾಯದೆ ಆಝಮ ಜಿನ್ನಾರೊಡನೆ ಗಾಂಧೀಜಿ ಮಾತುಕತೆ ನಡೆಸುತಿದ್ದ ದಿನಗಳಲ್ಲಿ, ಕೆಲ ಜೈನ ಸಾಧ್ವಿಯರೊಡನೆ ಸಂವಾದ ಮಾಡುತ್ತ ಅವರು ಹೀಗೆ ಹೇಳಿದ್ದರು. "ಸ್ವಭಾವದಿಂದಲೇ ಹೆಂಗಸರು ಬಹಳ ಸಹನಶೀಲರು. ಇದೇ ಕಾರಣದಿಂದ ಅವರಿಗೆ ಅಹಿಂಸೆ ಬಹಳ ಸುಗಮವಾಗಿ ಸಾಧಿಸುತ್ತದೆ. ನೀವು ಜೈನ ಭಗಿನಿಯರು. ನಾನು ನಿಮ್ಮಲ್ಲಿ ಬಹಳ ಹಿರಿದಾದ ಆಶೆಯನ್ನು ಇಟ್ಟಿದ್ದೇನೆ."

ಗಾಂಧೀಜಿ ಆಗಾಗ್ಗೆ ಹೇಳುವದುಂಟು. "ನಾನು ಹೆಂಗಸು," ಎಂದು. ಮನುಷ್ಯನು ಅಹಿಂಸೆಯನ್ನು ಅರಗಿಸಿಕೊಂಡು ಅದರ ಬಲದಿಂದ ಸಾಗತೊಡಗಿದಾಗ ಅವನು ಸ್ತ್ರೀತ್ವಕ್ಕೆ ಬಹಳ ಸಮೀಪನಾಗುತ್ತಾನೆಂದು ಗಾಂಧೀಜಿಯ ಸ್ವಂತ ಅಭಿಮತ. ಹಿಂಸೆಗಿಂತ ಅಹಿಂಸೆಯನ್ನು ಬಳಸಲು ಹೆಚ್ಚು ಧೈರ್ಯ ಬೇಕಾಗುವದು. ಏಕೆಂದರೆ, ಹಿಂಸೆಗೆ ದೈಹಿಕ ಶಕ್ತಿ ಮತ್ತು ಪಶುಬಲ ಮಾತ್ರ ಸಾಲುತ್ತದೆ. ಈ ಪ್ರಕಾರ ಸ್ತ್ರೀ ಸ್ವಭಾವದ ಸಾಮೀಪ್ಯಕ್ಕೆ ತಗಲಪುವದು ಉಚ್ಚ ಶ್ರೇಣಿಯ ಮಾನವತೆಯ ಲಕ್ಷಣವೇ ಸರಿ.

ಕಸ್ತೂರಬಾ ನಿಧಿಯ ಪರವಾಗಿ ಭಗಿನಿಯರಿಗೆ ಶಿಕ್ಷಣ ಕೊಡಲು ಬೋರಿವಲಿಯಲ್ಲಿ ತೆರೆಯಲ್ಪಟ್ಟ ಶಿಬಿರದಲ್ಲಿ ಭಗಿನಿಯರ ಮುಂದೆ ಮಾತನಾಡುತ್ತ ಗಾಂಧೀಜಿ ಹೀಗೆ ಹೇಳಿದ್ದರು: "ಸ್ತ್ರೀಯರು ಪುರುಷರಿಗೆ ಸರಿದೊರೆಯಾಗುವುದನ್ನು, ಮಾತ್ರವಲ್ಲ, ಅವರಿಗಿಂತಲೂ ಉತ್ತಮರಾಗುವದನ್ನು ನೋಡಲು ನಾನು ಬಯಸುತ್ತೇನೆ. ಹೊಣೆಗಾರಿಕೆಯ ಎಲ್ಲ ಸ್ಥಳಗಳನ್ನೂ ನೀವೇ ನಿರ್ವಹಿಸಬೇಕೆಂದು ನನ್ನಿಚ್ಛೆ. ಆದರೆ ಯೋಗ್ಯತೆಯಿಲ್ಲದ ನೀವು ಆ ಸ್ಥಾನಗಳಲ್ಲಿ ಹೋಗಿ ಕೂಡಬೇಕೆಂದು ನನ್ನ ಅಭಿಪ್ರಾಯವಲ್ಲ. ಒಟ್ಟಿನ ಮೇಲೆ ನೀವು ಪುರುಷರಿಗಿಂತಲೂ ಹೆಚ್ಚು ಶಕ್ತಿಶಾಲಿನಿಯರೆಂದು ಸಿದ್ಧಗೊಳಿಸಿರೆಂದು ನಾನು ಬಯಸುವೆ.

"ಸಮಾನತೆಯೆಂದರೆ ನೀವು ಪುರುಷರ ಕೆಟ್ಟ ಚಾಳಿಗಳನ್ನೂ ಅನುಕರಿಸಬೇಕೆಂದು ಅರ್ಥವಲ್ಲ ಉದಾಹರಣೆಗಾಗಿ ಬೀಡಿ ಸೇದುವದೂ ಸಾರಾಯಿ ಕುಡಿಯುವದೂ ಗಂಡಸರಲ್ಲಿ ಸಾಧಾರಣ ಚಟವಾಗಿ ಹೋಗಿದೆ. ನೀವು ಆ ಕೀಳುಮಟ್ಟಕ್ಕಿಳಿಯಬಾರದು. ನೀವು ನಿಮ್ಮ ಪಾವಿತ್ರ್ಯ, ತ್ಯಾಗ, ನಿಃಸ್ವಾರ್ಥ ಸೇವೆಗಳಿಂದ ಪುರುಷರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕಾಗಿದೆ."

ಹೊಸದಿಲ್ಲಿ
೧೬—೪—೪೬

-ಸುಶೀಲಾ
ನಯ್ಯರ

ಖಾದಿ ಮುಗ್ಗರಿಸುತಿದೆಯೆ?

ಖಾದಿಯಲ್ಲಿ ನಂಬಿಕೆ ಇಲ್ಲದವರಿಗೆ ಅದು ಮುಗ್ಗರಿಸುತಿದ್ದಂತೆ ಕಾಣುವದು. ನಿಜವಾಗಿ ನೋಡಿದರೆ ಖಾದಿಯೀಗ ಪ್ರಬಲವಾಗುತ್ತ ನಡೆದಿದೆ. ಬಡವನ ಜೀವನದ ಊರುಗೋಲಾದ ಖಾದಿಯು ಸ್ವಾತಂತ್ರ್ಯ ಸಂಪಾದನೆಗಾಗಿ ಅಹಿಂಸಾಸ್ತ್ರವಾಗಹತ್ತಿದೆ. ತಮಿಳನಾಡಿನಿಂದ ಬಂದ ಒಂದು ಪತ್ರದ ಈ ಕೆಳಗಿನ ವಾಕ್ಯವೃಂದಗಳಲ್ಲಿ ತೊಂದರೆಗಳೆಲ್ಲ ಸ್ಪಷ್ಟವಾಗಿ ವ್ಯಕ್ತವಾಗಿವೆ.

"ಅ ಭಾ ಚರಕಾ ಸಂಘವೀಗ ಎರಡು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಈಗಿದ್ದ ಪದ್ಧತಿಯಂತೆಯೆ ಖಾದಿ ಉತ್ಪಾದನೆಯನ್ನು ಕಾಪಾಡಿಕೊಳ್ಳಬೇಕಾಗಿದೆ. ಎರಡನೆಯದೆಂದರೆ ನಮ್ಮ ಕಲಾಕಾರರ ಮತ್ತು ಅವರ ಹಳ್ಳಿಗಳ ಪುನರುಜ್ಜೀವನವನ್ನು ಸಾಧಿಸಬೇಕಾಗಿದೆ.

"ಖಾದಿ ಉದ್ಯೋಗದಲ್ಲಿ ಅನಧಿಕೃತ ಖಾದಿ ವ್ಯಾಪಾರಿಗಳು ಬಹಳವಾಗಿ ಹುಟ್ಟಿರುವದರಿಂದ ವ್ಯಾಪಾರದ ಖಾದಿಗೆ ಇತ್ತೀಚಿನ ಕೆಲವು ತಿಂಗಳಲ್ಲಿ ವಿಶೇಷ ಹಾನಿಯಾಗಿದೆ. ನಾವು ಒಳ್ಳೆಯ ಹತ್ತಿಯನ್ನು ಕೊಟ್ಟು ನೂಲು ತೆಗೆಸುವವರಿಂದ ಈ ಅನಧಿಕೃತ ವ್ಯಾಪಾರಿಗಳು ನೂಲನ್ನು ಕೊಂಡುಕೊಳ್ಳುತ್ತಾರೆ. ನಮ್ಮ ನೂಲಿನಿಂದ ನೇಯ್ದಂಥ ಖಾದಿಯನ್ನು ಇವರು ನೇಕಾರರಿಂದ ಕೊಂಡುಕೊಂಡು ಹೆಚ್ಚಿಗೆ ಲಾಭಪಡೆದು ಆ ಖಾದಿಯನ್ನು ಮಾರುತ್ತಾರೆ. ಇವರು ನಮ್ಮ ನೇಕಾರರ ಮನೆಗೆ ಹೋಗಿ ನಮಗಾಗಿ ನೇಯ್ದಂಥ ಖಾದಿ ಬಟ್ಟೆಯನ್ನು ನೇಕಾರರಿಗೆ ಅದರಷ್ಟು ನೂಲನ್ನೂ ಹೆಚ್ಚಿಗೆ ಕೂಲಿಯನ್ನೂ ಕೊಟ್ಟು ಕೊಂಡುಕೊಳ್ಳುತ್ತಾರೆ. ನೇಕಾರರು ಮನೆಯಲ್ಲಿ ಕುಳಿತಲ್ಲಿಯೆ ತಮಗೆ ನೂಲು ಮತ್ತು ಹೆಚ್ಚಿಗೆ ಕೂಲಿ ಸಿಗುವದರಿಂದ ನಮ್ಮ ಖಾದಿಯನ್ನು ಮಾರಿಬಿಡುತ್ತಾರೆ. ಹೀಗೆ ಕೊಂಡಂಥ ಖಾದಿಯನ್ನು ವಿಶೇಷ ಖಾದಿಯೆಂದು ಹೆಚ್ಚಿನ ದರದಿಂದ ಮಾರಲಾಗುತ್ತದೆ.

"ಈ ಪ್ರದೇಶದಲ್ಲಿ ಸುಮಾರು ಐಂಕ್ಕಿಂತ ಹೆಚ್ಚಿಗೆ ಅನಧಿಕೃತ ಖಾದೀ ವ್ಯಾಪಾರಿಗಳಿದ್ದಾರೆ. ಇವರು ಪ್ರತಿ ತಿಂಗಳ ಸುಮಾರು ೭ ಲಕ್ಷ ರೂ. ಗಳ ಅನಧಿಕೃತ ಖಾದಿಯನ್ನು ತಯಾರಿಸುತ್ತಾರೆ. ಈ ವ್ಯಾಪಾರಿಗಳಲ್ಲಿ ಕೇವಲ ಕಾಂಗ್ರೆಸಿಗರಿಲ್ಲದೆ ಕಾಂಗ್ರೆಸದ ಕೆಲವು ಅಧಿಕಾರಿಗಳೂ ಇದ್ದಾರೆ.

"ನೇಕಾರರು ನಮ್ಮ ಹತ್ತರ ಇಡುಗಂಟನ್ನು ಇಟ್ಟಿದ್ದರೂ ಈ ಅಧಿಕೃತ ವ್ಯಾಪಾರಿಗಳ ವರ್ಚಸ್ಸಿಗೆ ಅವರು ಬಲಿಬೀಳದಂತೆ ನೋಡಿಕೊಳ್ಳುವದು ನಮಗೆ ಸಾಧ್ಯವಿಲ್ಲ. ನಮ್ಮ ನೇಕಾರರು ಖಾದೀಧಾರಿಗಳೇ ಆಗಿರಬೇಕು, ಅವರ ಬಟ್ಟೆಯನೇಯ್ಗೆ ಉತ್ತಮವಾಗಿರಬೇಕು ಎಂದು ನಾವು ಕರಾರುಗಳನ್ನು ಹಾಕುತಿರುವಾಗ ತಮಗೆ ಯಾವ ಕರಾರು ಇಲ್ಲದೆ ಬೇಕಾದ ಹಾಗೆ ನೆಯ್ದು ಕೊಟ್ಟ ಬಟ್ಟೆಗೆ ಹೆಚ್ಚಿನ ಕೂಲಿ ಸಿಗುವಾಗ ತಾವೇಕೆ ಬವಣೆಗೊಳಗಾಗಬೇಕು ಎಂದು ನೇಕಾರರು ಕೇಳುತ್ತಾರೆ. ಅನಧಿಕೃತವ್ಯಾಪಾರಿಗಳು ನೂಲುವವರಿಗೆಬೊಂದಾ ಎಂಬ ಸುಮಾರು ಹತ್ತಿಯನ್ನು ಕೊಡುತ್ತಾರೆ. ಅದನ್ನು ಹಿಂಜಬೇಕಾಗುವದಿಲ್ಲ. ಈ ಹತ್ತಿಯನ್ನು ಅವರು ಗಿರಣಿಯಲ್ಲಿಂದ ಉತ್ತಮ ಹತ್ತಿಯ ಬೆಲೆಯ ಮುಕ್ಕಾಲು ಪಾಲು ಬೆಲೆಗೆ ಕೊಂಡುಕೊಳ್ಳುತ್ತಾರೆ. ಈ ನೂಲು ಕೇವಲ ಕುಕ್ಕಡಿಗಳಲ್ಲಿ ಉಳಿಯುತ್ತದೆ. ಅದನ್ನು ಲಡಿಕಟ್ಟಲಾಗಿರುವದಿಲ್ಲ. ಹೀಗೆ ನೂಲು ತೆಗೆಯಲು ಸುಲಭವಾಗುವದರಿಂದ ನೂಲುವವರು ಇದನ್ನೇ ಆರಿಸುತ್ತಾರೆ. ಅನಧಿಕೃತ ವ್ಯಾಪಾರಿಗಳು ಒಳ್ಳೆಯ ಕೆಲಸವನ್ನಪೇಕ್ಷಿಸದೆ, ಖಾದಿಗಾಗಿ ಇಡುಗಂಟು ಕೇಳದೆ, ನೂಲಿನ ಗುಣವನ್ನೂ ಪರೀಕ್ಷಿಸದೆ ನೇಕಾರರಿಗೆ ಹೆಚ್ಚಿನ ಕೂಲಿ ಕೊಡುತ್ತಿರುವದರಿಂದ ಅವರಿಗೂ ಈ ಅನಧಿಕೃತ ವ್ಯಾಪಾರಿಗಳ ಕೈಕೆಳಗೆ ದುಡಿಯುವ ಮನಸ್ಸಾಗುತ್ತದೆ.

"ಇಂಥ ಪ್ರವೃತ್ತಿಯನ್ನಿಟ್ಟುಕೊಂಡ ನಮ್ಮ ಕಲಾಕಾರರಲ್ಲಿ ಚರಕಾದ ಮುಖಾಂತರ ಗ್ರಾಮೋದ್ಧಾರವನ್ನು ಸಾಧಿಸಬೇಕು ಎಂಬ ನಮ್ಮ ಧ್ಯೇಯವನ್ನು ಬಿಂಬಿಸುವದು ಕಠಿಣವಾಗುತ್ತದೆ"

ಖಾದಿ ಉತ್ಪಾದನೆಯ ಸದ್ಯದ ಪದ್ಧತಿಯಿಂದ ಪುನರುಜ್ಜೀವನಕ್ಕೆ ವಿಘ್ನವಾಗುವಂತಿದ್ದರೆ ಆ ಪದ್ಧತಿಯನ್ನು ಬಿಟ್ಟುಕೊಡಬೇಕು. ಇದಕ್ಕಾಗಿ ವಿಶ್ವಾಸ ಮತ್ತು ತಜ್ಜನ್ಯದಕ್ಷತೆ ಬೇಕು. ಸೋಮಾರಿಗಳಲ್ಲಿ ವಿಶ್ವಾಸವೆಂದಿಗೂ ಬೆಳೆಯಲಾರದು.

ಅಹಿಂಸೆಯ ದೃಷ್ಟಿಯಿಂದಾಗಲಿ, ಬಡವನ ದೃಷ್ಟಿಯಿಂದಾಗಲಿ ಈ ಅನಧಿಕೃತ ವ್ಯಾಪಾರಿಗಳು ಖಾದಿಯ ಮಾರ್ಗದಲ್ಲಿ ಕಂಟಕವಾಗಿದ್ದಾರೆ. ಯಾಕಂದರೆ ಆ ವ್ಯಾಪಾರಿಯು ತನ್ನ ಲಾಭದ ಹೊರತು ಬೇರೆ ಯಾವುದನ್ನೂ ಗಮನಿಸುವದಿಲ್ಲ. ಅವನು ನೂಲುವವರಲ್ಲಿಗೆ ಮತ್ತು ನೇಕಾರರಲ್ಲಿಗೆ ಹೋಗಿ ಅಲ್ಲದ ಸಲ್ಲದ ಆಶ್ವಾಸನಗಳನ್ನು ಕೊಡುತ್ತಾನೆ. ಆದರೆ ಅಖಿಲ ಭಾರತ ಚರಕಾಸಂಘದ ನಾಶವೆಂದರೆ ತನ್ನದೇ ನಾಶವೆಂಬುದನ್ನು ಅವನು ಅರಿತಿರುವದಿಲ್ಲ.

ಕಾಂಗ್ರೆಸ್ಸಿಗರು ಈ ಅನಧಿಕೃತ ವ್ಯಾಪಾರಿಗಳ ಹಸ್ತಕರಾಗಿ ದುಡಿಯುತ್ತಿರುವದು ಇನ್ನೂ ಶೋಚನೀಯ. ಅವರು ತಜ್ಞರ ಒಂದು ಸಂಸ್ಥೆಯನ್ನು ಹುಟ್ಟಿಸಿದ್ದಾರೆ. ಆದರೂ ತಾವು ಅರಿತೊ ಅರಿಯದೆಯೊ ಚಿನ್ನದ ತತ್ತಿಯಿಡುವ ಹೇಟೆಯನ್ನು ಕೊಲ್ಲುತ್ತಿರುವ[illegible] ಅವರು ಅರಿತಿಲ್ಲ. ಅವರು ತಮ್ಮ ಮಾರ್ಗವನ್ನು ಅನುಸರಿಸಬಲ್ಲರು. ಸ್ವರಾಜ್ಯ ಸಾಧನೆಗೆ ಖಾದಿಯೊಂದು ಅಹಿಂಸಾಸ್ತ್ರವೆಂದು ಅವರು ನಂಬದಿದ್ದರಂತೂ ತಮ್ಮಿಚ್ಛೆಯಂತೆ ನಡೆಯಲು ಅವರು ಇನ್ನೂ ಸ್ವತಂತ್ರರು.

ಕಾಂಗ್ರೆಸ್ಸಿಗರ ಸಲಹೆ ಪಡೆದುಕೊಂಡೆ ಅ. ಭಾ. ಚರಖಾ ಸಂಘದ ಧೋರಣೆಯನ್ನು ಬದಲಿಸಬೇಕು ಎಂದು ನನಗೆ ಸೂಚಿಸಲಾಗಿದೆ. ಸ್ವಾಭಾವಿಕವಾಗಿ ಇದಷ್ಟು ಸರಿಯಲ್ಲ. ಕಾಂಗ್ರೆಸಿಗರಿಂದಲೆ ಅ. ಭಾ. ಚರಖಾ ಸಂಘವು ಜನ್ಮತಾಳಿದೆ. ಕಾಂಗ್ರೆಸಿಗರಿಂದ ಹುಟ್ಟಿದ್ದರೂ ಅದು ಸ್ವಾಯತ್ತ ಸಂಸ್ಥೆಯಾಗಿದೆ. ಅ. ಭಾ ಚರಖಾ ಸಂ[illegible] ತನ್ನದಲ್ಲವೆಂದು ಕಾಂಗ್ರೆಸು ಬೇಕಾದಾಗ ಹಾರಿಸಿಕೊಳ್ಳಬಲ್ಲದು. ಆದರೆ ಅದು ತನ್ನದೆಂದು ಕಾಂಗ್ರೆಸು ಹೇಳಿಕೊಳ್ಳುವ ವರೆಗೆ ಸ್ವರಾಜ್ಯಕ್ಕಾಗಿ ಅದು ಯೋಗ್ಯ ಕೆಲಸಗಳನ್ನೇ ಮಾಡಬೇಕು. ಖಾದಿಬಟ್ಟೆಯ ಬೆಲೆಯನ್ನು ಕೆಲವು ಅಂಶದಲ್ಲಿ ನೂಲಿನ ರೂಪದಲ್ಲಿ ಕೊಡಬೇಕೆಂದಿದ್ದದ್ದೂ ಕಾಂಗ್ರೆಸಿಗರಿಗೆ ತೊಂದರೆಯದಾಗಿದೆ. ಖಾದಿಯು ಅಹಿಂಸೆಯ ಚಿಹ್ನವೆಂದು ಒಪ್ಪಿದ್ದರೆ ಹೀಗಾಗಬಾರದು. ಖಾದಿಯ ಬಗ್ಗೆ ಇಂಥ ವಿಶ್ವಾಸವಿಲ್ಲದಾದರೆ ಸಂತತ ಖಾದೀ ಧಾರಿಗಳಾಗಿರಬೇಕು ಎಂಬ ನಿಯಮವನ್ನೂ ಬಿಟ್ಟುಕೊಡಬೇಕು.

ಇಷ್ಟಲ್ಲದೆ ಖಾದಿಯು ಸಾರ್ವಜನಿಕ ಪ್ರಾಮಾಣಿಕತನದ ಒರೆಗಲ್ಲಾಗಿದೆ. ಸಾರ್ವಜನಿಕ ವ್ಯವಹಾರಗಳಲ್ಲಿ ಪ್ರಾಮಾಣಿಕತನವನ್ನು ಕಾಯ್ದುಕೊಳ್ಳುವದೆಂದರೆ ಹಳ್ಳಿಗಳ ಕೋಟ್ಯಾವಧಿ ಸ್ತ್ರೀ-ಪುರುಷರೊಂದಿಗೆ ನಿಕಟವಾದ ನಿಸ್ವಾರ್ಥ ಸಂಬಂಧ ಸ್ಥಾಪಿಸಿಕೊಳ್ಳುವದು ಎಂದಿರುವದರಿಂದ ಇದನ್ನು ಸಾಧಿಸುವದು ಕಠಿಣ.

ನನ್ನಂತೆ ಇತರ ಕಾರ್ಯಕರ್ತರೂ ತಮ್ಮ ಕಾರ್ಯದಲ್ಲಿ ದೃಢ ವಿಶ್ವಾಸವಿಟ್ಟು ಪರಿಣಾಮವನ್ನು ದೇವರಿಗೊಪ್ಪಿಸಿಬಿಡಬೇಕು ಎಂಬುದೆ ಇಷ್ಟೆಲ್ಲರ ಮಥಿತಾರ್ಥ.

ಸಿಮ್ಲಾ
೩-೫-೪೬.

ಮೋ. ಕ. ಗಾಂಧಿ

[೭ ನೇ ಪುಟದಿಂದ ಮುಂದರಿದುದು]

ಮಾತ-ಕತೆಗಳ ಸ್ಥಳ ಸಿಮ್ಲಾ ಎಂದು ಒಮ್ಮಿಂದೊಮ್ಮೆಲೆ ಪ್ರಕಟಿಸಲಾಯಿತು. ಸಿಮ್ಲಾಕ್ಕೆ ಹೋಗುವದಿದ್ದರೆ "ಹರಿಜನ" ಕೆಲಸಕ್ಕೆ ಸ್ವಲ್ಪ ತೊಂದರೆಯಾದರೂ ನನ್ನ ಮಾಮೂಲಿನ ಪರಿವಾರವನ್ನು ಸಂಗಡ ಕರೆದೊಯ್ಯಬಾರದೆಂದು ನನ್ನ ಮನಸ್ಸಿಗೆ ಹೊಳೆಯಿತು. ಈ ಬಗ್ಗೆ ನನ್ನ ಪರಿವಾರದವರಿಗೆ ಮನವರಿಕೆ ಮಾಡಲು ನಾನು ಸಮರ್ಥನಾಗಿದ್ದರೆ ಅವರು ದಿಲ್ಲಿಯಲ್ಲಿಯೇ ಉಳಿದುಬಿಡುತ್ತಿದ್ದರು. ಮೊದಲನೇ ತಾರೀಖಿನ ದಿನ ಈ ಬಗ್ಗೆ ನಿರ್ಧಾರಕ್ಕೆ ಬರಲು ಅವರಿಗೆ ಕೆಲವೇ ತಾಸುಗಳು ಉಳಿದಿದ್ದವು. ನನ್ನ ಯೋಗಕ್ಷೇಮದ ಬಗ್ಗೆ ಎಲ್ಲರಿಗೂ ಚಿಂತೆಯಾಗಿತ್ತು. ಅವರ ಮನ[illegible] ನಾನು ಸಂತೋಷಪಡಿಸದಿದ್ದರೆ ನನ್ನ ನೈತಿಕ ಕಾರಣಕ್ಕೆ ಸೋಲುಂಟಾಗುತ್ತಿತ್ತು. ಕಾರಣ ಅವರು ಸಿಮಲಾಕ್ಕೆ ಬಂದರು. ಆದರೆ ಈ ವಿಚಾರ ನನ್ನನ್ನು ಮನಸ್ಸಿನಲ್ಲಿಯೇ ಕೊರೆಯುತ್ತಿತ್ತು. ನಿನ್ನೆಯ ದಿನ ನಾನು ಈ ಸಂಬಂಧದಲ್ಲಿ ಪ್ಯಾರೆಲಾಲನೊಡನೆ ಸಂಭಾಷಿಸಿದೆ. ನಾನು ವಿರಾಗಿಯಂತೆ ಕೆಲಸ ಮಾಡಬೇಕಾಗಿದ್ದರೆ ದೇವರ ಸಂರಕ್ಷಣೆಗೆ ನನ್ನನ್ನೂ ಒಪ್ಪಿಸಿಬಿಡಬೇಕು ಎಂದು ಪ್ಯಾರೇಲಾಲನಿಗೂ ಅನಿಸಿತು. ನಾನು ಇಲ್ಲಿಂದ ಕೆಳಗಿಳಿದು ಬರುವವರೆಗೆ ಅವರು ಹೊಸದಿಲ್ಲಿಯ ಬಿಸಿಲಿನಲ್ಲಿ ಕಾಯ್ದಿರಬೇಕೆಂಬ ಬಗ್ಗೆ ಅಂದು ಇಡೀ ಮಧ್ಯಾನ್ಹವೆಲ್ಲ ಚರ್ಚೆ ನಡೆಯಿತು. ಇದುವೇ ನಿಜವಾದ ಕಾರಣ.

ಸಿಮಲಾ,
೪, ಮೇ ೧೯೪೬.

ಉಭಯ ಸಂಕಟ

ಗಾಂಧೀಜಿಯವರ ಸಂಗಡ ಇರುವದೆಂದರೆ ಜ್ವಾಲಾಮುಖಿಯ ಮೇಲೆ ಕುಳಿತಂತೆ; ಯಾವಾಗ ಅದರ ಸ್ಫೋಟವಾದೀತೆಂಬ ನಿಯಮವೇ ಇಲ್ಲವೆಂದು ದಿವಂಗತ ಮಹಾದೇವ ದೇಸಾಯಿಯವರು ಆಗಾಗ್ಗೆ ಹೇಳುತ್ತಿದ್ದರು. ಗಾಂಧೀಜಿಯವರು ಸಿಮ್ಲೆಗೆ ಹೋಗಬೇಕೆಂದು ಗೊತ್ತುಮಾಡಿದ [illegible] ಅಲ್ಲಿಗೆ ಹೋಗಿ ಮುಟ್ಟಿದ ೪೮ ತಾಸುಗಳಲ್ಲಿ ತಮ್ಮ ಪರಿವಾರವನ್ನೆಲ್ಲ ದಿಲ್ಲಿಗೆ ತಿರುಗಿ ಕಳಿಸಬಹುದೆಂದು ನಮಗಾರಿಗೂ ಅನಿಸಿದ್ದಿಲ್ಲ. ಸುತ್ತಲಿನ ಸನ್ನಿವೇಶದ ಪರಿಣಾಮವು ತ್ವರಿತವಾಗಿಯಾಗುವಂತಹ ಸ್ವಭಾವವು ಅವರದು. ಪ್ರತಿಕ್ರಮ ಪರಾಜಯಗಳು ದೈವೀ ಪ್ರೇರಣೆಗಳೆಂದು ತಿಳಿದು ಶಾಂತರೀತಿಯಿಂದ ಅವುಗಳನ್ನು ಅವರು ಸಹಿಸಿಕೊಳ್ಳುವರು. ಆದರೆ ವಾತಾವರಣದಲ್ಲಿಯ ಅಸತ್ಯದ ಕ್ಷುದ್ರಕಲಂಕಬಿಂದುವಾಗಲಿ ಇಲ್ಲವೆ ಅದರ ಸಂಶಯವಾಗಲಿ ಅವರಿಗೆ ಅಸಹ್ಯವೆನಿಸುತ್ತವೆ. ಮಂತ್ರಿತ್ರಯರ ರಾಯಭಾರಕ್ಕೆ ಹಾಗೂ ನಮಗೆ ಸಲಹೆಗಾರರಾಗುವ ಸೂಕ್ಷ್ಮ ಭೂಮಿಕೆಯನ್ನು ಅವರು ಅಂಗೀಕರಿಸಿದರು. ಆದರೆ ಅಲ್ಲಿಯ ಸಾಮಾನ್ಯ ಪರಿಸ್ಥಿತಿಯಲ್ಲಿ ಅವರಿಗೆ ಅತ್ಯಂತ ಅಸಮಾಧಾನವನ್ನುಂಟುಮಾಡುವಂತಹ— ಮನಸ್ಸಿಗೆ ಹೊಳೆದರೂ ಮಾತಿನಲ್ಲಿ ಹೇಳಬಾರದ- ಯಾವುದೋ ಒಂದುಬಗೆಯ ವೈಚಿತ್ರ್ಯವಿದ್ದುದು ತೋರಿಬಂತು. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು" ಎಂಬ ತತ್ವದಲ್ಲಿಯ ಶ್ರದ್ಧೆಯಿಂದ ಇಂತಹ ಪ್ರಸಂಗಗಳಲ್ಲಿಯ ತಮ್ಮ ವಾಡಿಕೆಯಂತೆ ಅವರು ಅತ್ಯಂತ ಭಯಂಕರವಾದ ಆತ್ಮನಿರೀಕ್ಷಣೆಗೆ ತೊಡಗಿದರು. ತಮ್ಮ ಕೃತಿಯು ಆತ್ಮಸಮ್ಮತವಿದ್ದರೆ ಲೋಕಸಮ್ಮತವಾಗುವದೆಂಬ ನಂಬಿಗೆಯು ಅವರಿಗಿತ್ತು.

ಸತ್ವ ಪರೀಕ್ಷೆ

ಮೂರು— ಈಗ ನಾಲ್ಕು— ಹರಿಜನ ವಾರಪತ್ರಿಕೆಗಳ ಸಂಪಾದನದ ಪುಣ್ಯದಿಂದ ಹಾಗೂ ದಿನದಿನಕ್ಕೆ ಬೆಳೆಯುತ್ತಿರುವ ಪತ್ರವ್ಯವಹಾರ ಮತ್ತು ಇತರ ಕೆಲಸಗಳನ್ನು ನೋಡಿಕೊಳ್ಳಬೇಕಾಗಿರುವದರಿಂದಲೂ ತಮ್ಮ ಸಂಗಡ ಸಾಕಷ್ಟು ದೊಡ್ಡ ಪಾರುಪತ್ಯಗಾರ ಪರಿವಾರವನ್ನಿಟ್ಟುಕೊಳ್ಳಬೇಕಾಗಿದೆ. ನಮ್ಮ ಸಂಗಡ ಸಿಮ್ಲೆಗೆ ಹೋಗಲು ಬಹಳೇ ಅಗತ್ಯವಾಗಿರುವ ಪರಿವಾರ ಸಂಖ್ಯೆಯನ್ನು ಬರೆದುಕೊಡಲು ಕಳೆದ ಮಂಗಳವಾರ ಅವರು ನನಗೆ ಹೇಳಿದರು. ನಾನು ಹಾಗೆ ಮಾಡಿದೆ. ಆದರೆ ಅದು ಅವರ ಮನಸ್ಸಿಗೆ ಬರಲಿಲ್ಲ.

ಹಿಂದಿನ ಎಲ್ಲ ಪ್ರಸಂಗಗಳಲ್ಲಿಯೂ ತಪ್ಪದೆ ನಮ್ಮ ಯಜಮಾನಿಯಾಗಿದ್ದ ರಾಜಕುಮಾರಿ ಅಮೃತಕುಂವರ್‌ ವಾಸಸ್ಥಳವಾದ 'ಮೇನರವಿಲೆ' ಯಲ್ಲಿ ಸ್ಥಳಸಂಕೋಚವಿದ್ದುದರಿಂದ ಹಾಗೂ ಅವರ ಆಳುಗಳಲ್ಲಿ ಹಲಕೆಲವರು ರಜೆಯ ಮೇಲಿದ್ದುದರಿಂದ ಇಲ್ಲವೆ ಜಡ್ಡಿನಿಂದ ಬಳಲುತ್ತಿರುವದರಿಂದ ಅವರಿಗೆ ಬಹಳ ದುಃಖವೆನಿಸಿತು. ಇದಲ್ಲದೆ ಮಹಾತ್ಮರ ತೊಡಕಾದ ವ್ಯಾಕುಲಕಾರಕ ಜನಜಂಗುಳಿಯ ಪ್ರೀತಿ ಪ್ರದರ್ಶನದಿಂದ ಅವರನ್ನು ರಕ್ಷಿಸುವ ಆವಶ್ಯಕತೆಯ ವಿಚಾರವೂ ಒಂದಿತ್ತು. ಇದೇ ಆ ಉಭಯ ಸಂಕಟ ಪ್ರಸಂಗ. ಸರಕಾರವು ವಿಚಾರಪೂರ್ವಕ ಸಿಮಲೆಯಲ್ಲಿಯ ಒಂದು ದೊಡ್ಡ ಬಂಗಲೆಯೊಂದು ಅವರ ಸಲುವಾಗಿ ಅಣಿಗೊಳಿಸಿದ್ದರು ಮತ್ತು ಅವರಿಗೂ ಅವರ ಪರಿವಾರದವರಿಗೂ ವಾಹನ ಸೌಕರ್ಯಗಳ ಏರ್ಪಾಟು ಮಾಡಿದ್ದರು. ಸಂಕೋಚಪಟ್ಟುಕೊಳ್ಳದೆ ಇವುಗಳ ಉಪಯೋಗವನ್ನು ಅವರು ಮಾಡಿಕೊಳ್ಳಬೇಕೊ? ಪರಮಾತ್ಮನಲ್ಲಿಯ ಅವರ ಭಕ್ತಿ ಶ್ರದ್ಧೆ ಮತ್ತು ಅವರ ಅನಾಸಕ್ತಿಯ ಪರೀಕ್ಷಾಕಾಲ ಬಂದಿದೆಯೆಂದು ಅವರಿಗನಿಸಿತು. ಪರಿವಾರ ಸಂಖ್ಯೆಯನ್ನು ಇನ್ನೂ ಕಡಿಮೆ ಮಾಡುವದು ಪ್ರಯಾಸಕರವಾಗಿತ್ತು. ಆದರೆ ಮಾನವ ಸಹಾಯವಿಲ್ಲದೆ ಏಕಾಕಿಯಾಗಿ ಪರಿಸ್ಥಿತಿಯನ್ನು ಮೊಗಸುವದು ಅವರಿಗೆ ಸಾಧ್ಯವೊ ? ದೈವೀ ಸಂಕೇತದ ಸಾಧನಮಾತ್ರರು ತಾವಾಗಿದ್ದರೆ, ಬಾಹ್ಯ ಪರಿವಾರ ಪರಿಕರಗಳು ಅವಶ್ಯವೇ ? "ನಾವು ಭೀಕರ ಆಪತ್ತುಗಳನ್ನು ಎದುರಿಸಬೇಕಾಗಿದೆ. ಸುತ್ತುಮುತ್ತು ಸುಳ್ಳು, ಕಪಟ, ಲಂಚಗುಳಿತನ ತುಂಬಿವೆ. ಹರಿತವಾದ ಅನಾಸಕ್ತಿ ಪರಶುವಿನ ಪ್ರಯೋಗವಿಲ್ಲದೆ ಇವುಗಳೊಳಗಿಂದ ದಾರಿಗಡಿದುಕೊಂಡು ಅಕಲಂಕಿತನಾಗಿ ಹೇಗೆ ಪಾರಾಗಬಲ್ಲೆ ?" ಎಂದು ತಮ್ಮೊಳಗೆ ತಾವೇ ಅಂದುಕೊಳ್ಳುತ್ತಿದ್ದರು. ಅಂತರಂಗದಲ್ಲಿಯ ಉಭಯಸಂಕಟಗಳ ಈ ತಾಕಲಾಟವನ್ನು ತಮ್ಮ ಪರಿವಾರದ ಮುಂದೆ ಅವರಿಟ್ಟರು. "ಸತ್ವ ಪರೀಕ್ಷೆಯ ಈ ಸಮಯದಲ್ಲಿ ನಾನು ದೇವರನ್ನೇ ಮೊರೆಹೊಗಬಯಸಿದ್ದೇನೆ. ಮತ್ತು ಒಬ್ಬೊಂಟಿಗನಾಗಿ ಸಿಮ್ಲೆಗೆ ಹೋಗಬೇಕೆಂದಿದ್ದೇನೆ. ಆದರೆ ನಿಮ್ಮ ಒಪ್ಪಿಗೆಯಿಲ್ಲದೆ ಹಾಗೆ ಮಾಡುವ ಇಚ್ಛೆ ನನಗಿಲ್ಲ. ನನ್ನ ಮನಃಸಂಕೇತವನ್ನು ನಿಮ್ಮ ಮೇಲೆ ಹೇರುವದೆಂದರೆ ಅನಾಸಕ್ತಿಯ ಅಭಾವವೇ ಆಗುವದು." ಪರಿವಾರವೆಲ್ಲ ದಿಙ್ಮೂಢವಾಯಿತು. ಅಪರಿವೃತವಾಗಿ ಅವರನ್ನು ಹೋಗಗೊಡುವ ದೊಡ್ಡ ಹೊಣೆಯನ್ನು ತಮ್ಮ ಮೇಲೆ ತೆಗೆದುಕೊಳ್ಳಲು ಎದೆಗೊಳ್ಳಲಿಲ್ಲ. ಅವಸರದ ವಿಚಾರವಿನಿಮಯ ಮಾಡಿ ಅವರೆಲ್ಲರೂ ತಮ್ಮ ಒಮ್ಮತದ ನಿರ್ಣಯವನ್ನು ಮಹಾತ್ಮರ ಮುಂದಿಡಲು ನನ್ನ ಕಡೆಗೆ ಕೊಟ್ಟರು. ಅದು ಹೀಗಿತ್ತು "ತಮ್ಮ ಸಂಗಡ ಅವರು ಮೂವರನ್ನೇ ಇಲ್ಲವೆ ನಿಮ್ಮೊಬ್ಬರನ್ನೇ ಕರೆದುಕೊಂಡು ಹೋಗಲಿ ಅಂದರೆ ನಮಗೆ ಸಮಾಧಾನವೆನಿಸುವದು— ಆದರೆ ಅವರೊಬ್ಬರನ್ನೇ ಹೋಗಗೊಡಲಾಗದು. ನಮ್ಮ ಮನಸ್ಸಿಗೆ ಅದು ಬಾರದು". ಆದರೆ ಗಾಂಧೀಜಿಯವರು ಗಟ್ಟಿಯಾಗಿದ್ದರು. "ಬಂದರೆ ಎಲ್ಲರೂ ಬರಲಿ; ಇಲ್ಲದಿದ್ದರೆ ಯಾರೂ ಇಲ್ಲ" ಎಂಬುದೇ ಅವರ ಖಚಿತ ಉತ್ತರವಾಗಿತ್ತು. "ಶ್ರದ್ಧೆಯು ಅವಿಭಾಜ್ಯ; ಅದರಲ್ಲಿ ಭಾಗಮಾಡಲು ಬರುವದಿಲ್ಲ. ಪರಮಾತ್ಮನಿಗೆ ನನ್ನನ್ನು ಅರ್ಧಮರ್ಧ ಒಪ್ಪಿಸಲಾರಿರಿ" ಕವಿಯು ಹೇಳಿದಂತೆ "ಒಂದನ್ನು ನಂಬದವ ಹನ್ನೊಂದನ್ನು ನಂಬಲಾರ."

ಶ್ರದ್ಧೆಯ ಕಾರ್ಯ

ಆದರೆ ಹೆಚ್ಚಿನ ವಿಚಾರಕ್ಕೆ ಆಗ ಸಮಯವಿದ್ದಿಲ್ಲ. ಅದುದರಿಂದ ಇಡೀ ಪರಿವಾರವೇ ಸಿಮ್ಲೆಗೆ ಹೊರಟಿತು.

ಆದರೆ ಗಾಂಧೀಜಿಯವರ ಒಳನೋಟ ಹಾಗೇ ಸಾಗಿತ್ತು. ಸಿಮ್ಲೆಗೆ ಬಂದುಮುಟ್ಟಿದ ಮೊದಲನೇ ದಿನವೇ ಪ್ರಾರ್ಥನೋತ್ತರ ಪ್ರವಚನದಲ್ಲಿ ಅದು ಕೋಡಿವರಿಯಿತು. ಆಗ ಈಶೋಪನಿಷತ್ತಿನ ಮೊದಲಮಂತ್ರವನ್ನೇ ಅಂದಿನ ಪ್ರವಚನ ಪಾಠವನ್ನಾಗಿ ಆರಂಭಿಸಿದರು. "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ" "ಎಲ್ಲವನ್ನು ಆತನಿಗರ್ಪಿಸು. ಆ ಮೇಲೆ ಆತನಿತ್ತುದರಲ್ಲಿಂದ ಆತನ ಸೇವೆಗಾಗಿ ಅವಶ್ಯಕವಾದುದನ್ನಷ್ಟೇ ವಿನಿಯೋಗಿಸು. ಬಿಡಿಕಾಸನ್ನು ಹೆಚ್ಚಿಗೆ ಉಪಯೋಗಿಸಬೇಡ" ತಮ್ಮ ಪರಿವಾರದಿಂದ ಪರಿವೃತರಾಗಿರುವಾಗ ಅವರು ಉಪನಿಷದುಪದೇಶದಂತೆ ನಡೆದಿರುವರೆಂದು ಹೇಳಲಿಕ್ಕಾದೀತೆ? "ಮೊದಲು ಸರ್ವವನ್ನು ಆತನಿಗೆ ಅರ್ಪಿಸಬೇಕು. ಬಳಿಕ ಆತನ ಅನುಗ್ರಹದಿಂದ ಒದಗುವ ಉಪಕರಣದಿಂದ ಆತನ ಕಾರ್ಯವನ್ನು ನೆರವೇರಿಸಬೇಕು." ಪ್ರಾರಂಭಿಕ ಪರಿಹರಿಕೆಯು ಗತ್ಯವಾಗಿತ್ತು. ಮತ್ತೊಮ್ಮೆ ಆ ವಿಷಯವನ್ನು ಅವರು ನಮ್ಮ ಮುಂದೆ ಎತ್ತಿದರು. "ದೇವರು ಮನೆ ಕಟ್ಟದ ಹೊರತು ಕಟ್ಟುವವರ ಕೆಲಸವೆಲ್ಲ ನಿರರ್ಥಕ" ದೇವರ ಬಳಿಯಲ್ಲಿ ತಮ್ಮ ಕೆಲಸವನ್ನು ಮಾಡಿಕೊಳ್ಳಲು ಅವರಿಗೆ ಸಂಧಿಯನ್ನು ಏಕ ಕೊಡಗೊಡದಿರಬೇಕು? ಶ್ರದ್ಧೆಯ ಆ ಕಾರ್ಯವನ್ನು ಮಾಡಲು ಸಮಯ ಮೀರಿದ್ದಿಲ್ಲ. "ನಿನ್ನೊಳಗೆ ನೀನೇ ನೋಡಿಕೋ ಮತ್ತು ಉತ್ತರವನ್ನು ಅಲ್ಲಿ ದೊರಕಿಸಿಕೋ. ಹೆರವರನ್ನು ವಿಚಾರಿಸಬೇಡ. ಫಲಿತಾಂಶವನ್ನು ನನಗೆ ತಿಳಿಸು" ಎಂದು ನನಗೆ ಅವರು ಹೇಳಿದರು.

ಅದೇ ದಿನ ಮುಂದೆ ಕು. ಅಗಾಥಾ ಹೆರಿಸನ್ನಳ ಮುಂದೆ ತಮ್ಮ ಅಂತರಂಗದ ತಳಮಳವನ್ನೆಲ್ಲ ತೋಡಿಕೊಂಡರು. " ಜಗತ್ತು ನನ್ನನ್ನು ನೋಡಿ ನಗುವದು ಮತ್ತು ಇದ್ದಿಯೊಂದು ನಾಟಕೀಯವ್ಯಕ್ತಿಯಿದೆಯೆಂದು ನುಡಿವುದು. ನಾನದನ್ನು ಲೆಕ್ಕಿಸುವದಿಲ್ಲ. ಮಾನವಸಹಾಯದ ರೂಢಿಯು ಮನುಷ್ಯನಿಗೊಮ್ಮೆ ಆದ ಬಳಿಕ ಒಮ್ಮಿಂದೊಮ್ಮೆಲೆ ಅದರ ಪರ್ಲು ಹರಿದುಕೊಳ್ಳುವದು ಸುಲಭವಲ್ಲ. ನನ್ನ ಭಾವನೆಗಳ ವಿಷಯದಲ್ಲಿ ನಾನು ಬಹಳ ಸಂಪ್ರದಾಯಶರಣ. ಬಹುಕಾಲ ನನ್ನ ಬಳಿಯಲ್ಲಿದ್ದ ಸಣ್ಣದೊಂದು ಸೀಸಕಡ್ಡಿಯು ಕಳೆಯಲು ಅದನ್ನು ಹುಡುಕಲು ನಾನು ಆರುಗಂಟೆಗಳ ಕಾಲವನ್ನು ಕಳೆದಿದ್ದೇನೆ. ಅದರ ಹಾನಿಯನ್ನು ಅಂತಃಕರಣಕ್ಕೆ ಹೊಂದಿಸಿಕೊಂಡು ಸಮಾಧಾನ ಹೊಂದಲು ನನ್ನಿಂದಾಗಲಿಲ್ಲ. ನನ್ನ ಇಡೀ ಸನ್ನಿವೇಶದಿಂದಲೇ ಸಿಡಿದು ನಿಲ್ಲಬೇಕಾಗಿದೆ ಮತ್ತು ವರ್ಷಾನುವರ್ಷ ನನ್ನ ಕೆಲಸಕ್ಕಾಗಿ ನುರಿತ ಪರಿವಾರವನ್ನು ದೂರ ಕಳಿಸಬೇಕಾಗಿದೆ-ಹಗುರಾದಕೆಲಸವಲ್ಲ "ಅದು ಹಾಗಾಗಬಾರದು ದೇವರಿಗೆ ಸರ್ವಸ್ವವನ್ನು ಒಪ್ಪಿಸಿದವನಿಗೆ ಎಲ್ಲವೂ ಒಂದೇ ಆಗಿರಬೇಕು. ಆ ಆಸಕ್ತಿಬುದ್ಧಿಯು ಪ್ರಭಾವವನ್ನು ನನ್ನ ಮೇಲೆ ಆಗಗೊಟ್ಟರೆ ನಾನು ಕಾಂಗ್ರೆಸ್ಸಿಗೆ, ಬ್ರಿಟಿಷ ಮಂತ್ರಿತ್ರಯ ರಾಯಭಾರಕ್ಕೆ ಮತ್ತು ಇತರರಿಗೆ ದುರ್ಮಾರ್ಗದರ್ಶಿಯಾಗುವೆ. ಮತ್ತು ನನ್ನ ರಾಮನಾಮ ಪಾರಾಯಣವು ಹುರುಳಿಲ್ಲದ ಮಣಮಣ ಮಂತ್ರವಾಗುವದು. ನನ್ನ ಉಪದೇಶವನ್ನು ಅವರು ಅನುಸರಿಸಿದರೆ ಕತ್ತಲಲ್ಲಿ ಜಿಗಿದಂತೆಯೇ ಆಗಬಹುದು. ನುರಿತ ರಾಜತಂತ್ರಪ್ರವೀಣರಾದ ಅವರಿಗೆ ಆ ಗಂಡಾಂತರವನ್ನಂಗೀಕರಿಸಲು ಸಾಧ್ಯವಿಲ್ಲ. ಆದುದರಿಂದ ನನ್ನ ಮಾರ್ಗದರ್ಶನವು ಬೆರಕೆಯದಾಗಿರಬಾರದು.

" ನಿಮ್ಮ ಕುಟುಂಬದವರು ನಿಮ್ಮ ಅಕ್ಕಪಕ್ಕದಲ್ಲಿದ್ದರೆ ಎಷ್ಟೇ ಪ್ರಮಾಣದಲ್ಲಾಗಲಿ ಇಲ್ಲವೆ ಸೂಕ್ಷ್ಮರೀತಿಯಲ್ಲಾಗಲಿ ನಿಮ್ಮ ಮನಸ್ಸನ್ನು ಚಲವಿಚಲಗೊಳಿಸುವರು; ಈ ಅಯುಕಟ್ಟಿನ ಪ್ರಸಂಗದಲ್ಲಿ ನನ್ನ ಅವಿಭಕ್ತ ಆತ್ಮವನ್ನೆಲ್ಲ ದೇವರಿಗೆ ಅರ್ಪಿಸಬಯಸಿದ್ದೇನೆ. "

" ಅಸಾಮಾನ್ಯವಾದ ಅಯುಕಟ್ಟಿನ ಪ್ರಸಂಗದ ಕೂಡ ನೀವು ಹೋರಾಡಬೇಕಾಗಿದೆಯೆಂದು ನಿಮಗನಿಸುತ್ತದೆಯೋ ? ಎಂದು ಅಗಾಥಾ ಹೆರಿಸನ್ನಳು ಪ್ರಶ್ನಿಸಿದಳು.

ಇಮ್ಮಡಿ ಸಂದುಕಟ್ಟು

"ಹೌದು; ಆಯುಕಟ್ಟಿನಲ್ಲಿ ಅಯುಕಟ್ಟಿದೆ. ನಿಮ್ಮ ಕಣ್ಣಿಗೆ ಕಾಣುವ ಹೊರಗಿನ ಅಯುಕಟ್ಟೊಂದಲ್ಲದೆ ನನ್ನ ಒಳಗೆಯೆ ಒಂದು ಅಯುಕಟ್ಟಿದೆ" ಗಾಂಧೀಜಿ ಉತ್ತರಿಸಿದರು.

"ಈ ಪರೀಕ್ಷೆಯೊಳಗಿಂದ ಹೇಗೆ ಪಾರಾಗುವೆನೋ ನೋಡಬೇಕು" ಅವರು ಮತ್ತೆಂದರು.

"ನನ್ನ ಪರಿವಾರದವರೆಲ್ಲ ಇಂದಿನ ವರೆಗೆ ನನಗೋಸುಗ ಪ್ರತಿಯೊಂದು ಸಣ್ಣಪುಟ್ಟ ಕೆಲಸವನ್ನು ನೋಡುತ್ತಿದ್ದರು. ಏನಾದರೂ ತಪ್ಪಾದರೆ ಅದಕ್ಕೆ ಅವರೇ ಹೊಣೆಗಾರರಿದ್ದರು. ನಾಳಿನಿಂದ ಅದೆಲ್ಲವನ್ನು ನಾನೇ ಮಾಡಿಕೊಳ್ಳಬೇಕು. ಮತ್ತು ಏನಾದರೂ ತಪ್ಪಾದರೆ ನನ್ನನ್ನು ನಾನೇ ದೂರಿಕೊಳ್ಳಬೇಕು. ಇದೆಲ್ಲ ಆಗಿಯೂ ನಾನು ಉಲ್ಲಸಿತಾತ್ಮನಾಗಿರಬೇಕು. ನನ್ನನ್ನು ನಾನು ನಿರೀಕ್ಷಿಸಿಕೊಳ್ಳಬೇಕು. ಆ ಅನಾಸಕ್ತಿ ಪ್ರಯೋಗದಲ್ಲಿ ತೇರ್ಗಡೆಯಾಗಿ ಬದುಕಿದರೆ ಹಾಗೂ ಅಂತರಾನಂದ ಭಾವವನ್ನು ಭೋಗಿಸಿದರೆ–ರಕ್ತದ ಒತ್ತಡವುಂಟಾಗದಿದ್ದರೆ ಅದೊಂದು ಮಹಾಕಾರ್ಯವಾಗುವದು. ನನ್ನ ಜೀವನದಲ್ಲಿ ಅದೊಂದು ಮಹಾಪ್ರಯೋಗ ಮತ್ತು ನನ್ನ ಆಧ್ಯಾತ್ಮಿಕ ಪ್ರಗತಿಯಲ್ಲಿ ಒಂದು ಅವಶ್ಯಕ ಅವಸ್ಥೆ.

ಈ ನೈತಿಕ ಮನೋವಿಕಾರದ ಮುಂದೆ ಯಾರೇನು ಹೇಳಬಲ್ಲರು ?

"ಆಗಸದ ಅಂಗಳದಿ ಹೊಸ ತಾರೆಯೊಂದು
ಕಣ್ಣಳವಿನಲಿ ತೇಲಿಬರುತಿರಲು, ನಿಂದು
ನೋಡಿ ಪುಲಕಿತನಾದ ನೋಟಕನ ತೆರದೆ
ಹಿಗ್ಗಿನಲಿಯುಬ್ಬಿ ನಾ ಮೈಮನವ ಮರೆದೆ"

ಆತ್ಮ ಸಮರ್ಪಣೆ

ಮನೀಷಿಗಳದೂ ಋಷಿಗಳದೂ ದಾರಿಯೇ ಬೇರೆ. ಪ್ರಪಂಚದಲ್ಲೆಲ್ಲ ಅದು ಒಂದೇ ಬಗೆಯಾಗಿದೆ. ಶತಮಾನಗಳ ಸೀಮೆಯನ್ನು ನೆಗೆದು ಬಂದ ಥಾಮಸ್ ಕೆಂಪಿಸ್‌ರ ಧ್ವನಿಯನ್ನು ಬಹುಶಃ ಕೇಳುತ್ತಿರುವಂತೆ ಅನಿಸಿತು.

"ಯಾವ ಮನುಷ್ಯ, ಪ್ರಾಣಿಯೂ ನನಗೆ ವ್ಯತ್ಯಯವಾಗದಂತಹ ಆ ಸ್ಥಾನವನ್ನು ನಾನು ಮುಟ್ಟತಕ್ಕುದಾದರೆ ನಿಮ್ಮ ಅಧಿಕತರ ಅನುಗ್ರಹದ ಅವಶ್ಯಕತೆಯೆನಗಿದೆ ಪ್ರಭುವೆ! ಯಾಕಂದರೆ ನನ್ನನ್ನು ಯಾವುದೊಂದು ವಸ್ತು ಹಿಂದೆ ಜಗ್ಗುತಿರುವವರೆಗೆ ನಿರಾತಂಕವಾಗಿ ನಾನು ನಿನ್ನೆಡೆಗೆ ನೆಗೆದು ಬರಲಾರೆ ದೇವಾ !"

ಮತ್ತು

"ಎಲ್ಲ ಪ್ರಾಣಿಗಳ ತೊಡಕಿನಿಂದ ಮಾನವನು ಮುಕ್ತನಾಗದಿರುವ ವರೆಗೆ ದೈವೀ ವಸ್ತುಗಳತ್ತ ಆತನ ಬಗೆ ಹರಿಯಲಾರದು. "

....

"ಮಾನವನ ಆತ್ಮವು ಉನ್ನತಿಯನ್ನೈದದಿದ್ದರೆ

-೧೦ನೇ ಪುಟ ನೋಡಿರಿ

ದಶಾಂಶ ನಾಣ್ಯಪದ್ಧತಿ

ದಶಾಂಶ ನಾಣ್ಯಪದ್ಧತಿಯ ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯಾರ್ಥ ಕಳಿಸಬೇಕೆಂದು ಕೇಂದ್ರ ಶಾಸನಸಭೆಯು ನಿರ್ಣಯಿಸಿದ್ದರಿಂದ ಮತ್ತು ಈ ನಿರ್ಣಯಕ್ಕೆ ನಾನು ಕೆಲಮಟ್ಟಿಗೆ ಕಾರಣನಾದುದರಿಂದ, ನನ್ನ ಅಭಿಪ್ರಾಯವನ್ನು ಸಾರ್ವಜನಿಕರ ಮುಂದಿಡುವದು ನನ್ನ ಕರ್ತವ್ಯವಾಗಿರುತ್ತದೆ.

ದಶಾಂಶ ಗಣಿತವು ಸರಳವಿದೆಯೆಂಬ ಮಾತು ನನಗೆ ಗೊತ್ತಿದೆ. ಆದರೆ ಈ ಸಂಬಂಧದಲ್ಲಿ ನಾವು ಎರಡು ಸಂಗತಿಗಳನ್ನು ಲಕ್ಷದಲ್ಲಿಟ್ಟುಕೊಳ್ಳಬೇಕಾಗಿದೆ. (೧) ದಶಾಂಶ ಪದ್ಧತಿಯು ಕಾಗದ ಮೇಲಿನ ಲೆಕ್ಕಕ್ಕೆ ಹಗುರಾಗಿರುವದಲ್ಲದೆ ಬಾಯಿ ಲೆಕ್ಕಕ್ಕಲ್ಲ ಮತ್ತು (೨) ದಶಾಂಶ ಪದ್ಧತಿಯ ಸರಳತೆಯು ಹತ್ತರ ಅಂಕಿಯಲ್ಲಿರದೆ ಅದನ್ನು ಸೂಚಿಸುವ ಪೂಜಿಯಲ್ಲಿರುತ್ತದೆ. ಗಣಿತಶಾಸ್ತ್ರ ಸಂಶೋಧಕರು ದಶಕಗಳನ್ನು ಸೂಚಿರುವದಕ್ಕೆ ಪೂಜಿಯನ್ನು ಉಪಯೋಗಿಸದೆ ಎಂಟು ಅಥವಾ ಹದಿನಾರರ ಗುಣಿತಗಳನ್ನು ಸೂಚಿಸುವದಕ್ಕೆ ಬಳಿಸಿದ್ದರೆ ದಶಾಂಶ ಪದ್ಧತಿಯ ಅನುಕೂಲತೆಗಳು ಎಂಟು ಮತ್ತು ಹದಿನಾರರ ಗುಣಿತಗಳಿಗೆ ಪ್ರಾಪ್ತವಾಗುತಿದ್ದವು. ಅವರು ಹಾಗೆ ಮಾಡದಿದ್ದುದು ದುರ್ದೈವ. ಯಾಕಂದರೆ ವ್ಯವಹಾರದಲ್ಲಿ ಯಾವದೊಂದು ವಸ್ತುವನ್ನು ಒಂದೈದಾಂಶ, ಒಂದು ಹತ್ತನೆಯ ಅಂಶ ಮೊದಲಾದವುಗಳಲ್ಲಿ ಭಾಗಿಸುವದಕ್ಕಿಂತ ಅರ್ಧ, ಕಾಲು ಮತ್ತು ಅರೆ ಕಾಲುಗಳಲ್ಲಿ ವಿಭಾಗಿಸುವದು ಹಗುರಾಗಿರುತ್ತದೆ. ಏಳು ವರ್ಷದ ಮಗು ಉದ್ದ ದಾರವೊಂದನ್ನು ಅಳತೆ ಗೋಲಿನ ಸಹಾಯವಿಲ್ಲದೆ ಎರಡು, ನಾಲ್ಕು, ಎಂಟು ಮತ್ತು ಹದಿನಾರು ಸಹ, ಭಾಗಗಳನ್ನಾಗಿ ಮಾಡಬಲ್ಲದು. ಆದರೆ ಒಂದೈದಾಂಶ ಮತ್ತು ಒಂದು ಹತ್ತನೆಯ ಅಂಶದಲ್ಲಿ ಭಾಗಿಸುವದು ಸುಶಿಕ್ಷಿತನಿಗೂ ಸಾಧ್ಯವಿಲ್ಲ.

ಗಣಿತಶಾಸ್ತ್ರದಲ್ಲಿ ಕ್ರಾಂತಿ ಮಾಡಬೇಕೆಂಬ ಉದ್ದೇಶದಿಂದ ನಾನೀಗ ನಿಬಂಧ ಬರೆಯುತ್ತಿಲ್ಲವಾದ್ದರಿಂದ ಈ ವಿಷಯವನ್ನು ಹೆಚ್ಚಾಗಿ ಚರ್ಚಿಸ ಬಯಸುವದಿಲ್ಲ. ಇಂದಿನ ಮಾನವಜನಾಂಗ ಇರುವ ವರೆಗೆ ದಶಾಂಶ ಪದ್ಧತಿಯನ್ನು ನಾವು ಒಪ್ಪಿಕೊಳ್ಳಲೇಬೇಕಾಗುವದು ಮತ್ತು ಸಾಧ್ಯವಿದ್ದಷ್ಟು ಅದರ ಉಪಯೋಗ ತೆಗೆದುಕೊಳ್ಳಬೇಕಾಗುವದು. ದಶಕದ ಗುಣಿತಗಳನ್ನು ಜಗತ್ತಿನಲ್ಲಿ ಸುಶಿಕ್ಷಿತ ಮತ್ತು ಅಶಿಕ್ಷಿತರೆಲ್ಲರೂ ಉಪಯೋಗಿಸುತ್ತಾರೆ. ೧೦, ೨೦ ಅಥವಾ ೧೦೦ ರೂಪಾಯಿಗಳೆಂದಾಗಲೀ ಇಲ್ಲವೆ ಮಣ, ಸೇರು, ಅಡಿ ಅಥವಾ ಗಜ ಎಂದಾಗಲೀ ಹೇಳುವ ರೂಢಿಯುಂಟು. ಆದರೆ ಒಂದು ವಸ್ತುವನ್ನು ವಿಭಾಗಿಸುವ ಪ್ರಸಂಗ ಬಂದರೆ ದೊಡ್ಡ ಗೊಂದಲವಾಗುತ್ತದೆ. ಈ ಗೊಂದಲದಲ್ಲಿ ಸಹ ಒಂದು ತರದ ನಕಾರಾತ್ಮಕ ವಿಲಕ್ಷಣತೆಯುಂಟು. ಮೆಟ್ರಿಕ್ ಪದ್ಧತಿಯ ಶೋಧನೆಯಾಗುವ ವರೆಗೆ ದಶಾಂಶದಲ್ಲಿ ವಿಭಾಗಿಸುವ ಪದ್ಧತಿ ಇದ್ದಿಲ್ಲ. ಅರ್ಧ ಅಥವಾ ಕಾಲಾಂಶದಲ್ಲಿ ಭಾಗಿಸುವ ಪ್ರಸಂಗವಿರದಿದ್ದರೆ ಒಂದು ಮೂರನೆಯ ಅಂಶ, ಒಂದು ಆರನೆಯ ಅಂಶ, ಒಂದು ಹನ್ನೆರಡನೆಯ ಅಂಶ ಅಥವಾ ಒಂದು ಇಪ್ಪತ್ತೆಂಟನೆಯ ಅಂಶ ಇರುತಿದ್ದಿತಲ್ಲದೆ ದಶಾಂಶದಲ್ಲಿ ಎಂದೂ ಭಾಗಿಸುತಿದ್ದಿಲ್ಲ. ಅಂಶಗಳನ್ನು ಸೂಚಿಸುವದಕ್ಕೆ ದಶಾಂಶ ಪದ್ಧತಿಯನ್ನು ಉಪಯೋಗಿಸುವ ರೂಢಿ ಹಲವಾರು ಶತಮಾನಗಳಿಂದಿದ್ದರೂ ಒಂದು ಹತ್ತನೆಯ ಅಂಶವು ಮಾತ್ರ ಆಕರ್ಷಕವಾಗಿರುವದಿಲ್ಲ.

ದಶಾಂಶ ಪದ್ಧತಿಯನ್ನು ಶೋಧಿಸಿದ ಗೌರವ ಹಿಂದುಸ್ತಾನದ್ದೆಂದು ನನಗೆ ಹಲವರು ನೆನಪು ಕೊಡಬಂದಿದ್ದಾರೆ. ಆದರೆ ಚತುರ್ಥಾಂಶ ಪದ್ಧತಿ ಶೋಧಿಸಿದ ಮಾನವೂ ಹಿಂದುಸ್ತಾನಕ್ಕೆ ಸಲ್ಲತಕ್ಕದ್ದು. ಅಂಶಗಳ ವ್ಯವಹಾರದಲ್ಲಿ ಅರಾಜಕತ್ವವಿದ್ದಾಗ ಚತುರ್ಥಾಂಶ ಪದ್ಧತಿಯನ್ನು ರೂಢಿಯಲ್ಲಿ ತಂದು ಸುವ್ಯವಸ್ಥೆಯುಂಟುಮಾಡಿರುತ್ತದೆ. ಇಂತು ರೂಪಾಯಿಯನ್ನು ನಾಲ್ಕು ಪಾವಲಿ, ೧೬ ಆಣೆ ಮತ್ತು ೬೪ ಬಿಲ್ಲಿಗಳಲ್ಲಿ, ಒಂದು ತೊಲೆಯನ್ನು ೩೨ ವಾಲುಗಳಲ್ಲಿ ಮತ್ತು ಒಂದು ಸೇರನ್ನು ೧೬ ಚಟಾಕುಗಳಲ್ಲಿ ವಿಭಾಗಿಸಲಾಗಿದೆ. ಯಾವದೊಂದು ವಸ್ತುವನ್ನು ಇನ್ನೂ ಹೆಚ್ಚು ಅಂಶಗಳಲ್ಲಿ ಭಾಗಿಸುವಂಥ ಪ್ರಸಂಗಗಳಲ್ಲಿ ಚತುರ್ಥಾಂಶದೊಡನೆ ದಶಾಂಶ ಪದ್ಧತೆಯನ್ನೂ ಬಳಸುತ್ತಾರೆ. ಇಂತು ಒಂದು ಸೇರನ್ನು ೪೦ ತೊಲಿಗಳಲ್ಲಿ, ಮಣವನ್ನು ೪೦ ಸೇರುಗಳಲ್ಲಿ ಮತ್ತು ಖಂಡಿಯನ್ನು ೨೦ ಮಣಗಳಲ್ಲಿ ಭಾಗಿಸಿದೆ.

ಅರ್ಧಾಂಶಗಳಲ್ಲಿ ಭಾಗಿಸುವದು ಹಗುರಾಗಿರುವದರಿಂದ ದಶಾಂಶವು ಬಳಕೆಯಲ್ಲಿ ಅಷ್ಟಾಗಿ ಬಂದಿಲ್ಲ. ಕೇಂದ್ರ ಶಾಸನ ಸಭೆಯ ಮಸೂದೆ ತಂದವರು ಸಹ ಅರ್ಧ ರೂಪಾಯಿ ಮತ್ತು ಪಾವಲಿಗಳನ್ನು ಬಿಟ್ಟುಬಿಡುವದಾಗಿಲ್ಲ. ಅಚ್ಚ ದಶಾಂಶ ಪದ್ಧತಿಯನ್ನು ಜಾರಿಯಲ್ಲಿ ತರುವದಾದರೆ ರೂಪಾಯಿಯನ್ನು ೧೦ ದಶಾಯಿಗಳಲ್ಲಿ, ಪ್ರತಿಯೊಂದು ದಶಾಯಿಯನ್ನು ೧೦ ಸೆಂಟುಗಳಲ್ಲಿ ಭಾಗಿಸಬೇಕಾಗುವದು. ಈಗಿನ ಅರ್ಧ ರೂಪಾಯಿ ೫ ದಶಾಯಿಗಳಿಗೆ ಸ್ಥಾನ ಬಿಟ್ಟುಕೊಡಬೇಕಾಗುವದು ಮತ್ತು ದಶಾಂಶ ಪದ್ಧತಿಯಲ್ಲಿ ಪಾವಲಿಗೆ ಯೋಗ್ಯ ಸ್ಥಾನವಿಲ್ಲೆಂದು ನಿರ್ಣಯ ಮಾಡಬೇಕಾಗುವದು. ಒಂದು ಅಥವಾ ಎರಡು ದಶಾಯಿ ನಾಣ್ಯಗಳನ್ನು ಮುದ್ರಿಸಿದರೆ ಸುಲಭವಾಗಬಹುದು. ಆದರೆ ಅರ್ಧ ರೂಪಾಯಿ ಮತ್ತು ಪಾವಲಿಗಳನ್ನು ಬದಲಿಸದೆ ಈಗಿನಂತೆ ಇಡಬೇಕೆಂದು ಮಾಡಿರುವರು. ಆದ್ದರಿಂದ ದಶಾಂಶ ನಾಣ್ಯಪದ್ಧತಿಯೆಂದು ಹೆಸರಿಟ್ಟರೂ ಚತುರ್ಥಾಂಶದ ಪಾವಲಿಯನ್ನು ೨೫ ಸೆಂಟುಗಳಲ್ಲಿ ವಿಭಾಗಿಸಬೇಕೆಂದಿರುವರು.

ಈ ತಪ್ಪಿಗಾಗಿ ಮಸೂದೆ ತಂದವರನ್ನು ನಾನು ದೂಷಿಸಲಾರೆ. ಆದರೆ ತರ್ಕಬದ್ಧ ಶಾಸ್ತ್ರವನ್ನು ಬಳಕೆಯಲ್ಲಿ ತಂದರೂ ವ್ಯಾವಹಾರಿಕ ಅನುಕೂಲತೆ ಬಿಟ್ಟುಬಿಡುವದು ಯೋಗ್ಯವಲ್ಲವೆಂದು ಅವರು ಸಹ ಒಪ್ಪುತ್ತಾರೆಂದು ಇದು ತೋರಿಸುತ್ತದೆ. ಇದೇ ಮಾರ್ಗವನ್ನು ಮುಂದಿಟ್ಟುಕೊಂಡು ಸೆಂಟಿನ ಬದಲು ಇನ್ನೊಂದು ನಾಣ್ಯ ಶೋಧಿಸಬೇಕೆಂದು ನಾನು ಹೇಳಬಯಸುತ್ತೇನೆ. ಆಣೆ ಮತ್ತು ಸೆಂಟುಗಳೆರಡೂ ಜಾರಿಯಲ್ಲಿರುವ ಮಧ್ಯಂತರ ಕಾಲದಲ್ಲಿ, ಹಳೆಯ ನಾಣ್ಯದಲ್ಲಿ ಕೊಡಬೇಕಾಗುವವನು ಹೆಚ್ಚು ತೆತ್ತಬೇಕಾಗುವದೆಂದು ಈ ಮೊದಲು ಪ್ರಸಿದ್ಧವಾದ ನನ್ನ ಬರಹಗಳಲ್ಲಿ ಕಾಣಿಸಿರುತ್ತೇನೆ. ಸೆಂಟುಗಳಲ್ಲಿ ಧಾರಣೆ ಬದಲಿಸುವಾಗಲೂ ಬೆಲೆ ತನ್ನಷ್ಟಕ್ಕೆ ತಾನೇ ಹೆಚ್ಚಾಗುವದೆಂದೂ ಹೇಳಿರುತ್ತೇನೆ. ಇಪ್ಪತ್ತರ ವರೆಗೆ ಬಹಳ ಪ್ರಯಾಸದಿಂದ ಎಣಿಸಬಲ್ಲ ಅಜ್ಞ ಹಳ್ಳಿಗರಿಗೆ ೩೫ ಸೆಂಟು, ೪೪ ಸೆಂಟು, ೬೨ ಸೆಂಟು ಇತ್ಯಾದಿ ಎಂದು ಬೆಲೆ ಹೇಳಿದರೆ ಅವರ ಬುದ್ಧಿಗೆ ಹೊಳೆಯುವದಿಲ್ಲ. ಆದರೆ ಅದನ್ನೆ ೫। ಆಣೆ, ೬॥ ಆಣೆ, ೧೧। ಆಣೆ ಎಂದು ಹೇಳಿದರೆ ಕೂಡಲೇ ತಿಳಿಯುವದು. ಈ ಅಂಕಿಗಳನ್ನು ಕೂಡಿಸಿ ರೂಪಾಯಿ, ಆಣೆ ಮತ್ತು ಪೈ ಎಷ್ಟಾಯಿತೆಂಬದನ್ನೂ ಅವರು ಹೇಳಬಲ್ಲರು. ಆದರೆ ಪರರ ಸಹಾಯವಿಲ್ಲದೆ ಸೆಂಟುಗಳ ಬೇರೀಜು ಮಾಡುವದು ಅವನಿಗೆ ಸಾಧ್ಯವಾಗುವದಿಲ್ಲ. ಶಿಕ್ಷಣ ಪ್ರಸಾರದ ಜೊತೆಗೆ ಈ ಸಮಸ್ಯೆಗಳು ದೂರಾಗುವವೆಂದು ಹೇಳಬಹುದು. ಆದರೆ ಅದು ಹಾಗೆ ಅಲಕ್ಷಿಸುವಷ್ಟು ಸಣ್ಣ ಮಾತಲ್ಲ.

ಇಷ್ಟಾದರೂ ನನ್ನ ವಾದವು ತತ್ವಜ್ಞರಿಗೆ ಮತ್ತು ಉದ್ದಿಮೆದಾರರಿಗೆ ತೃಪ್ತಿಕರವಾಗಲಿಕ್ಕಿಲ್ಲವೆಂದು ನನಗನಿಸುತ್ತದೆ. ತದ್ವಿರುದ್ಧ ಅವರ ಮಾತೇ ನಡೆಯಬಹುದು. ಅಥವಾ ಆಧುನಿಕ ಉದ್ಯೋಗಕ್ಕೆ ಅನುಕೂಲವಿರುವ ದಶಾಂಶ ಪದ್ಧತಿಗೆ ನಾನು ಕುರುಡನಾಗಬೇಕೆಂದೂ ಇಚ್ಛೆ ಇಲ್ಲ. ಆದುದರಿಂದ ಸಾಮಾನ್ಯ ಮನುಷ್ಯನಿಗೆ ಹಾನಿಯಾಗುವಂಥ ಮೇಲೆ ವಿವರಿಸಿದ ಕುಂದುಕೊರತೆಗಳನ್ನು ನಿವಾರಿಸುವ ಉಪಾಯ ಶೋಧಿಸುವದು ಅವಶ್ಯವಿದೆ. ಈ ದೃಷ್ಟಿಯಿಂದ ಮುಂದಿನ ನನ್ನ ಲೇಖದಲ್ಲಿ ಕೆಲವು ರಚನಾತ್ಮಕ ಸೂಚನೆಗಳನ್ನು ಮುಂದಿಡುವೆನು.

ಕೆ. ಜಿ. ಮಶ್ರುವಾಲಾ

[ನಾಣ್ಯಪದ್ಧತಿಯ ಬದಲಾವಣೆಗೆ ಅವಸರ ಮಾಡುವ ಅಗತ್ಯವಿಲ್ಲೆಂದು ಶ್ರೀ ಕೆ. ಜಿ. ಮಶ್ರೂವಾಲಾರವರ ಲೇಖವು ಸಿದ್ಧಮಾಡಿ ತೋರಿಸಿದೆ. ಇಂಥ ವಿಷಯಗಳು ರಾಷ್ಟ್ರೀಯ ಸರಕಾರ ಬರುವ ವರೆಗೆ ತಡೆಯಲಿ.

ಮೋ. ಕ. ಗಾಂಧಿ]

ಸಿಮುಲಾ ೩-೫-೪೬.

ಆತ್ಮ ನಿರೀಕ್ಷೆ

ಗಾಂಧೀಜಿ ಸಿಮುಲಾಕ್ಕೆ ತಲುಪಿದ ದಿನ, (ತಾ. ೨-೫-೪೬) ಸಾಯಂಪ್ರಾರ್ಥನಾ ಸಭೆಯಲ್ಲಿ ಅವರಿತ್ತ ಹಿಂದುಸ್ತಾನಿ ಭಾಷಣದ ಸಾರನಿದು:—

ಈ ಬಾರಿ ನಾನು ಸಿಮುಲಾಕ್ಕೆ ಬರಬೇಕಾಗುವದೆಂದು ನಾನೆಣಿಸಿರಲಿಲ್ಲ. ನಮಗೆ ದೇವರಲ್ಲಿ ವಿಶ್ವಾಸವಿದ್ದರೆ, ಅವನು ನಮ್ಮನ್ನು ಹೇಗೆ ನಿಯೋಜಿಸುವನೆಂಬದನ್ನು ಮುಂದಾಗಿ ಅರಿತುಕೊಳ್ಳಲು ನಾವು ಬಯಸುವದಿಲ್ಲ. ಬಂದದ್ದಕ್ಕೆಲ್ಲ ಎದೆಗೊಡಲು ಸಂಪೂರ್ಣ ಸಿದ್ಧರಾಗಿದ್ದರೆ ನಮ್ಮ ಪಾಲಿನ ಕೆಲಸವಾಯಿತು. ನಾಳೆ ನಮಗೇನಾಗುವದೆಂದು ಅರಿತುಕೊಳ್ಳುವ ಹಾದಿ ನಮಗಿಲ್ಲ. ಎಷ್ಟೋ ವೇಳೆ ನಾವು ಬಹಳ ಚಾತುರ್ಯದಿಂದ ರಚಿಸಿದ ಯೋಜನೆಗಳು ತಲೆಕೆಳಗಾಗಿ ಬಿಟ್ಟು ನಮಗೆ ಚಳ್ಳೆಕಾಯಿ ತಿನ್ನಿಸುತ್ತವೆ. ಆದುದರಿಂದ ಭವಿಷ್ಯತ್ತಿಗಾಗಿ ಚಿಂತೆ ಹಚ್ಚಿಕೊಳ್ಳದೆ ಅವನ ಇಚ್ಛೆಯಿದ್ದಂತಾಗಲೆಂದು ಅನಾಸಕ್ತರಾಗಿದ್ದು ಬಿಡುವುದಕ್ಕಿಂತ ಹೆಚ್ಚಿನ ಜಾಣತನ ಬೇರೊಂದಿಲ್ಲ.

ನಾನು ಇಲ್ಲಿ ಮಂತ್ರಿತ್ರಯ ಶಿಷ್ಟಮಂಡಲವನ್ನು ಕುರಿತು ಏನನ್ನೂ ಹೇಳಹೋಗಿಲ್ಲ. ನೀವೂ ಅದನ್ನು ಕುರಿತ ನಿಮ್ಮ ಕುತೂಹಲವನ್ನು ಹತ್ತಿಕ್ಕಬೇಕೆಂದು ಅಪೇಕ್ಷಿಸುತ್ತೇನೆ. ಎಲ್ಲರೂ ನಮ್ರರಾಗಿ ಕಾಯೋಣ, ದೇವರನ್ನು ಪ್ರಾರ್ಥಿಸೋಣ. ನಿನ್ನೆ ದಿಲ್ಲಿಯಲ್ಲಿ ನನ್ನ ಸಾಯಂಪ್ರಾರ್ಥನಾ ಸಭೆಗೆ ನೆರೆದವರಿಗೆ ಹೇಳಿದಂತೆ, ನಮ್ಮ ಸಾಮರ್ಥ್ಯದಿಂದ ನಾವೆಷ್ಟು ಗಳಿಸಬಲ್ಲೆವೊ ಅದಕ್ಕಿಂತ ಆಚೆಗೆ ಬ್ರಿಟಿಶ ಮಂತ್ರಿಶಿಷ್ಟರು ಹೋಗಲರಿಯರು. ಇದಕ್ಕೆ ವ್ಯತಿರಿಕ್ತವಾಗಿ ನಾವು ನಂಬಿದರೆ ನಾವೇ ಮರುಳರು. ಅವರು ಅದಕ್ಕಿಂತ ಮುಂದೆ ಹೋಗಲೆಳಸಿದರೂ ಅದರಿಂದ ನಮಗೆ ಅಜೀರ್ಣವಾದೀತು. ಅದರ ಪ್ರಯೋಜನವನ್ನು ಹೊಂದುವದು ನಮ್ಮಿಂದಾಗಲಿಕ್ಕಿಲ್ಲ. ಆದುದರಿಂದ ಈ ಸಂಧಾನ ನಿಷ್ಫಲವಾದರೂ ನಾನು ಅದಕ್ಕಾಗಿ ಅವರನ್ನು ದೂರಲಾರ ಬದಲಿಗೆ ನಮ್ಮ ದೌರ್ಬಲ್ಯಕ್ಕಾಗಿ ನಮ್ಮನ್ನೇ ನಾನು ದೂರೇನು. ಅದರಿಂದ ನಮ್ಮ ಶಕ್ತಿಯ ಅಳವು ನಮಗೆ ತಿಳಿದೀತು. ಶಕ್ತಿಯೆಂದರೆ ಅಹಿಂಸಾತ್ಮಕ ಶಕ್ತಿಯೆಂದು ನನ್ನ ಅರ್ಥ. ನಾವು ಅಹಿಂಸೆಯಿಂದಲೇ ಸ್ವರಾಜ್ಯಗಳಿಸಲು ಪಣ ತೊಟ್ಟಿದ್ದೇವೆ.

ಈ ಬಾರಿ ಬ್ರಿಟಿಶಮಂತ್ರಿ ಶಿಷ್ಟರು ನಮಗೆ ನ್ಯಾಯವನ್ನೇ ನೀಡುವರೆಂದೂ ಬ್ರಿಟಿಶ ಸರಕಾರದ ಪ್ರಭುತ್ವ ಇಲ್ಲಿಂದ ಪೂರ್ಣವಾಗಿ ಹಿಂತೆಗೆದುಕೊಳ್ಳಲ್ಪಡುವದೆಂದೂ ಇಂದು ಹಲವರು ನಂಬಿದ್ದಾರೆ. ಆ ನಂಬಿಕೆಯಲ್ಲಿ ನಾನೂ ಪಾಲುಗಾರನಾಗಿದ್ದೇನೆ. ಆ ನಂಬಿಕೆ ಎಷ್ಟು ಸರಿಯಾದ್ದೆಂಬುದನ್ನು ಕಾಲವೇ ನಿರ್ಣಯಿಸಬೇಕು.

ಇನ್ನು ನಾನು ನಿಮಗೆ ಹೇಳಬೇಕೆಂದಿದ್ದ ವಿಚಾರ. ಈಶೋಪನಿಷತ್ತಿನ ಮೊದಲನೆ ಮಂತ್ರವೇ ಮನುಷ್ಯನು ಮೊಟ್ಟಮೊದಲು ತನ್ನ ಸರ್ವಸ್ವವನ್ನು ಈಶನಿಗೆ ಅರ್ಪಿಸಬೇಕೆಂದುಪದೇಶಿಸುತ್ತದೆ. ಅವನು ತನ್ನದೆಂದು ಹೇಳಿಕೊಳ್ಳಬಹುದಾದ್ದು ಯಾವದೂ ಇಲ್ಲ. ಹೀಗೆ ಸರ್ವಾರ್ಪಣೆ ಮಾಡಿದ ನಂತರ ಮನುಷ್ಯನು ಅದರಿಂದ ತನ್ನ ನ್ಯಾಯವಾದ ಅವಶ್ಯಕತೆಗಳಿಗೆ ಬೇಕಾದುದನ್ನಷ್ಟೆ ತಿರುಗಿ ತೆಗೆದುಕೊಳ್ಳಬೇಕು. ಅದಕ್ಕಿಂತ ಹೆಚ್ಚು ಒಂದು ಕವಡೆ ಮುಟ್ಟತಕ್ಕದ್ದಲ್ಲ. ಪರಸ್ವಕ್ಕೆ ಅವನು ಬಾಯ್ಬಿಡಬಾರದು. ನನ್ನ ಉದಾಹರಣೆಯನ್ನೆ ತೆಗೆದುಕೊಳ್ಳಿರಿ. ನನಗಿಲ್ಲಿ ಒಂದು ರಾಜಪ್ರಾಸಾದದಲ್ಲೇ ವಸತಿ ಒದಗಿಸಲ್ಪಟ್ಟಿದೆ. ನಿಮ್ಮ ವ್ಯಾಕುಲಕರ ಪ್ರೀತಿಯ ಭಯದಿಂದ ನಾನು ಸರಕಾರದ ಅತಿಥ್ಯಕ್ಕೆ ಕೈನೀಡಬೇಕಾಯಿತು. ಅವರು ನನ್ನನ್ನು ಇಲ್ಲಿ ಇಳಿಸಿದರು. ಆದರೆ ಸರಕಾರದವರು ದೊಡ್ಡ ಬಂಗಲೆಯನ್ನು ನನ್ನ ಉಪಯೋಗಕ್ಕೆ ಕೊಟ್ಟಿದ್ದಾರೆಂದ ಮಾತ್ರಕ್ಕೆ ಬಂಗಲೆಯನ್ನೆಲ್ಲ ಉಪಯೋಗಿಸಿಕೊಳ್ಳುವ ಅಧಿಕಾರ ನನಗೆ ಬಂತೆಂದಲ್ಲ. ಟಾಲಸ್ಟಾಯನು ತನ್ನ ಅಪ್ರತಿಮ ನೀತಿಕಥೆಯೊಂದರಲ್ಲಿ ಮನುಷ್ಯನಿಗೆ ಎಷ್ಟು ನೆಲ ಬೇಕೆಂಬ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾನೆ.

ನೀನು ಓಡುತ್ತ ಸುತ್ತುವರಿಯಬಹುದಾದಷ್ಟು ಪರಿಧಿಯೊಳಗಿನ ಭೂಮಿಯೆಲ್ಲ ನಿನ್ನದಾಗಲೆಂದು ಒಬ್ಬಾತಗೆ ಪಿಶಾಚಿ ವರಕೊಟ್ಟು ಪ್ರಲೋಭನಗೊಳಿಸುತ್ತದೆ. ಆ ಮನುಷ್ಯ, ದುರಾಶೆಯಿಂದ ಪ್ರೇರಿತನಾಗಿ, ಓಡುತ್ತಾನೆ, ಓಡುತ್ತಾನೆ. ಕೊನೆಗೆ ಸೂರ್ಯನು ದಿಗಂತದಲ್ಲಿ ಮುಳುಗುವಾಗ್ಗೆ ಹಾಗೂ ಹೀಗೂ ತಾನು ಹೊರಟ ಸ್ಥಳಕ್ಕೆ ಬಂದು ಮುಟ್ಟುತ್ತಾನೆ. ಆದರೆ ಅಷ್ಟು ಹೊತ್ತಿಗೆ ಅವನ ಪ್ರಾಣ ಹಾರಿಹೋಗಿಬಿಡುತ್ತದೆ. ಅವನನ್ನು ಹುಗಿಯಲು ಬೇಕಾದುದು ಬರಿ ಆರಡಿ ನೆಲ. ಆದುದರಿಂದ ನಾನು ಈ ಬಂಗಲೆಯೆಲ್ಲ ನನಗೆ ಬೇಕೆಂಬ ಭ್ರಾಂತಿಯಿಂದ ಮಂಕಾಗಿ ಅದನ್ನು ವಶಪಡಿಸಿಕೊಳ್ಳಹೊರಟರೆ ನನ್ನನ್ನು ಮರುಳನೆಂದಾರು. ದೇವರಿಗೆ ಎಲ್ಲವನ್ನೂ ಅರ್ಪಿಸುವ ಸಮಾರಂಭವನ್ನೊಮ್ಮೆ ಮಾಡಿ ಆ ಮೇಲೆ ಗಡಿಮಿತಿಯಿಲ್ಲದೆ ಅವುಗಳ ಭೋಗದಲ್ಲಿ ಆಸಕ್ತನಾಗಬಹುವೆಂದು ವಿಕೃತಬುದ್ಧಿ ಮಾತ್ರವೇ ಆ ಮಂತ್ರಕ್ಕೆ ಅರ್ಥಹೇಳಬಲ್ಲದು. ಹಾಗೆ ಹೇಳಿದರೆ ಆ ಮಂತ್ರಕ್ಕೆ ಅಪಾರ್ಥ ಕಲ್ಪಿಸಿದಂತಾದೀತು. ಹೊಸ ಆಡಂಬರದ ಉಡಿಗೆತೊಡಿಗೆಗಳನ್ನು ಧರಿಸಿದವನಿಗಿಂತ ಹಳೆಯ ಹರಕು ಹೊಲಿದ ಬಟ್ಟೆ ತೊಟ್ಟವನನ್ನು ನೋಡಿದರೆ ನನಗೆ ಸಂತೋಷ. ಹರಿದ ಬಟ್ಟೆಗಳನ್ನು ಹಾಕಿಕೊಳ್ಳುವದು ಆಲಸ್ಯದ ಲಕ್ಷಣವಾದ್ದರಿಂದ ಅದು ನಾಚಿಕೆಗೇಡು. ಆದರೆ ಹರಕು ಹೊಲಿದ ಬಟ್ಟೆಗಳನ್ನು ತೊಡುವದು ನಿಮ್ಮ ಬಡತನದ ಅಥವಾ ತ್ಯಾಗ, ಉದ್ಯಮಶೀಲತೆಗಳ ದ್ಯೋತಕವಾಗುವದು. ಅದೇ ಪ್ರಕಾರ, ಯಾರಾದರೊಬ್ಬನು ನನಗೆ ೨೫೦೦೦ ರೂಪಾಯಿ ಕೊಟ್ಟರೆ ಮತ್ತು ನಾನು ಅದನ್ನು ನನ್ನ ಸ್ವಂತಕ್ಕಾಗಿ ವೆಚ್ಚ ಮಾಡಿದರೆ, ನಾನು ದರೋಡೆಗಾರ, ಕಳ್ಳ. ಅದರಲ್ಲಿ ನಾನು ನನ್ನ ಕೇವಲಾವಶ್ಯಕತೆಗಳಿಗೆ ಬೇಕಾದಷ್ಟನ್ನು ಮಾತ್ರ ತೆಗೆಯಬಲ್ಲೆ. ಉಪನಿಷತ್ತಿನ ಉಪದೇಶವೇ ಇದು.

ಸಿಮುಲಾ —ಪ್ಯಾರೇಲಾಲ

೩-೫-೪೬.

ನಾರದ ಪತ್ರ

(೯ ನೇ ಪುಟದಿಂದ ಮುಂದರಿದುದು)

ಹಾಗೂ ಜೀವಕೋಟಿಗಳ ಜಾಲದಿಂದ ಬಿಡುಗಡೆ ಹೊಂದದಿದ್ದರೆ ಮತ್ತು ದೇವ ಸಾಯುಜ್ಯವನ್ನು ಪೂರ್ಣವಾಗಿ ಪಡೆಯದಿದ್ದರೆ ಅವನ ಜ್ಞಾನ, ಆಸ್ತಿಗಳೆಲ್ಲ ನಿರರ್ಥಕ.''

''ದೈವೀಸಂಪತ್ತೇ ಸಂಪತ್ತು; ಮಿಕ್ಕದ್ದೆಲ್ಲ ಬರೀ ಬಯಲು''

ಅವರ ಊರ್ಧ್ವಗತಿಯಲ್ಲಿ ಆತಂಕರಾಗಿ ಹಿಂದೆಳೆಯಲು ಪಾಮರ ಪ್ರಾಣಿಗಳಾದ ನಮಗೆ ಅವ ಹಕ್ಕುಂಟು? ನಮ್ಮ ಸಹಾಯದ ಕೊರತೆಯಿಂದ ಅವರಿಗೆ ತೊಂದರೆಯಾದೀತೆಂದು ಬಗೆಯುವದು ನಮ್ಮ ಒಣ ಬಿಂಕವಾಗುತ್ತಿತ್ತು. ನಾನು ಒಳಗಾದೆ. ''ನೀವು ಬಗೆದಂತಾಗಲಿ'' ಎಂದು ನಾನು ಅವರಿಗೆ ಹೇಳಿದೆ ''ಸಿಕ್ಕ ಮೊದಲನೇ ಗಾಡಿಯಿಂದಲೇ ನಾವು ದಿಲ್ಲಿಗೆ ಮರಳುವೆವು.'' ಸರದಾರರಿಗೆ ನನ್ನ ನಿರ್ಣಯವನ್ನು ತಿಳಿಸಿದೆ. ಅವರು ಏನು ಹೇಳಬಹುದೋ ಎಂದು ಚಕಿತನಾಗಿದ್ದೆ. ಕೆಲಮಟ್ಟಿಗೆ ಗಾಬರಿಯಾಗಿದ್ದೆನೆಂದು ಒಪ್ಪಿಕೊಳ್ಳದಿರಲಾರೆ. ಆದರೆ ''ನೀನನ್ನುವದು ಸರಿ. ಅವರ ಊರ್ಧ್ವಗತಿಯಲ್ಲಿ ಸಹಚರಿಗಳಾಗುವದು ನಮಗೆ ಯಾವಾಗಲೂ ಸಾಧ್ಯವಾಗಲಿಕ್ಕಿಲ್ಲ ಅಥವಾ ಅವರ ವಿಚಾರ ಪ್ರಣಾಲಿಯನ್ನು ಪೂರ್ಣ ಅರಿತುಕೊಳ್ಳುವದೂ ಸಾಧ್ಯವಾಗಲಿಕ್ಕಿಲ್ಲ. ಆದರೆ ಅವರ ಮಾರ್ಗದಲ್ಲಿ ಅಡ್ಡಬರಲು ನಮಗಾವ ಹಕ್ಕೂ ಇಲ್ಲ'' ಎಂದು ಅವರು ಅಂದುಬಿಟ್ಟರು.

ಸಿಮ್ಲಾ, ಪ್ಯಾರೆಲಾಲ

ಶನಿವಾರ ೪-೫-೪೬.

ಕ ರ್ನಾ ಟ ಕ

ಧಾರವಾಡ

ಧಾರವಾಡದ ಅಸಿಸ್ಟಂಟ ರೇಶನಿಂಗ ಆಫೀಸರರಾದ ಶ್ರೀ ಮುತ್ಸದ್ದಿಯವರನ್ನು ಜಿಲ್ಲಾ ಕಲೆಕ್ಟರರು ಬಾಯಿ ಹುಕುಮಿನಿಂದ ತಾವು ತೆಗೆದೊಗೆದಿದ್ದನ್ನು ತಡೆಹಿಡಿದು ಪುನಃ ಕೆಲಸದ ಮೇಲೆ ತೆಗೆದುಕೊಂಡಿರುವರೆಂದು ತಿಳಿಯುತ್ತದೆ.

ಕರ್ನಾಟಕ ಪ್ರಾಂತಿಕ ಹರಿಜನಸೇವಕ ಸಂಘದ ಅಧ್ಯಕ್ಷರೂ ಹುಬ್ಬಳ್ಳಿಯ ಪ್ರಮುಖ ಉದ್ದಿಮೆದಾರರೂ ಆಗಿರುವ ಶ್ರೀ ಫಕೀರಪ್ಪ ಘೋಡಕೆ ಯವರು ಮುಂಬಯಿ ಮೇಲ್ಮನೆ (ಕೌನ್ಸಿಲ್)ಗೆ ಸದಸ್ಯರಾಗಿ ನಾಮಕರಣ ಮಾಡಲ್ಪಡುವ ಸಂಭವವಿದೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಅಖಿಲ ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರೀ ಮಂಡಳದ ಸಭೆ ೧೫ ನೇ ತಾರೀಕು ಕರ್ನಾಟಕ ವಿದ್ಯಾವರ್ಧಕ ಸಂಘದ ಚಾಮರಾಜ ಮಂದಿರದಲ್ಲಿ ಸೇರುವದು.

ಧಾಪ್ಳೇಬಿನ್ನೂರಿನ ವ್ಯಾಪಾರಿಗಳಾದ ಶ್ರೀ ಮುರಿಗೆಪ್ಪ ಟೆಂಕಾರಿ ಅವರು ಸಿಗರೇಟನ್ನು ಹೆಚ್ಚಿನ ಬೆಲೆಗೆ ಮಾರಿದ್ದಕ್ಕೆ ಖಟ್ಲೆಗೆ ಗುರಿಯಾಗಿದ್ದಾರೆ. ಸಬ್ ಇನಸ್ಪೆಕ್ಟರರು ನೋಟುಗಳ ಮೇಲೆ ಸಹಿ ಮಾಡಿ ಬೇರೆಯವರನ್ನು ಆ ಅಂಗಡಿಗೆ ಕಳಿಸಿದ್ದರು. ಹೆಚ್ಚಿನ ಬೆಲೆಗೆ ಅವರು ಸಿಗರೇಟು ಕೊಟ್ಟ ಕೂಡಲೆ ಸಬ್ ಇನಸ್ಪೆಕ್ಟರರು ಅಲ್ಲಿಗೆ ಹೋಗಿ ತಮ್ಮ ಸಹಿಯಿದ್ದ ನೋಟು ಮತ್ತು ಸಿಗರೇಟನ್ನು ಜಪ್ತಮಾಡಿಕೊಂಡು ಹೋದರು.

ಹಿರೇಕೆರೂರಲ್ಲಿ ಹಾಯಸ್ಕೂಲು ಸ್ಥಾಪಿಸಲು ೧೫ ಸಾವಿರ ರೂಪಾಯಿ ಕೂಡಿಸಲು ಶ್ರೀ ಪ್ರಭಪ್ಪಾ ಹಾದ್ರಿಹಳ್ಳಿ ಇವರು ಉಪವಾಸ ನಡೆಸಿದ್ದರು. ಆದರೆ ಪ್ರಮುಖರ ಆಶ್ವಾಸನ ದೊರೆತಿದ್ದರಿಂದ ಅದನ್ನು ನಿಲ್ಲಿಸಿದ್ದರು. ಆದರೆ ಈ ವರೆಗೆ ಏನೂ ಕೆಲಸ ಆ ಬಗ್ಗೆ ನಡೆಯದ್ದರಿಂದ ೫ ನೇ ತಾರೀಕಿನಿಂದ ಮತ್ತೆ ಉಪವಾಸ ಸುರುಮಾಡಿದ್ದಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ವಾರ್ಷಿಕ ಸಾಧಾರಣ ಸಭೆ ಗುರುವಾರ ೧೬-೫-೪೬ ನೇ ದಿನ ಹುಬ್ಬಳ್ಳಿಯಲ್ಲಿ ಪ್ರಾಂತಿಕ ಕಚೇರಿಯಲ್ಲಿ ಮಧ್ಯಾಹ್ನ ೩ ಕ್ಕೆ ಸೇರುವದು. ಈ ಸಭೆಯಲ್ಲಿ ಅಧಿಕಾರಿಗಳ ಆಯ್ಕೆ ಏ ಆಯ ಸಿ ಸಿ ಸದಸ್ಯರ ಆಯ್ಕೆ ಮೊದಲಾದ ಕಾರ್ಯಗಳು ನಡೆಯುವವು.

ಹುಬ್ಬಳ್ಳಿಯಲ್ಲಿಯ ಸಿಲೆಕ್ಟ ಬಟ್ಟೆ ಅಂಗಡಿಗಳಿಗೆ ಉಣ್ಣೆ ಶಾಲುಗಳು ಬಂದಿದ್ದು ಅಪ್ಪಣೆ ಚೀಟಿ ತಂದವರಿಗೆ ಅವು ಮಾರಲ್ಪಡುವವು. ಅಪ್ಪಣೆ ಚೀಟಿ ಬೇಕಾದವರು ಹುಬ್ಬಳ್ಳಿ ಸೀದಾಧಿಕಾರಿಗಳಿಗೆ ಅರ್ಜಿ ಮಾಡಿಕೊಳ್ಳಬೇಕು.

ವಿಜಾಪುರ

ವಿಜಾಪುರ ಮೋಟರ ಟ್ರಾನ್ಸಪೋರ್ಟ ಕಂಪನಿಯ ಡ್ರಾಯವ್ಹರರು ೯ ದಿನಗಳ ವರೆಗೆ ಸಂಪು ಹೂಡಿದ್ದರು. ಅದು ಶ್ರೀ ಎಸ್ ಎಂ ವರ್ತಿಯವರ ಮಧ್ಯಸ್ಥಿಕೆಯಿಂದ ೬ ನೇ ತಾರೀಕು ರಾತ್ರಿ ಮುಕ್ತಾಯವಾಯಿತು. ಒಡೆಯರು ಕೆಲಸಗಾರರ ಸಂಬಳ ಹಾಗು ಭತ್ತೆಯನ್ನು ಮೇ ೧ ರಿಂದ ೧೦೦ ಕ್ಕೆ ೩೦ ರಂತೆ ಹೆಚ್ಚಿಸಲು ಒಪ್ಪಿಕೊಂಡಿದ್ದಾರೆ. ಸಂಪಿನ ಅವಧಿಯಲ್ಲಿ ಏನಾದರೂ ಅಸಭ್ಯ ಮಾತಾಡಿದ್ದರೆ ಅದಕ್ಕಾಗಿ ಕೆಲಸಗಾರರು ವಿಷಾದ ಪ್ರದರ್ಶಿಸಿದರು.

೧೯೪೨ ನೇ ಅಗಸ್ಟದಿಂದ ಕಾಣೆಯಾದ ಗಲಗಲಿಯ ಗುರುರಾವ ಮಧ್ವ ಹಬ್ಬು ಮತ್ತು ಚಿಕ್ಕರಾಗಿಯ ದುಂಡಪ್ಪ ಮರಿಯಪ್ಪ ಉಪ್ಪಾರ ಇವರ ಮೇಲಿನ ವಾರಂಟುಗಳನ್ನು ವಿಜಾಪುರ ಜಿಲ್ಹಾ ಮ್ಯಾಜಿಸ್ಟ್ರೇಟರು ರದ್ದುಪಡಿಸಿದ್ದಾರೆ.

ಇಪ್ಪತ್ತು ಜನ ದರೋಡೆಗಾರರ ತಂಡೊಂದು ಆಯುಧಗಳಿಂದ ಸುಸಜ್ಜಿತವಾಗಿ ವಿಜಾಪುರದ ಸಮೀಪದಲ್ಲಿರುವ ಗಂಗಾರಾಮ ತುಕಾರಾಮ ಲಮಾಣಿ ಎಂಬವನ ಮನೆ ಒಡೆದು ೪೦೦೦ ರೂಪಾಯಿ ಬೆಲೆಯ ಒಡವೆ ಮತ್ತು ರೋಖ ಹಣ ದೋಚಿಕೊಂಡು ಹೋಗಿರುವರು. ಮನೆಯಲ್ಲಿಯ ಜನರನ್ನೂ ಗಾಯಗೊಳಿಸಿದ್ದಾರೆ.

೩ ನೇ ತಾರೀಕು ವಿಜಾಪುರ ಜುಮ್ಮಾಮಸೀದೆ ಪೇಟೆಯಲ್ಲಿ ಒಂದು ಮನೆಯಲ್ಲಿ ಕಳವಾಗಿ ೮೦೦ ರೂಪಾಯಿ ಬೆಲೆಯ ಒಡವೆಗಳು ಮಾಯವಾಗಿರುವವು.

ಬಾಗಲಕೋಟೆಯಲ್ಲಿ ಗೋ ಸಂವರ್ಧನ ಸಂಸ್ಥೆಯ ನೇತೃತ್ವದಲ್ಲಿ ಬರಗಾಲ ನಿಮಿತ್ತ ದನಗಳನ್ನು ಪುಕ್ಕಟೆ ಮೇಯಿಸುವ ಹಟ್ಟಿಯೊಂದನ್ನು ೫ ನೇ ತಾರೀಕಿನ ದಿನ ಪ್ರಾರಂಭಿಸಿದರು.

ಬೆಳಗಾವಿ

ಬೆಳಗಾವಿ ಜಿಲ್ಹೆಯಲ್ಲಿ ಬರಗಾಲ ಪ್ರದೇಶದಲ್ಲಿರುವ ತೊಂಡೀಕಟ್ಟೆ ಕೆರೆ ಕೆಲಸದ ಕೂಲಿಯವರಿಗೆ ಸಾಮಾನ್ಯ ಕೂಲಿಗಾರರಿಗಿಂತ ಕೆಲಸ ಹೆಚ್ಚು ಬೀಳುತ್ತಿದ್ದು ಹೊಟ್ಟೆತುಂಬ ಕೂಲಿ ಸಿಗುವದಿಲ್ಲ ಆ ಭಾಗದ ಸರಕಾರಿ ಅಂಗಡಿಗಳಲ್ಲಿ ಕೇವಲ ನವಣೆ ಪೂರಯಿಸುತ್ತಿರುವರು. ಹೈನವಂತೂ ಇಲ್ಲವೇ ಇಲ್ಲ ಹೀಗಾಗಿ ಕೂಲಿಯವರ ಪ್ರಕೃತಿಯ ಮೇಲೆ ದುಷ್ಪರಿಣಾಮವಾಗಹತ್ತಿದೆ.

ತೊಂಡೀಕಟ್ಟೆಯಲ್ಲಿ ಶ್ರೀ ಅಣ್ಣಪ್ಪ ಬಟಕುರ್ಕಿಯವರು ಅನ್ನಛತ್ರವೊಂದನ್ನು ಪ್ರಾರಂಭಿಸಿದ್ದಾರೆ. ದಿನಾಲು ನೂರಕ್ಕಿಂತ ಹೆಚ್ಚು ಜನ ಊಟ ಮಾಡುತ್ತಾರೆ. ಈ ಅನ್ನಛತ್ರಕ್ಕೆ ಎಲ್ಲರೂ ಸಹಾಯ ಮಾಡಬೇಕೆಂದು ಅವರು ಬಿನ್ನವಿಸುತ್ತಾರೆ.

ಪ್ರತಿ ಜಿಲ್ಹೆಗೊಂದರಂತೆ ಹೊಸ ಝೋನಲ್ ಮೋಟರ ಸಾರಿಗೆ ಕಂಪನಿಗಳನ್ನು ಸ್ಥಾಪಿಸಬೇಕೆಂಬ ವಿಚಾರನಡೆದಿದೆಂದು ತಿಳಿಯುತ್ತದೆ. ಆ ದಿಸೆಯಲ್ಲಿ ಅಂಕೆ ಸಂಖ್ಯೆಗಳನ್ನು ಕಲೆಹಾಕಲಾಗುತ್ತದೆ.

ಅಥಣಿ ತಾಲೂಕಿನ ಪ್ರಸಿದ್ಧ ಕೊಲೆಗಡಕನೂ ದರೋಡೆಗಾರನೂ ಎನಿಸಿದ್ದ ಈಶ್ಯಾ ಹಣಮಾಪುರ ಇವನು ಮದಭಾವಿ ಜಾತ್ರೆಯಲ್ಲಿ ಹೊಡೆಯಲ್ಪಟ್ಟನು. ಅವನನ್ನು ಗುರುತಿಸಿ ಹಿಡಿಯ ಹೋದಾಗ ಅವನು ಏಳು ಬಾರಿನ ಪಿಸ್ತೂಲು ಹಾರಿಸಿದನು. ಆದರೆ ಗುಂಡುಯಾರಿಗೂ ತಾಗಲಿಲ್ಲ ಕೂಡಿದವರು ಅವನ ಕಾಲಿಗೆ ಕೊಡೆಯಿಂದ ಹೊಡೆದದ್ದರಿಂದ ಅವನು ಮೃತಪಟ್ಟನು. ಅವನ ಇಬ್ಬರು ಸಂಗಡಿಗರಿಗೂ ಗಾಯಗಳಾಗಿವೆ.

ಬಳ್ಳಾರಿ

ಬಳ್ಳಾರಿ ತಾಲೂಕ ಕಾಂಗ್ರೆಸ ಪ್ರತಿನಿಧಿ ಚುನಾವಣೆ ೬ನೇ ತಾರೀಕಿಗೆ ನಡೆಯಿತು ಆದರೆ ಮತಪ್ರದಾನ ಪ್ರಾರಂಭವಾದ ಕೂಡಲೆ ಮತಗಟ್ಟೆಯಲ್ಲಿ ಉಸಿರಾಡಲು ಅವಕಾಶವಿರದಂತೆ ಜನಜಂಗುಳಿ ಬಂದು ಸೇರಿ ದೌರ್ಜನ್ಯದ ಲಕ್ಷಣ ತೋರಿಬಂದದ್ದರಿಂದ ಚುನಾವಣೆ ಅಧಿಕಾರಿಗಳು ಚುನಾವಣೆ ಆರಂಭವಾದ ೧ ಗಂಟೆಯಲ್ಲಿ ಮತಗಟ್ಟೆಯನ್ನು ಮುಚ್ಚಿದರು.

ಮದ್ರಾಸ ಸರಕಾರದ ದೇವಸ್ಥಾನ ಮಠ ಮತ್ತು ವಿಶೇಷ ಕಂದಾಯಖಾತೆಯ ಮಾನ್ಯ ಮಂತ್ರಿಗಳಾದ ಕೋಟಿರಡ್ಡಿಯವರು ಬಳ್ಳಾರಿ ಭಾಗದ ಬರಗಾಲ ಹಾಗು ಆಹಾರ ಪರಿಸ್ಥಿತಿ ಪರಿಶೀಲನೆಗಾಗಿ ಬಳ್ಳಾರಿಗೆ ಬಂದು ಅಧಿಕಾರಿಗಳೊಡನೆ ಅಧಿಕಾರೇತರರೊಡನೆ ವಿಚಾರ ವಿನಿಮಯ ಮಾಡಿದರು. ಬರಗಾಲದ ಕೂಲಿ ಗಂಡಸರಿಗೆ ೮ ಆಣೆ, ಹೆಂಗಸರಿಗೆ ೬ ಆಣೆ ಇದ್ದುದು ಸಾಲುವದಿಲ್ಲೆಂದು ಹೇಳಲು ಹೆಚ್ಚಿಸುವ ಬಗ್ಗೆ ವಿಚಾರ ಮಾಡುವದಾಗಿ ಮಂತ್ರಿಗಳು ಹೇಳಿದರು.

ಬಳ್ಳಾರಿ ಜಿಲ್ಹಾ ಗ್ರಾಮಾಧಿಕಾರಿಗಳು ೨ನೇ ತಾರೀಕು ಶ್ರೀ ಎಂ. ಕೇಶವರಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರಕಾರದವರು ತಮ್ಮ ಬೇಡಿಕೆ ಮಾನ್ಯ ಮಾಡದಿದ್ದರೆ ಜೂನ ೧ ರಿಂದ ಸಂಪು ಹೂಡಬೇಕೆಂದು ಸರ್ವಾನುಮತದಿಂದ ಸ್ವೀಕೃತವಾಯಿತು.

ಯಮ್ಮಿಗನೂರಿನಲ್ಲಿ ೮ನೇ ತಾರೀಕು ಡಾ. ಪಿ. ಎಸ್. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಬರಗಾಲಕ್ಕೆ ತುತ್ತಾದ ಜಿಲ್ಹೆಯಲ್ಲಿ ಕೂಡಲೆ ಮದ್ಯಪಾನ ಪ್ರತಿಬಂಧ ಕಾಯ್ದೆ ಜಾರಿ ಮಾಡಿ ಜನರನ್ನು ಬರಗಾಲ ಬವಣೆಯಿಂದ ಉಳಿಸಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು.

ಯಮ್ಮಿಗನೂರಿನಲ್ಲಿ ನಡೆಯುತಿರುವ ೬೦೦೦ ಕೈಮಗ್ಗಗಳಿಗೆ ಈಗ ಕೊಡುತ್ತಿರುವ ನೂಲಿನಸೀದಾ ಒಂದು ವಾರ ಕೂಡ ಸಾಲುವದಿಲ್ಲ. ತಿಂಗಳಲ್ಲಿ ಮೂರು ವಾರ ನೇಕಾರರು ನಿರುದ್ಯೋಗಿಗಳಾಗಿ ಕೂಡ್ರಬೇಕಾಗುತ್ತದೆ. ಅದುದರಿಂದ ಲೋಕಪ್ರಿಯ ಸರಕಾರದವರು ಸಾಕಷ್ಟು ನೂಲು ಪೂರಯಿಸುವ ಏರ್ಪಾಡು ಮಾಡಬೇಕೆಂದು ಸಾರ್ವಜನಿಕ ಸಭೆಯಲ್ಲಿ ಮತ್ತೊಂದು ಗೊತ್ತುವಳಿ ಸ್ವೀಕೃತವಾಯಿತು.

ಹಂಪೆಯ ಹೇಮಕೂಟ ದೇವಾಂಗಮಠದಲ್ಲಿರುವ ಶ್ರೀ ರಾಮಲಿಂಗಸ್ವಾಮಿಯ ಎದುರು ಬಸವಣ್ಣನ ಮೂರ್ತಿಯನ್ನು ಶುಕ್ರವಾರ ೩ನೇ ತಾರೀಕು ರಾತ್ರಿ ಸುಟ್ಟು ಕುತ್ತಿಗೆ ಸುತ್ತಲೂ ಸೀಳುವಂತೆ ಮಾಡಿ ರುಂಡವು ದೇಹದಿಂದ ಭಿನ್ನವಾಗುವಂತೆ ಮಾಡಿರುವರು.

ಮದ್ದಗಿರಿಯಲ್ಲಿ ಇಷ್ಟರಲ್ಲಿಯೇ ಜಿಲ್ಹಾ ಬೋರ್ಡಿನವರು ಒಂದು ಖಾದಿ ಕೇಂದ್ರವನ್ನು ತೆರೆಯಲಿರುವರು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹಾ ಸಾಹಿತ್ಯ ಸಮ್ಮೇಲನ ಶ್ರೀ ಕೋ. ಶಿ. ಕಾರಂತರ ಅಧ್ಯಕ್ಷತೆಯಲ್ಲಿ ಮೇ ೨೩-೨೩ ನೆಯ ದಿನ ಕುಮಟೆಯಲ್ಲಿ ಜರಗುವದು. ಸಮ್ಮೇಲನಕ್ಕೆ ಬರುವ ಪ್ರತಿನಿಧಿಗಳು ಮೊದಲೆ ಬರೆದುಕೊಂಡರೆ ಅವರ ಬಗ್ಗೆ ಏರ್ಪಾಡ ಮಾಡಲಾಗುವದೆಂದು ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಸುಭಾಸ ಸೇನೆಯ ೮ ಜನ ಸೈನಿಕರು ಮುಕ್ತರಾಗಿ ಮರಳಿ ಬಂದಿದ್ದಾರೆ. ಅವರೆಲ್ಲ ಕಾರವಾರ ತಾಲೂಕಿನವರಿದ್ದು ಬಹಳ ಬಡವರಿರುವರು. ಇವರು ಬ್ರಿಟಿಶ್ ಸೇನೆಯಲ್ಲಿದ್ದಾಗ ಜರ್ಮನ್‌ರ ಕೈಸೆರೆಯಾಗಿದ್ದರು. ೨ ನೇ ತಾರೀಕಿನ ದಿವಸ ಅವರ ಮೆರವಣಿಗೆಯಾಯಿತು. ಈ ಜನರಿಗೆ ಪರಿಹಾರದ ಅವಶ್ಯಕತೆಯಿದ್ದು ಧನ ಸಂಗ್ರಹದ ಕಾರ್ಯ ನಡೆಯಲಿದೆ.

ಮುಂಬಯಿ

ಈ ವರೆಗೆ ವಾರಂಟ ರದ್ದಾದ ಇಲ್ಲವೆ ಖಟ್ಲೆ ಹಿಂತೆಗೆದುಕೊಳ್ಳಲ್ಪಟ್ಟ ಯಾರ ಅಸ್ತಿಗಳಾದರೂ ೧೯೪೨ ನೇ ಚಳವಳಿ ಮೂಲಕ ಜಪ್ತ ಇಲ್ಲವೆ ವಶ ಮಾಡಿಕೊಳ್ಳಲ್ಪಟ್ಟಿದ್ದರೆ ಅವುಗಳನ್ನು ತಿರುಗಿಕೊಡಲು ಸರಕಾರದವರು ನಿರ್ಧರಿಸಿದ್ದಾರೆ. ಆ ರೀತಿ ಅಧಿಕಾರಿಗಳಿಗೆ ಹುಕುಮು ವಿಧಿಸಲಾಗಿದೆ. ಸಂಬಂಧಿಸಿದ ಜನರು ಆಸ್ತಿಗಳನ್ನು ಜಪ್ತಮಾಡಿದ ಇಲ್ಲವೆ ವಶಪಡಿಸಿಕೊಂಡ ಅಧಿಕಾರಿಗಳಿಗೆ ಅರ್ಜಿ ಮಾಡಿಕೊಳ್ಳಬೇಕೆಂದು ಮುಂತಾಗಿ ಮುಂಬಯಿ ಸರಕಾರದವರು ವಿಧಿಸಿದ್ದಾರೆ.

ಮುಂಬಯಿ ಸರಕಾರದವರು ಒಂದು ಹುಕುಮು ಹೊರಡಿಸಿ ಪ್ರಾಂತದಲ್ಲಿಯ ಪೋಲೀಸ ದಳದ ಅಧಿಕಾರಿ ಮೊದಲು ಮಾಡಿ ಪೋಲೀಸರವರೆಗೆ ಎಲ್ಲರೂ ಸಾರ್ವಜನಿಕರೊಡನೆ ವಿನಯದಿಂದ ನಡೆದುಕೊಳ್ಳಬೇಕೆಂದು ವಿಧಿಸಿದ್ದಾರೆ. ಪ್ರತಿಯೊಬ್ಬ ಪೋಲೀಸ ಅಧಿಕಾರಿ ತಾನು ಜನರ ಸೇವಕನೆಂದು ತಿಳಿದುಕೊಂಡು ವರ್ತಿಸಬೇಕು. ಜನರೊಡನೆ ವಿನಯದಿಂದ ನಡೆದುಕೊಂಡು ಅವರಿಗೆ ಅವಶ್ಯಬಿದ್ದಾಗೆಲ್ಲ ನೆರವಾಗಬೇಕು.

ಅರ್ಝುದ ಹಿಂದ ಸೈನಿಕರನ್ನು ಪೋಲೀಸ ಖಾತೆಯಲ್ಲಿ ಸೇರಿಸಿಕೊಳ್ಳಬೇಕೆಂಬುದನ್ನು ಮುಂಬಯಿ ಗೃಹಮಂತ್ರಿಗಳು ಪರಿಶೀಲಿಸುತ್ತಿದ್ದಾರೆ.

ಸಾತಾರಾ ಜಿಲ್ಹೆಯಲ್ಲಿ ೧೯೪೨ ರಿಂದ ಪತ್ರಿ ಸರಕಾರವನ್ನು ಸ್ಥಾಪಿಸಿಕೊಂಡು ಬಂದ ನಾನಾ ಪಾಟೀಲರ ಮೇಲಿನ ವಾರಂಟನ್ನು ಸರಕಾರದವರು ರದ್ದುಪಡಿಸಿದ್ದರಿಂದ ಅವರೀಗ ಪ್ರಕಟರಾಗಿರುವರು. ಕೋರೆಗಾವದಲ್ಲಿ ಪ್ರಚಂಡ ಜಾಹೀರ ಸಭೆಯಲ್ಲಿ ಅವರನ್ನು ಸ್ವಾಗತಿಸಲಾಯಿತು. ಅವರು ಸಾತಾರಾ ಜಿಲ್ಹೆಯಲ್ಲಿ ಸಂಚರಿಸುತ್ತಿರುವರು.

ನಾವಿಕರ ದಂಗೆ ಹೂಡಲು ಪ್ರಯತ್ನಿಸಿದ ಆರೋಪಕ್ಕಾಗಿ ಹವಾಲದಾರ ಅರಯಾಲ ಬಾದಶಹಾ ಮೊದಲಾದವರ ಮೇಲಿನ ಖಟ್ಲೆ ಲೆ. ಕ. ನೋಹಿತೆಯವರ ಅಧ್ಯಕ್ಷತೆಯಲ್ಲಿ ಸೇರಲಿರುವ ದಂಡಿನ ನ್ಯಾಯಾಲಯದಲ್ಲಿ ಪ್ರಾರಂಭವಾಗಲಿದೆಯೆಂದು ಪ್ರಕಟಿಸಲಾಗಿದೆ.

ಸಾಮ್ಯವಾದಿ ಮತ್ತು ಫಾರವರ್ಡಬ್ಲಾಕದ ಮುಖಂಡರ ಸಭೆಯನ್ನು ಇದೇ ೧೪ ನೇ ತಾರೀಖಿಗೆ ಮುಂಬಯಿಯಲ್ಲಿ ಕರೆಯಲಾಗಿದೆ. ಆರ್. ಎಸ್ ರುಯಿಕರರು ಶ್ರೀ ಅಚ್ಯುತ ಪಟವರ್ಧನರ ಸಲಹೆ ಪಡೆದು ಈ ಸಭೆ ಕರೆದಿದ್ದಾರೆ. ಈ ಎರಡೂ ಪಕ್ಷ ಕೂಡಿಸುವದು ಸಾಧ್ಯವಿದೆಯೋ ಮುಂತಾದ್ದನ್ನು ಈ ಸಭೆಯಲ್ಲಿ ವಿಚಾರಿಸಲಾಗುವದು.

ಡಾ. ಜಿ. ವಿ. ದೇಶಮುಖರ ಪತ್ನಿಯವರಾದ ಶ್ರೀ ಅನ್ನಪೂರ್ಣಾಬಾಯಿಯವರು ಹೃದಯ ವಿಕಾರದಿಂದ ೬ ನೇ ತಾರೀಕು ಲೋನಾವಳದ ತಮ್ಮ ಮನೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಭೂಲಾಭಾಯಿ ದೇಸಾಯರ ನಿಧನ ನಿಮಿತ್ತ ಪುಣೆಯಲ್ಲಿ ಹೊರಟ ಮೆರವಣಿಗೆಯ ಕಾಲಕ್ಕೆ ಗಲಭೆ ಸಂಭವಿಸಿ ೭ ಜನ ಪೋಲೀಸರನ್ನೊಳಗೊಂಡು ೨೦ ಜನರಿಗೆ ಗಾಯ ಸಂಭವಿಸಿತು. ರೇ ಮಾರ್ಕೆಟಿನ ಸಭೆಯ ಕಾಲಕ್ಕೆ ಕೂಡಿದ ಜನಜಂಗುಳಿಗೆ ಪೋಲೀಸರು ಚದುರಿಹೋಗಲು ಹೇಳಿದರು. ಆದರೆ ಜನ ಚದುರಲಿಲ್ಲ. ಪೋಲೀಸರ ಮೇಲೆ ಕಲ್ಲುಬಿದ್ದವು. ಅನಂತರ ಸಶಸ್ತ್ರ ಪೋಲೀಸರು ಬಂದು ಶಾಂತಮಾಡಿದರು.

ಕೃಪಾಣ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಅಡ್ಡಾಡತಕ್ಕದ್ದಲ್ಲೆಂದು ಅಹಮದಾಬಾದ ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿದ ಹುಕುಮಿನ ವಿರುದ್ಧ ಚಳವಳಿ ನಡೆಸಲು ಸ್ಥಳಿಕ ಸೀಖರು ಕೃಪಾಣ ಸಂರಕ್ಷಕ ಸಮಿತಿಯನ್ನು ರಚಿಸಿದ್ದಾರೆ. ಅವರು ನ್ಯಾಯಿಸರಾಯ ಮೌಲಾನಾ ಆಝುದ, ಪಂಡಿತ ಜವಾಹರಲಾಲ, ಮಾಸ್ತರ ತಾರಾಸಿಂಗ ಮೊದಲಾದವರಿಗೆ ಪತ್ರ ಬರೆದು ಲೋಕನಿಯುಕ್ತ ಸರಕಾರ ಮತ್ತು ತಮ್ಮಲ್ಲಿ ಉಂಟಾದ ಮತಭೇದ ಮಂಡಿಸಿದ್ದಾರೆ. ೩೦೦೦ ಶೀಖರು ಜುರಂಗಗಳಿಗೆ ಹೋಗಲು ಸಿದ್ಧರಿರುವರೆಂದು ತಿಳಿಸಿದ್ದಾರೆ.

ಸುರತ ಜಿಲ್ಹಾ ಸ್ಕೂಲಬೋರ್ಡಿನ ಅಧ್ಯಕ್ಷರಾದ ಕೆ. ದೇಸಾಯಿ ಇವರು ಬೋರ್ಡಿನ ಅಧಿಕಾರಿಗಳಿಗೆ ಇನ್ನು ಮೇಲೆ ಇಂಗ್ಲೀಷದ ಬದಲು ಗುಜರಾಥಿಯನ್ನು ಸರಕಾರಿ ಭಾಷೆಯನ್ನಾಗಿ ಉಪಯೋಗಿಸಬೇಕೆಂದು ಅಪ್ಪಣೆ ವಿಧಿಸಿದ್ದಾರೆ.

ಹಿಂದುಸ್ತಾನ

ಮದ್ರಾಸ

ಜಸ್ಟಿಸ್ ಬಾಯರ್ಸರರು ಆತ್ಮರಕ್ಷಣೆ ಮತ್ತು ಮತ್ತು ಜನರನ್ನು ಬೆದರಿಸಲು ಗುಂಡು ಹಾರಿಸಿದರೆಂದೂ ಜನರನ್ನು ಗಾಯಗೊಳಿಸುವ ಇಲ್ಲವೆ ಕೊಲ್ಲುವ ಉದ್ದೇಶ ಅವರದಿರಲಿಲ್ಲೆಂದೂ ಆರೋಪಿತರ ವಕೀಲರು ಹೇಳಿದ್ದನ್ನು ಮಾನ್ಯಮಾಡಿ ಮದ್ರಾಸ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ದೋಷಮುಕ್ತ ಮಾಡಿದರು. ಆತ್ಮರಕ್ಷಣೆಯ ಕ್ರಮಬದ್ಧ ರೀತಿ ಬಿಟ್ಟು ನಡೆದುಕೊಂಡಿರುವದಿಲ್ಲಾದ್ದರಿಂದ ಅವರನ್ನು ಸೆಶನ್ಸ ಕಮಿಟ್ ಮಾಡಲು ಸಬಲ ಕಾರಣಗಳಿಲ್ಲೆಂದೂ ಮ್ಯಾಜಿಸ್ಟ್ರೇಟರು ತೀರ್ಪಿನಲ್ಲಿ ಬರೆದಿರುತ್ತಾರೆ.

ಕುಲಶೇಖರ ಪಟ್ಟಣದ ದರೋಡೆ ಖಟ್ಲೆಯಲ್ಲಿ ಮರಣ ಶಿಕ್ಷೆಗೆ ಗುರಿಯಾದ ನಂತರ ವ್ಹಾಯಿಸರಾಯರ ವಿಶೇಷಾಧಿಕಾರದಿಂದ ಆಮರಣ ಶಿಕ್ಷೆಗೆ ಗುರಿಯಾಗಿದ್ದ ಕಾಶಿರಾಜ ಮತ್ತು ರಾಜಗೋಪಾಲರ ಬಿಡುಗಡೆ ಅಜ್ಞಾ ಹೊರಟದೆಂದು ತಿಳಿಯುತ್ತದೆ.

ಮದ್ರಾಸದ ಹೊಸ ಗವರ್ನರರಾದ ಸರ್ ಆರ್ಚಿಬಾಲ್ಡ ಎಡ್ವರ್ಡ ನೈ ಅವರು ಪತ್ನಿ ಪರಿವಾರದೊಂದಿಗೆ ಮದ್ರಾಸಿಗೆ ಬಂದು ಅಧಿಕಾರ ಸ್ವೀಕರಿಸಿದರು.

ಪಂಜಾಬದ ಮುಂಗಾರಿ ಬೆಳೆಯಿಂದ ಭಾರತ ಸರಕಾರ ಮದ್ರಾಸಕ್ಕೆ ೪೦ ಸಾವಿರ ಟನ್ ಅಕ್ಕಿಯನ್ನು ಹೆಚ್ಚಿಗೆ ಕೊಡಲೊಪ್ಪಿದೆ. ಈ ಅಕ್ಕಿಯಲ್ಲಿ ಮದ್ರಾಸಿಗೆ ೩೩೦೦೦ ಟನ್, ಮೈಸೂರಿಗೆ ೪೫೦೦೦ ಟನ್, ತಿರುವಾಂಕೂರಿಗೆ ೨೫೦೦ ಟನ್ ಅಕ್ಕಿ ದೊರೆಯಲಿದೆ.

ಮದ್ರಾಸಕ್ಕೆ ಬಂದ ಒಂದು ಪಾರ್ಸಲಿನಲ್ಲಿ ೪೦ ಸಾವಿರ ರೂಪಾಯಿಗಳ ಬಂಗಾರ ಕಳವಾಗಿ ಹೋದ ಘಟನೆಯ ವಿಚಾರಣೆಗಾಗಿ ಮದ್ರಾಸ ಪೋಲೀಸರು ಮುಂಬಯಿಗೆ ಬಂದು ವಿಚಾರಣೆ ನಡೆಸಿದ್ದಾರೆ.

ಬಂಗಾಲ

ಬಂಗಾಲ ಶಾಸನ ಸಭೆಯ ಅಧ್ಯಕ್ಷರಾಯ್ಕೆ ಇದೇ ೧೪ನೇ ತಾರೀಕಿಗೆ ಜರಗುವುದು. ಅದನ್ನು ನಡೆಸುವದಕ್ಕಾಗಿ ವಿ ಡಿ ಗ್ಲಾಂಡಿಗರನ್ನು ತಾತ್ಪೂರ್ತಿಕ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಬ್ರಿಟಿಶ್ ಮಂತ್ರಿಗಳ ರಾಯಭಾರವು ಒಂದು ವೇಳೆ ಅಯಶಸ್ವಿಯಾದರೆ ಕಲಕತ್ತೆ ನಗರದಲ್ಲಿ ಏಳಬಹುದಾದ ದಂಗೆಯನ್ನೆದುರಿಸಲು ಈಗಾಗಲೆ ೧೦ ಸಾವಿರ ಗುರ್ಖಾ ಸೈನಿಕರನ್ನು ಕರೆಸಲಾಗಿದೆಂದು ವಿಶ್ವಸನೀಯವಾಗಿ ತಿಳಿಯುತ್ತದೆಂದು ಸ್ಟಾರ ಆಫ ಇಂಡಿಯಾ ಪತ್ರಿಕೆ ಬರೆಯುತ್ತದೆ. ೫ನೇ ತಾರೀಕಿನ ದಿವಸ ಈ ಸೈನಿಕರನ್ನು ಚೌರಂಗಿ ಬೀದಿಯಲ್ಲಿ ತಿರುಗಾಡಿಸಲಾಯಿತಾದ್ದರಿಂದ ಈ ಸುದ್ದಿ ನಿಜವೆಂದು ಜನ ನಂಬುತ್ತಾರೆ. ಸರಕಾರಿ ವರ್ಗದವರಿಂದ ಮಾತ್ರ ಇದಕ್ಕೆ ಪುಷ್ಟಿ ದೊರೆತಿಲ್ಲ.

ಮೇ ೪ಕ್ಕೆ ಮುಗಿದ ವಾರದಲ್ಲಿ ಕಲಕತ್ತೆಯಲ್ಲಿ ಉಪವಾಸದಿಂದ ಒಬ್ಬನು ಸತ್ತಿರುವನು.

ಕಲಕತ್ತೆಯಲ್ಲಿ ಕರ್ಜನ್ ತೋಟದ ನೈಋತ್ಯಕ್ಕಿರುವ ತೋಟದಲ್ಲಿ ಆ. ಹಿಂ. ಸೇನೆಯ ಮುಖ್ಯ ಸೇನಾಪತಿಯ ವಸ್ತ್ರಗಳಿಂದೊಪ್ಪುವ ದೇಶಗೌರವ ಸುಭಾಷಚಂದ್ರ ಬೋಸರ ಸಂಗಮರವರಿ ಶಿಲಾ ಪ್ರತಿಮೆಯನ್ನು ನಿಲ್ಲಿಸಬೇಕೆಂದು ಶ್ರೀ ಜಿ. ಎಲ್. ಶಹಾರು ಕಲಕತ್ತಾ ಕಾರ್ಪೊರೇಶನದಲ್ಲಿ ಒಂದು ಸೂಚನೆ ಮಂಡಿಸಿದ್ದಾರೆ. ಕಾರಪರೇಶನದ ಸಭಾ ಭವನದಲ್ಲಿ ಸುಭಾಷರ ಭಾವಚಿತ್ರವನ್ನು ತೂಗಹಾಕಬೇಕೆಂದು ಶ್ರೀ ಪಿ. ಎಸ್. ಬಾಬೂರಾವ ಮತ್ತೊಂದು ಸೂಚನೆ ಮಂಡಿಸಿದ್ದಾರೆ.

ಆಸಾಮ

ಹತ್ತಿ ಜವಳಿ, ನಾರು, ವಿದ್ಯುಚ್ಛಕ್ತಿ, ದೊಡ್ಡ ರಾಸಾಯನಿಕ ಉದ್ಯೋಗ, ಸಕ್ಕರೆ, ಕಾಗದ, ಯಂತ್ರೋಪಕರಣಗಳ ನಿರ್ಮಾಣ ಮೊದಲಾದ ಮುಖ್ಯ ಮುಖ್ಯ ಉದ್ಯೋಗಗಳನ್ನು ರಾಷ್ಟ್ರೀಕರಿಸಲಾಗುವದೆಂದು ಆಸಾಮದ ಯೋಜನಾ ಮತ್ತು ಬೆಳವಣಿಗೆ ಖಾತೆಯವರು ಪ್ರಕಟನೆ ಹೊರಡಿಸಿರುತ್ತಾರೆ. ೧೦ ಲಕ್ಷಕ್ಕಿಂತ ಹೆಚ್ಚಿಗೆ ಬಂಡವಲು ಹಾಕುವ ಉದ್ಯೋಗಗಳನ್ನೆಲ್ಲ ಸರಕಾರವೆ ವಹಿಸಿಕೊಳ್ಳಲಿರುವದು.

ಹೊಸದಿಲ್ಲಿ

ಅಂಚೆ ತಂತಿ ಬೇಡಿಕೆಗಳನ್ನು ಬಗೆಹರಿಸಿಕೊಳ್ಳಲು ನನ್ನ ಸಲಹೆಯಂತೆ ಮಧ್ಯಸ್ಥಿ ಮಂಡಳದೊಡನೆ ಸಹಕರಿಸಲು ಒಪ್ಪಿರುವದರಿಂದ ನನಗೆ ಸಂತೋಷವಾಗಿದೆಂದೇ ಈ ಕೆಲಸಗಾರರಿಗೆ ನ್ಯಾಯವಾದ ನಿರ್ಣಯ ಸಿಕ್ಕುವಂತೆ ನಾನು ನನ್ನ ಕೈಲಾದದ್ದನ್ನು ಮಾಡುವೆನೆಂದೂ ಮುಂತಾಗಿ ಮೌ. ಆಝಾದರು ಪ್ರಕಟನೆ ಹೊರಡಿಸಿದ್ದಾರೆ.

ಅಮೇರಿಕೆ ಮೇ ತಿಂಗಳಲ್ಲಿ ಹಿಂದುಸ್ತಾನಕ್ಕೆ ೨೦ ಸಾವಿರ ಟನ್ ಗೋವಿನ ಜೋಳವನ್ನು ಕಳಿಸಲಿದೆಂದು ತಿಳಿಯುತ್ತವೆ.

ರೇಲ್ವೆ ಜನರ ಬೇಡಿಕೆಗಳನ್ನು ಸರಕಾರ ಮನ್ನಿಸದಿದ್ದರೆ ಜೂನ ೨೭ಕ್ಕೆ ಸಂಪು ಹೂಡಲಾಗುವದೆಂದು ಸರಕಾರಕ್ಕೆ ಜೂನ ೧ ಕ್ಕೆ ಆ ಬಗ್ಗೆ ನೋಟೀಸ ಕೊಡಬೇಕೇದೂ ಹಿಂದುಸ್ತಾನದ ರೇಲ್ವೆ ಕೆಲಸಗಾರ ಮಹಾ ಮಂಡಳದ ಜನರಲ್ ಕೌನ್ಸಿಲ್ಲಿನ ಸಭೆಯಲ್ಲಿ ನಿರ್ಣಯಿಸಲಾಯಿತು. ೧೭ ಜನರ ಕ್ರಿಯಾ ಸಮಿತಿಯೊಂದನ್ನು ನಿಯಮಿಸಲಾಗಿದೆ.

ಸಂಸ್ಥಾನಗಳು

ಕೊಲ್ಹಾಪುರ ದಿವಾಣರು ಒಂದು ಹುಕುಮು ಹೊರಡಿಸಿ ಪತ್ರಿಸರಕಾರವನ್ನು ಸಂಸ್ಥಾನ ಮತ್ತು ಜಹಾಗೀರಗಳಲ್ಲಿ ಅಕ್ರಮ ಮಾಡಿದ್ದಾರೆ.

ಕೊಲ್ಹಾಪುರ ರೆಸಿಡೆನ್ಸಿ ಸಮೀಪದ ಬಾವಡಾ ಹಳ್ಳಿಯ ಮುಂದೆ ನಿರೋಧನ ಮಾಡಿದ್ದಕ್ಕೆ ಕೊಲ್ಹಾಪುರ ಪೋಲೀಸರು ೬ ನೇ ತಾರೀಕು ಮೂವರನ್ನು ಬಂಧಿಸಿದ್ದಾರೆ. ಅಬಕಾರಿ ಖಾತೆಯವರಿಗೆ ಅಡ್ಡಿ ಮಾಡಿದ ಹಾಗು ಕೆಲವರನ್ನು ಹೊಡೆದು ಆರೋಪ ಅವರ ಮೇಲೆ ಇಡಲಾಗಿರುವದು.

ಬೆಂಗಳೂರು ಮೈಸೂರು ಕೋಲಾರ (ಚಿನ್ನದ ಗಣಿ) ನಗರಗಳಲ್ಲಿ ಇದೇ ೧೫ ರಿಂದ ಲೋಟು ಸೀದಾ ಪ್ರಾರಂಭವಾಗಲಿದೆ.

ಮಿರಜೆಯ ಸಾರ್ವಜನಿಕ ಸಭೆಯಲ್ಲಿ ೫ ನೇ ತಾರೀಕು. ಎಸ್. ಎಂ. ಜೋಶಿಯವರ ಭಾಷಣವಾದ ನಂತರ ಪೋಲೀಸರು ೪—೫ ದಿನಗಳಿಂದ ಸಂಬಳ ತೆಗೆದುಕೊಳ್ಳಲು ನಿರಾಕರಿಸಿರುವರೆಂದು ಜಾಹೀರಮಾಡಲಾಯಿತು. ಸರಕಾರದವರ ಸಂಬಳದೊಂದಿಗೆ ೧೦ ರೂ. ಭತ್ತೆ ೩ ರೂ, ಸ್ಪೆಶಲ್ ಭತ್ತೆ ಕೊಡಲು ಸಿದ್ಧರಿರುವರು ಆದರೆ ಪೋಲೀಸರು ಸಂಬಳ ಪ್ರಮಾಣವನ್ನು ಹೆಚ್ಚಿಸಲು ಬೇಡುತಿರುವರು. ಈಗ ಅವರ ಕನಿಷ್ಟ ಸಂಬಳ ೧೩ ರೂ. ಇದೆ.

ದಕ್ಷಿಣ ಭಾಗದ ಅ. ಕಮೀಶನರರಾಗಿದ್ದ ಶ್ರೀ ಜಿ ಎಂ ವೈದ್ಯ ಅವರನ್ನು ಮಿರಜೆಯ ರಾಜಾಸಾಹೇಬರು ೧೯೪೬ ಜೂನದಿಂದ ದಿವಾಣರನ್ನಾಗಿ ನೇಮಿಸಿಕೊಂಡಿದ್ದಾರೆ.

ಭೂಲಾಭಾಯಿ ದೇಸಾಯರು

(೧ನೇ ಪುಟದಿಂದ ಮುಂದರಿದುದು)

೧೯೩೭ ರಲ್ಲಿ ಅವರು ಮುಂಬಯಿ ಪ್ರಾಂತಿಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

೧೯೪೦ ರಲ್ಲಿ ಪುನಃ ಭೂಲಾಭಾಯರ ಬಂಧನವಾಗಿ ಸಂರಕ್ಷಣ ಕಾಯಿದೆಯನ್ವಯ ಯರವಡಾ ಸೆರೆಮನೆಯಲ್ಲಿಡಲಾಯಿತು. ಆಗಿಂದಲೇ ಅವರ ಮೊದಲೇ ದುರ್ಬಲವಾಗಿದ್ದ ಪ್ರಕೃತಿಯಲ್ಲಿ ಅಸ್ವಾಸ್ಥ್ಯದ ಚಿಹ್ನೆಗಳು ಬೆಳೆದವು. ಅದೇ ಕಾರಣದಿಂದ ೧೯೪೨ ರಲ್ಲಿ "ಚಲೇಜಾವ" ಗೊತ್ತುವಳಿಯಾಗುವ ಸ್ವಲ್ಪ ಮೊದಲು ಅವರು ಕಾರ್ಯಸಮಿತಿಗೆ ರಾಜೀನಾಮೆಯಿತ್ತು ಹಿನ್ನೆಲೆ ಸೇರಬೇಕಾಯಿತು. ಆದರೂ ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗರು ಭಾಗ ವಹಿಸುವದು ಆರಂಭವಾದೊಡನೆ ಅವರು ಪುನಃ ಧೈರ್ಯದಿಂದ ಲಿಯಾಕತ ಅಲ್ಲಿಯವರೊಡನೆ ಮಾತುಕತೆ ನಡೆಸಿ "ದೇಸಾಯಿ—ಲಿಯಾಕತ್ ಒಡಂಬಡಿಕೆ"ಯೆಂದು ಮುಂದೆ ಪ್ರಸಿದ್ಧವಾದ ಸೂತ್ರದ ನಿರ್ಮಾಪಕರಲ್ಲೊಬ್ಬರಾದರು. ಈ ಸೂತ್ರದ ಪರಿಣಾಮವಾಗಿಯೆ ಮುಂದೆ ಸಿಮಲಾ ಪರಿಷತ್ತು ಜರಗಿದ್ದು ಈಚಿನ ಇತಿಹಾಸ.

ಆದರೆ ಈ "ಸೂತ್ರ" ಒಂದು ಬಗೆಯಲ್ಲಿ ಅವರ ರಾಜಕೀಯ ಕೀರ್ತಿ ಇಳಿಮೊಗವಾಗಲು ಕಾರಣವಾಯಿತು. ಕಾಂಗ್ರೆಸ್ ಮಹಾನಾಯಕರಿಗೆ ಅವರ ಈ ಸೂತ್ರ ಅಷ್ಟು ರುಚಿಸಲಿಲ್ಲ. ಆದರೆ ಆಝಾದ ಸೇನಾಧಿಕಾರಿಗಳ ವಿಚಾರಣೆಯಲ್ಲಿ ಅವರು ಗಳಿಸಿದ ಯಶಸ್ಸು ಅವರ ಪ್ರತಿಷ್ಠೆಯನ್ನು ಪುನಃ ಮೇಲಕ್ಕೆತ್ತಿತು. ಈ ಪ್ರಕರಣ ಮುಗಿಯುವಹೊತ್ತಿಗೆ ಭೂಲಾಭಾಯರ ಪ್ರಕೃತಿ ಸಂಪೂರ್ಣ ಕುಸಿದು ಬಿದ್ದಿತ್ತು. ಕೊನೆಯ ದಿನ ಕೇವಲ ಅಮ್ಲಜನಕ ವಾಯುವನ್ನು ಸೇದಿ ಅದರ ಬಲದಿಂದಲೇ ಅವರು ೧೦ ತಾಸು ಭಾಷಣ ಮಾಡಿದರು. ಅನಂತರ ಸಂಪೂರ್ಣವಾಗಿ ಅವರು ಅಸ್ವಸ್ಥತೆಯ ವಶರಾದರು.

ಭೂಲಾಭಾಯರ ನಿಧನದಿಂದಾದ ಹಾನಿಯನ್ನು ದೇಶ ತುಂಬಿಕೊಳ್ಳಲಾರದು.

ಪುಣೆಯಲ್ಲಿ ಬಸವಜಯಂತಿ

ನಾನಾಪೇಟೆಯಲ್ಲಿ ೪ ನೇ ತಾರೀಕು ಸಂಜೆಯ ೬॥ ಗಂಟೆಗೆ ಶ್ರೀ ಮಹಾತ್ಮಾ ಬಸವೇಶ್ವರರ ಜಯಂತ್ಯುತ್ಸವವು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಜಯಂತಿಯ ಉತ್ಸವದಲ್ಲಿ ಶ್ರೀಯುತ ವ್ಹಿ. ಎಸ್. ಟಿಳ್ಳಿ, ಜಿ. ಎಸ್. ಹಿರೇಮಠ ಮೊದಲಾದವರು ಭಕ್ತಿಭಾಂಡಾರಿ ಬಸವಣ್ಣನವರು ತಮ್ಮ ಸುಲಭವಾದ ಶೈಲಿಯಲ್ಲಿ ನಿರೂಪಿಸಿದ ಅಹಿಂಸೆ, ಸಮತಾವಾದ, ಸಹೋದರತೆ, ಸಾಹಿತ್ಯ, ಭಕ್ತಿ, ನೀತಿ ಮುಂತಾದ ಉದಾತ್ತ ತತ್ವಗಳನ್ನು ಕನ್ನಡಕ್ಕೆ ಹೊಸಯುಗವನ್ನು ತಂದು ಕೊಟ್ಟ ವಚನಸಾಹಿತ್ಯ ಮುಂತಾದ ವಿಷಯಗಳ ಮೇಲೆ ಜನರಿಗೆ ಮನವರಿಕೆಯಾಗುವಂತೆ ಸುಲಭವಾದ ಶೈಲಿಯಲ್ಲಿ ಭಾಷಣ ಮಾಡಿದರು. ಮತ್ತು ಈಗಿನ ತರುಣರು ಕೈಕೊಳ್ಳಬೇಕಾದ ಆದ್ಯ ಕರ್ತವ್ಯಗಳನ್ನು ಹೇಳಿದರು, ನಂತರ ಕುಮಾರಿ ಲೀಲಾವತಿ ಹಿರೇಮಠ ವಿಜಾಪುರ ಹಾಗು ಇನ್ನಿತರ ತರುಣರು ಬಸವೇಶ್ವರರ ವಚನಗಳನ್ನು ಸಂಗೀತದಲ್ಲಿ ಹಾಡಿದರು. ಕಡೆಗೆ ಮಂಗಲದೊಡನೆ ಸಭೆಯು ಮುಕ್ತವಾಯಿತು. ಈ ಉತ್ಸವಕ್ಕೆ ಅನೇಕ ಮಹಿಳೆಯರೂ ಮಹನೀಯರೂ ಆಗಮಿಸಿ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು.

ಇದೇ ಶುಭಮುಹೂರ್ತದಲ್ಲಿ ‘‘ವೀರಶೈವ ತರುಣ ಸಂಘ’’ವನ್ನು ಸ್ಥಾಪಿಸಿ ಇದಕ್ಕೆ ಶ್ರೀಯುತ ಜಿ. ಬಿ. ಹಿರೇಮಠರನ್ನು ಅಧ್ಯಕ್ಷರನ್ನಾಗಿ, ಶ್ರೀ ಎಮ್. ಎಸ್. ಜಡಿಯವರನ್ನು ಚೇರಮನ್ನರನ್ನಾಗಿ ಮತ್ತು ಶ್ರೀ ಉಪ್ಪಿನ ಎಮ್. ಎ. ಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಸರ್ವಾನುಮತದಿಂದ ಆರಿಸಲಾಗಿದೆ.

ಮುಂಬಯಿ ವ್ಹೆಟರಿನರಿ ಕಾಲೇಜದ ರನ್ನಮಹೋತ್ಸವ

ಹಿಂದುಸ್ತಾನದಲ್ಲಿ ಎಲ್ಲಕ್ಕೂ ಮೊದಲು ಅಂದರೆ ೧೮೮೬ ನೇ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದ ಮುಂಬಯಿಯಲ್ಲಿಯ ‘‘ವ್ಹೆಟರಿನರಿ ಕಾಲೇಜಿಗೆ ಅಗಸ್ಟ ೨ ನೇ ತಾರೀಕಿಗೆ ಅರವತ್ತು ವರುಷಗಳಾಗುತ್ತವೆ.

ಇದೇ ವರುಷ ಈ ಕಾಲೇಜು ಮುಂಬಯಿ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಟ್ಟದೆ. ಇನ್ನು ಮುಂದೆ ‘‘ವ್ಹೆಟರಿನರಿ ಕಾಲೇಜ ಗ್ರಾಜುಯೇಟ್’’ ಎಂಬ ಡಿಪ್ಲೊಮಾದ ಬದಲಾಗಿ ಬಿ. ಎಸ್. ಸಿ. (ವ್ಹೆಟರಿನರಿ) ಎಂಬ ಯುನಿವ್ಹರ್ಸಿಟಿ ಪದವಿಯು ಚತುರ್ವರ್ಷಾಂತ್ಯದಲ್ಲಿ ಕೊಡಲ್ಪಡುವದು. ಇಂಟರ್ ಸಾಯನ್ಸ (ಬಿ. ಗ್ರುಪ್) ಪಾಸಾದವರಿಗೆ ಮಾತ್ರ ಪ್ರವೇಶ ದೊರೆಯುತ್ತದೆ. ಮುಂಬಯಿ ಸರಕಾರದವರು ಮುಂಬಯಿ ಪ್ರಾಂತದವರ ಹಿತಾರ್ಥವಾಗಿ ಅರವತ್ತು ಶಿಷ್ಯವೃತ್ತಿ ಕೊಡುತ್ತಾರೆ.

ಈ ಕಾಲೇಜದ ಪ್ರಿನ್ಸಿಪಾಲರೂ ಶಿಕ್ಷಕರೂ ಕಾಲೇಜದ ಪದವೀಧರರೂ ಕೆಲವು ದಿನದ ಹಿಂದೆ ಸಭೆ ಸೇರಿಸಿ, ಬರುವ ನಾತಾಳ ರಜೆಯಲ್ಲಿ ಕಾಲೇಜದ ರನ್ನ ಮಹೋತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ಜರುಗಿಸಬೇಕೆಂತಲೂ ವ್ಹೆಟರಿನರಿ ಸಾಯನ್ಸದಲ್ಲಿ ವಿಶೇಷ ಶೋಧ ಮಾಡಲು ಅನುಕೂಲವಾಗಬೇಕೆಂದು ಈ ಕಾಲೇಜದ ಪದವೀಧರರಿಗೆ ಹಿಂದುಸ್ತಾನದಲ್ಲಿ ಎರಡು, ಪಾಶ್ಚಾತ್ಯದೇಶಕ್ಕಾಗಿ ಎರಡು ಹೀಗೆ ನಾಲ್ಕು ಶಿಷ್ಯವೃತ್ತಿ ಸ್ಥಾಪಿಸಿ ಕೊಡಬೇಕೆಂದು ಗೊತ್ತು ಮಾಡಿದ್ದಾರೆ.

ಕೇಂದ್ರದಲ್ಲಿ ಒಡನೆ ನಡುಗಾಲ ಸರಕಾರ ಸ್ಥಾಪಿಸುವ ನಿರ್ಧಾರ

(೪ನೇ ಪುಟದಿಂದ ಮುಂದರಿದುದು)

ಕಾಂಗ್ರೆಸ್ಸು ಇದಕ್ಕೆ ಸರ್ವಥಾ ಒಪ್ಪುವದು ಸಾಧ್ಯವೇ ಇಲ್ಲವೆಂಬುದು ಸ್ಪಷ್ಟವಾಗಿದೆ.

ಈ ಪ್ರಕಾರ ಮಂತ್ರಿತ್ರಯರ ಮುಂದೆ ಒಪ್ಪಂದದ ಹಾದಿಯೇ ಇಲ್ಲದಂತಾಗಿರುವದರಿಂದ ಅವರು ತಮ್ಮ ಕೊನೆಯ ನಿರ್ಣಯವನ್ನು ಕೊಡಬೇಕಾಗುವದು. ಈ ಕೊನೆಯ ನಿರ್ಣಯ ಸ್ವಾಭಾವಿಕವಾಗಿ ತಾತ್ಪೂರ್ತಿಕ ಸ್ವರೂಪದ್ದು ಅರ್ಥಾತ್ ಕೇಂದ್ರದಲ್ಲಿ ಪೂರ್ಣ ಹಿಂದೀಕೃತವಾದ ಕಾರ್ಯಕಾರೀ ಮಂಡಲವನ್ನು ಎಲ್ಲ ಪಕ್ಷಗಳನ್ನೊಳಗೊಂಡು ರಚಿಸುವದೆ ಇರಬೇಕಲ್ಲದೆ ಶಾಶ್ವತವಾದುದು ಇರಲಾರದೆಂದು ನಂಬಲಾಗಿದೆ. ಆದರೂ ಈಗ ನಡೆಯುತ್ತಿರುವ ಎರಡನೆಯ ಸೂಚನೆಯ ಚರ್ಚೆಯನ್ನು ಪರಿಣಾಮವನ್ನು ನೋಡದೆ ಯಾವುದನ್ನೂ ನಿರ್ಧರಿಸುವದು ಯೋಗ್ಯವಾಗಲಾರದು. ಇದೀಗ ಹೊರಬಿದ್ದಿರುವ ಹೇಳಿಕೆಯಂತೆ ಕೇಂದ್ರದಲ್ಲಿ ನಡುಗಾಲ ಸರಕಾರ ಸ್ಥಾಪಿಸುವದು ನಿಶ್ಚಿತವೆಂದು ಗೊತ್ತಾಗಿದ್ದರೂ ಅದರ ರೂಪರೇಷೆ, ಅದಕ್ಕೆ ಕಾಂಗ್ರೆಸ್ ಲೀಗ್‌ಗಳ ಪ್ರತಿಕ್ರಿಯೆ, ಏನೂ ಇನ್ನೂ ತಿಳಿದುಬಂದಿಲ್ಲ. ಕಾಂಗ್ರೆಸ್ ಲೀಗಗಳು ಅದರಲ್ಲಿ ಭಾಗವಹಿಸಲು ಒಪ್ಪಿವೆಯೋ ಇಲ್ಲವೊ ಎಂದು ಕೂಡ ತಿಳಿದಿಲ್ಲ.

ಗುರುವಾರ ಸಭೆ ಸ್ವಲ್ಪ ಕಾಲ ನಡೆದು ಪುನಃ ಶನಿವಾರಕ್ಕೆ ಮುಂದರಿಯಿತು. ಇದಕ್ಕೆ ಮೊದಲು ಮಿ. ಜಿನ್ನಾ ಹಾಗು ಪಂ. ಜವಾಹರಲಾಲರ ನಡುವೆ ಮಾತುಕತೆ ನಡೆದಿದ್ದು ಆ ಮೇಲೆ ಸಭೆ ಮುಂದೆ ಹಾಕುವ ನಿರ್ಣಯವಾಯಿತು. ಈಗ ಈ ಮಾತುಕತೆಗಳಲ್ಲಿ ಸಂಸ್ಥಾನಿಕರೂ ಸೇರಿರುವದರಿಂದ ಅದೀಗ ಚತುಷ್ಪಕ್ಷ ಸ್ವರೂಪ ತಳೆದಿದೆ.

ಬೆಂಗಳೂರು-ಮೈಸೂರು

ಮೈಸೂರು ವಿಶ್ವವಿದ್ಯಾಲಯದವರು ಇದೇ ಜೂನ ತಿಂಗಳಿಂದ ಒಂದು ಒಕ್ಕಲತನ ಕಾಲೇಜನ್ನು ಪ್ರಾರಂಭಿಸಲಿರುವರು.

ತುಮಕೂರು ಜಿಲ್ಹೆಯಲ್ಲಿ ಬರಗಾಲ ಪರಿಹಾರ ಕಾರ್ಯಕ್ಕಾಗಿ ಮೈಸೂರು ಸರಕಾರ ಒಂದು ಲಕ್ಷ ರೂಪಾಯಿ ಮಂಜೂರು ಮಾಡಿದೆ. ಕೆರೆಗಳನ್ನು ಕಾಪಾಡಿಕೊಳ್ಳುವದೇ ಮೊದಲಾದ ಕೆಲಸಗಳನ್ನು ಪ್ರಾರಂಭಿಸಲಾಗುವದು. ಈ ಕೆಲಸದಲ್ಲಿ ಹಿಂದಿನಂತೆ ರೈತರು ತಮ್ಮ ಪಾಲಿನ ಹಣವನ್ನು ಕೊಡಬೇಕಾಗಿಲ್ಲ.

ಮದರಾಸ ಪ್ರಾಂತ ಕೊಡಗು,ಮತ್ತು ಮೈಸೂರು, ತಿರುವಾಂಕೂರು, ಕೊಚ್ಚಿ, ಪುದುಕೋಟೆ ಸಂಸ್ಥಾನಗಳ ಪ್ರತಿನಿಧಿಗಳ ಸಭೆಯೊಂದು ಬೆಂಗಳೂರಲ್ಲಿ ಪ್ರಾದೇಶಿಕ ಆಹಾರ ಕಮೀಶನರರ ಅಧ್ಯಕ್ಷತೆಯಲ್ಲಿ ಕೂಡಿದಾಗ ಹಿಂದುಸ್ಥಾನ ಸರಕಾರ ಮದ್ರಾಸ ಪ್ರಾಂತಕ್ಕೆ ೫೦ ಲಕ್ಷ ಪೌಂಡು ಮತ್ತು ಮೈಸೂರಿಗೆ ೨೨,೫೦,೦೦೦ ಪೌಂಡು ಬಟಾಟೆ ಬಾಳಕಗಳನ್ನು ಒದಗಿಸಲು ಒಪ್ಪಿದೆಯೆಂದು ಪ್ರಕಟಿಸಲಾಯಿತು. ಗಡಿನಾಡುಪ್ರಾಂತ ಹಣ್ಣುಗಳ ಬಾಳಕಗಳನ್ನು ಕೊಡಲೊಪ್ಪಿದೆ. ಅಮೇರಿಕೆಯ ಸೈನ್ಯಖಾತೆಯವರು ಹೆಚ್ಚಾಗಿ ಉಳಿದ ಮೀನದ ಸಂಗ್ರಹ ಕೊಡಲು ಸಿದ್ಧರಿದ್ದರೂ ಅದನ್ನು ಕೊಳ್ಳಲು ಯಾರಿಗೂ ಅಸ್ಥೆಯಿಲ್ಲ. ನ್ಯೂಝೀಲಂಡು ೨೫೦೦೦ ಪೌಂಡ್ ಮಾಲ್ಪೆಡ ಹಾಲು ಮತ್ತು ೧೧೨,೦೦೦ ಪೌಂಡು ಹಾಲಿನ ಪುಡಿ ಹಾಗು ೪೩ ಲಕ್ಷ ಪೌಂಡು ಬಿಸ್ಕೀಟುಗಳನ್ನು ಹಿಂದುಸ್ಥಾನಕ್ಕೆ ಕೊಡಲೊಪ್ಪಿದೆಯೆಂದೂ ಅದರಲ್ಲಿ ಅರೆವಾಸಿಯನ್ನು ದಕ್ಷಿಣ ಹಿಂದುಸ್ಥಾನಕ್ಕೆ ಒದಗಿಸಲಾಗುವದೆಂದೂ ತಿಳಿಸಲಾಯಿತು. ಸಭೆಯಲ್ಲಿ ಮುಂಗಾರಿ ಬೆಳೆಯ ಯೋಜನೆ ಚರ್ಚಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ಇನ್ನೂ ಅಲ್ಲಲ್ಲೆ ಜಾರಿಯಲ್ಲಿರುವ ನಿರ್ಬಂಧ ಆಜ್ಞೆಗಳನ್ನೂ ಹಲವು ನಾಗರಿಕರ ಮೇಲಿರುವ ಗಡಿಪಾರಿನ ಆಜ್ಞೆಗಳನ್ನೂ ಸದ್ಯದ ಪರಿಸ್ಥಿತಿಯನ್ನು ಅನುಲಕ್ಷಿಸಿ ಮೈಸೂರು ಸರಕಾರದವರು ಪುನರ್ವಿಮರ್ಶಿಸಲು ಸಿದ್ಧರಾಗಿರುವರೆಂದೂ ಈ ಸಂಬಂಧದಲ್ಲಿ ಆಯಾ ವ್ಯಕ್ತಿಗಳ ವಿಷಯದಲ್ಲಿ ಜಿಲ್ಹಾಧಿಕಾರಿಗಳ ವರದಿಗಳನ್ನು ಕೇಳಲಾಗಿದೆಯೆಂದೂ ತಿಳಿಯುತ್ತದೆ. ಸಾರ್ವಜನಿಕ ಸಭೆ ಮೊದಲಾದವುಗಳಿಗಿರುವ ಪ್ರತಿಬಂಧಗಳನ್ನು ಬೇಗನೆ ತೆಗೆದುಹಾಕಬಹುದು.

ಶ್ರೀ ಎಚ್. ಸಿ. ಸೂರ್ಯನಾರಾಯಣರಾಯರ ರಾಜೀನಾಮೆಯಿಂದ ತೆರವಾಗಿರುವ ಬೆಂಗಳೂರು ನಗರಸಭೆಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ತಾ. ೨೦ಕ್ಕೆ ನಗರಸಭೆಯ ಅಧಿವೇಶನ ಕರೆಯಲಾಗಿದೆ.

ಆಹಾರಾಭಾವದ ದೆಸೆಯಿಂದ ಈ ಬಾರಿ ಶಂಕರ ಜಯಂತಿ ಬೆಂಗಳೂರಲ್ಲಿ ಅನ್ನಸಂತರ್ಪಣೆಯಿಲ್ಲದೆನೆ ಜರಗಬೇಕಾಗಿ ಬಂತು.

ಮೈಸೂರು ವ್ಯವಸಾಯದ ಖಾತೆಯವರು ೧೯೪೪-೪೫ ರ ಬಗ್ಗೆ ಹೊರಡಿಸಿದ ವರದಿಯನ್ನಯ ಆ ವರ್ಷದಲ್ಲಿ ಹೆಚ್ಚು ಆಹಾರ ಬೆಳೆಯುವ ವಿಷಯವನ್ನೇ ಖಾತೆ ಮುಖ್ಯ ಗುರಿಯಾಗಿಟ್ಟುಕೊಂಡಿತ್ತೆಂದು ತಿಳಿಯುತ್ತದೆ. ೧೧,೪೦೫ ಪಲ್ಲ ಭತ್ತ, ೭೪೭ ಪಲ್ಲ ರಾಗಿ, ೧೫೫ ಪಲ್ಲ ಗೋದಿಯನ್ನು ಬೀಜಕ್ಕಾಗಿ ಹಂಚಲಾಯಿತೆಂದೂ ೧೬೨ ಹೋಬಳಿಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಸಲಾಯಿತೆಂದೂ ೧,೫೮,೨೧೯ ರೂಪಾಯಿ ಬೆಲೆಯ ಸಲಕರಣೆ, ೩,೬೭,೧೩೧ ರೂ. ಬೆಲೆಯ ಗಾಡಿ ಸಾಮಾನು ೯೯,೪೫೦ ರೂ. ಯ ಹಿಂಡಿ ೧೨೨,೪೧೯ ರೂ. ಇತರ ಗೊಬ್ಬರ ಮೊದಲಾದವುಗಳನ್ನು ಖಾತೆಯ ಅಂಗಡಿಗಳಿಂದ ಮಾರಲಾಯಿತೆಂದೂ ಮುಂತಾಗಿ ಅದು ಹೇಳುವದಲ್ಲದೆ ೪೨೦ ಎಕರೆ ಭೂಮಿಯಲ್ಲಿ ೨,೨೫ ಸಾವಿರ ರೂಪಾಯಿ ಬೆಲೆಯ ೪,೫೦,೦೦೦ ಪೌಂಡು ಕಾಯಿಪಲ್ಲೆಗಳನ್ನು ಬೆಳೆಸಲಾಯಿತೆಂದು ತಿಳಿಸುತ್ತದೆ.

ಬೆಂಗಳೂರು ನಗರದಿಂದ ನ್ಯಾಯವಿಧಾಯಕ ಸಭೆಗೆ ಜರಗಿದ ಉಪಚುನಾವಣೆಯ ಕ್ಷೇತ್ರದಿಂದ ಶ್ರೀ ಜಯಮುತ್ತುರಾಜು ಅವರು ತಮ್ಮ ಹುರಿಯಾಳ್ತನವನ್ನು ಹಿಂತೆಗೆದುಕೊಂಡದ್ದರಿಂದ ಕಾಂಗ್ರೆಸ್ಸಿಗರಾದ ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರರು ಪ್ರತಿಸ್ಪರ್ಧೆಯಿಲ್ಲದೆ ಆರಿಸಿಬಂದಂತಾಯಿತು.



ಮುಂಬಯಿ ಶೇರ ಪೇಟೆ

ತಾ. ೯

ಮುಂಬಯಿ ಶೇರಪೇಟೆ ಈ ವಾರ ಹೆಚ್ಚು ಅಂಶ ಮುಚ್ಚಿಯೇ ಇತ್ತು. ಕಳೆದ ಗುರುವಾರ ರೂ. ೩೦೨೩—೧೨—೦ ರ ವರೆಗೂ ಏರಿದ ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಪುನಃ ಹಿಂದೇಟು ತಿಂದು ಮರುದಿನವೇ ರೂ. ೨೯೫೫-೦-೦ ಕ್ಕಿಳಿದವು. ತಾ. ೯ಕ್ಕೆ ಪೇಟೆ ಪುನಃ ತೆರೆದಾಗಲೂ ಆದರ ಸ್ಥಿತಿ ಹೆಚ್ಚಿನೂ ಸುಧಾರಿಸದೆ ೨೯೫೭-೮-೦ ರಲ್ಲೆ ಇದೆ. ಈ ವರೆಗೆ ಟಾಟಾ ಪಾಲುಗಳ ಅನಿಶ್ಚಿತತೆಯಿಂದ ಬಾಧಿಸಲ್ಪಟ್ಟವರೆದ ಗಿರಣಿ ಪಾಲುಗಳೂ ಈ ಬಾರಿ ಪೆಟ್ಟು ತಿಂದವು. ಡಾಯಿಂಗ ಪಾಲುಗಳು ೨೪೭೦-೦-೦ ರಿಂದ ೨೪೦೫—೦—೦ ಕ್ಕಿಳಿದರೂ ಮುಂದೆ ೨೪೫೨—೮—೦ ಕ್ಕೇರಿದವು. ಕೋಹಿನೂರು ೯೭೦—೦—೦ ರಿಂದ ೯೩೨-೦-೦ ಕ್ಕಿಳಿದು ೯೩೩-೯-೦ ಕ್ಕೇರಿದವು. ಸ್ವದೇಶಿ ೮೭೪-೦-೦ ರಿಂದ ೮೦೦-೦-೦ ಕ್ಕಿಳಿದು ೮೦೫-೦-೦ ಕ್ಕೇರಿದರೆ ಸೆಂಚೂರಿ ೧೧೪೦-೦-೦ ರಲ್ಲಿ ಯಥಾಸ್ಥಿತಿ. ಸೆಂಟ್ರಲ ಇಂಡಿಯಾ ೪೪೪—೦—೦ ಕ್ಕಿಳಿದಿದೆ. ಬೇಲಾಪೂರ ೩೦೪-೮-೦ ರಿಂದ ೨೯೨-೦-೦ ಕ್ಕೂ ಅಸೋಸಿಯೇಟೆಡ್ ಸಿಮೆಂಟ್ಸ ೨೫೩-೧೨-೦ ರಿಂದ ೨೫೧-೪-೦ ಕ್ಕೂ ಇಳಿಯಿತು. ಹೀಗೆ ಉಕ್ಕಿನ, ಜವಳಿಯ ಮತ್ತು ಸಕ್ಕರೆ ಮೊದಲಾದಪಾಲುಗಳುಹಿಂದಕ್ಕೆಬಿದ್ದರೂಸೆಂಟ್ರಲಬ್ಯಾಂಕ ರೂ. ೧೨೯-೪-೦ ರಿಂದ ೧೩೧-೪-೦ ಕ್ಕೂ ಇಂಪೀರಿಯಲ್ ಎಫ್. ಸಿ ರೊ. ೨೬೪೦—೦—೦ ರಿಂದ ೨೯೯೦-೦-೦ ಕ್ಕೂ ರಿಜರ್ವ ಬ್ಯಾಂಕು ರೂ. ೧೬೫-೦-೦ ರಿಂದ ೧೬೬—೮—೦ ಕ್ಕೂ ಸುಧಾರಿಸಿದವು.

ಜಿ. ಪಿ. ನೋಟುಗಳು ತಾ. ೯ಕ್ಕೆ ೧೦೨-೦-೦ ರಲ್ಲಿಯೂ ೩॥ ದರದ (೧೯೪೭-೫೦) ಸಾಲಪತ್ರ ೧೦೩-೮-೦ ರಲ್ಲಿಯೂ ಇವೆ.

ಚಿನ್ನ—ಬೆಳ್ಳಿ

ಹಿಂದಿನ ವಾರ ಪೇಟೆ ಚಿನ್ನದ ದಾಹದೊಂದಿಗೆ ಏರಿಕೆ ಬೆಲೆಯಲ್ಲಿಯೇ ಮುಚ್ಚಿತು. ಈ ವಾರ ಭೂಲಾಭಾಯರ ನಿಧನ ನಿಮಿತ್ತ ಪೇಟೆಗಳು ಮುಚ್ಚಿಯೇ ಇರುವದರಿಂದ ದರಗಳನ್ನು ಗೊತ್ತುಪಡಿಸುವದು ಸಾಧ್ಯವಿಲ್ಲ. ಆದರೆ ಅಮೇರಿಕೆಯಲ್ಲ ಚಿನ್ನದ ದರವನ್ನು ಏರಿಸಲಾಗಿದೆ. ರಶಿಯಾ ಏರುದರದಲ್ಲಿ ಚಿನ್ನ ಮಾರುತ್ತಿದೆ. ಇಂಗ್ಲಂಡು ಚಿನ್ನವನ್ನು ಹಿಂದುಸ್ಥಾನಕ್ಕೆ ನಿರ್ಯಾತ ಮಾಡಲು ಸಮ್ಮತಿಸಿಲ್ಲ. ಹಿಂದುಸ್ಥಾನದಲ್ಲಿ ಯುದ್ಧ ಲಾಭ ಬಡಕರು ಹಣವನ್ನು ಬೇರಾವ ವಿಧದಲ್ಲೂ ವಿನಿಯೋಗಿಸಲಾರದೆ ಚಿನ್ನದಲ್ಲೆ ತೊಡಗಿಸುವದರಲ್ಲಿ ಮಗ್ನರಾಗಿದ್ದರಿಂದ ಬೆಲೆಗಳು ಇಳಿಯುವಂತೆ ಕಾಣಲಿಲ್ಲ. ಬೆಳ್ಳಿಯು ಮಾತೂ ಅಷ್ಟೇ.

ಅರಳೆ

ಮೇಲ್ಮೊಗವಾಗಿ ಹೊರಟಿದ್ದ ಅರಳೆ ಬೆಲೆಗಳು ೧೯೪೬-೪೭ ರ ಅರಳೆಯಲ್ಲಿ ವಾಯಿದೆ ವ್ಯಾಪಾರವನ್ನು ಪ್ರತಿಬಂಧಿಸುವ ಸರಕಾರಿ ಆಜ್ಞೆಯಿಂದ ಸ್ಥಗಿತವಾದವು. ಹೀಗೆ ಮೇ ವಾಯಿದೆ೪೭೪-೮-೦ ಜುಲೈ ೪೭೪-೧೨-೦ ಮತ್ತು ಸಪ್ಟಂಬರ ೪೯೬-೦-೦ ರಲ್ಲಿ ಇವೆ.

ಎಣ್ಣೆಕಾಳು

ಶೇಂಗಾ	ರೂ. ೧೧೬—೦—೦
ಆಗಸಿ	,, ೨೫-೧೦—೦
ಆಗಸಿಎಣ್ಣೆ	೧೪-೧೦-೦

ಶಿವಮೊಗ್ಗೆ

ದೇಶಾವರ ಅಡಿಕೆ ನಂ. ೧ (ಮಣ) ರೂ.		೨೨-೨೫
ಕೊಪ್ಪ ಶೃಂಗೇರಿ ,,	,,	೨೨-೨೪
ತೊರಸಾಲು ,,	,,	೨೦-೨೨
ಅನ್ನಾವರ ,,	,,	೧೮-೨೨
ರಾಮಚಂದ್ರಾಪುರ,,	,,	೧೮-೨೨
ರಾಜಾ ಅಲವು	,,	೨೨-೨೪॥
ಬೆಟ್ಟ	,,	೧೩-೧೫
ಮೆಣಸು	,,	೧೬-೧೭
ಶೀಗೆಕಾಯಿ ,,	,,	೬-೬॥

ಪೇಟೆ ಒಂದೇ ಸಮವಿದೆ.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.	೧೪—೧೩
ಅರಿಸಿಣ ಹೇರು ,,	೭೭—೮೩॥
ಮೆಣಸಿನಕಾಯಿ ಹೇರು ,,	೧೩೦—೧೯೦
ಶೇಂಗಾ (ಖಂಡಿ) ,,	೯೪-೯೫
ಮಿರಜ ತಂಬಾಕು ಹೇರು	೧೨೫-೨೫೦
ಪಂಢರಪುರಿ ,,	೨೦೦—೩೦೦
ತಂಬಾಕು ಆಕೋಳ (ಹೇರು)	೨೫೦—೪೦೦

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೩೧೨-೩೧೫
,,	ನಂ. ೨	೩೦೪-೩೧೦
,,	ನಂ. ೩	೩೦೦-೩೦೫
ಆಫಲಂಡ ಹತ್ತಿ		೨೭೦-೨೯೫
ಜಿನ		೨೨೦-೨೩೫
ಸಾಜಿನ		೨೧೫-೨೨೦
ಡಬಲರೋಲರ		೨೧೦-೨೨೦

ಮೈಸೂರು ಮುಸ್ಲಿಂ ಸಂಸ್ಥಾನ?

ಬ್ರಿಟಿಶ ಮಂತ್ರಿಗಳಿಗೆ ಮೈಸೂರು ಮುಸ್ಲಿಮರ ಮನವಿ

ಕಳೆದ ವಾರಾಂತ್ಯದಲ್ಲಿ ದಿಲ್ಲಿಯ ಮುಸ್ಲಿಂ ಲೀಗ ಮುಖಪತ್ರವಾದ "ಡಾನ್" ದಲ್ಲಿ ಪ್ರಕಟವಾದ ಸುದ್ದಿ ಹಿಂತ ಹೆಚ್ಚು ಆಶ್ಚರ್ಯಜನಕ ಸುದ್ದಿ ಈಚೆಗೆ ಹಲದಿನಗಳಿಂದ ಮೈಸೂರನ್ನು ಬೆಚ್ಚಿಸಿದ್ದಿಲ್ಲ. ಮೈಸೂರು ಟೀಪು ಸುಲ್ತಾನನ ರಾಜ್ಯವಾಗಿದ್ದುದರಿಂದ ಅದು ಮುಸ್ಲಿಮ ಸಂಸ್ಥಾನ, ಈಗಿರುವ ಅರಸು ಮನೆತನದವರೊಡನೆ ಬ್ರಿಟಿಶರು ಮಾಡಿಕೊಂಡ ಒಪ್ಪಂದ ಬಂಧನಕಾರಕವಲ್ಲ, ಆದಕಾರಣ ಮೈಸೂರಿನ ಗಾದಿಯ ಮೇಲೆ ಟೀಪೂ ಸುಲ್ತಾನನ ವಂಶಜನನ್ನು ಆರಿಸಿ ಕೂಡಿಸಬೇಕು. ಅಥವಾ ಅಲ್ಲಿ ಪ್ರಜಾರಾಜ್ಯವನ್ನು ಸ್ಥಾಪಿಸುವದಾದರೆ ಮೈಸೂರು ಮುಸ್ಲಿಮರು ಹಿಂದೂಗಳೊಡನೆ ಸಮಪ್ರಾತಿನಿಧ್ಯದಿಂದ ಆಡಳಿತೆ ನಡೆಸಲು ಸಿದ್ಧರಾಗಿದ್ದಾರೆ ಎಂಬ ಆಶಯದ ಹಿರಿ ಮನವಿಯೊಂದನ್ನು ಬ್ರಿಟಿಶ ಮಂತ್ರಿತ್ರಯರಿಗೆ ಮೈಸೂರ ಮುಸ್ಲಿಂ ಲೀಗ ಪರವಾಗಿ ಒಪ್ಪಿಸಲಾಗಿದೆಯೆಂದು ಆ ಪತ್ರಿಕೆ ಬರೆದಿತ್ತು. ಹೊಣೆಗಾರ ಪತ್ರಿಕೆಯಲ್ಲಿ ಪ್ರಕಟವಾದ ಈ ಸುದ್ದಿಯನ್ನು ನಂಬದಿರಲು ಏನೂ ಕಾರಣವಿಲ್ಲದ್ದರಿಂದ ಸ್ವಾಭಾವಿಕವಾಗ ಅದು ಸಂಬಂಧಪಟ್ಟ ವರ್ಗಗಳಲ್ಲಿ ಉದ್ವೇಗವನ್ನುಂಟುಮಾಡದಿರಲಿಲ್ಲ. ಪಾಕಿಸ್ತಾನ ಎಲ್ಲೆಲ್ಲಿವರೆಗೆ ಕೈಕಾಲು ಚಾಚಲು ಹೊಂಚುಹಾಕುತ್ತದೆಯೋ ಎಂಬುದಾಗಿ ಜನರು ಆಶ್ಚರ್ಯಪಡತೊಡಗಿದರು.

ಆದರೆ ಮೈಸೂರ ಸಂಸ್ಥಾನ ಮುಸ್ಲಿಂಲೀಗ ಪ್ರಮುಖರು ಈ ಸುದ್ದಿಯನ್ನು ಅಲ್ಲಗಳೆಯಲು ತಡಮಾಡಲಿಲ್ಲ.ಲೀಗ ಪ್ರಮುಖ ಅಬ್ಬಾಸ ಖಾನರವರು ಮೈಸೂರಮಹಾಸ್ವಾಮಿಯವರ ಆಳಿಕೆಯಲ್ಲಿ ಮುಸ್ಲಿಂರ ಹಿತಸಂಬಂಧ ಭದ್ರವಾಗಿದೆಯೆಂದು ಸಾರಿದ್ದಾರೆ. ಮೈಸೂರು ಲೀಗು "ಡಾನ್" ಸಂಪಾದಕರಿಂದ ವಿವರಣೆ ಕೇಳುವದೆಂದು ತಿಳಿಸಿದ್ದಾರೆ.

ಇದು ಹೇಗೇ ಇದ್ದರೂ ಮೈಸೂರು ಮುಸ್ಲಿಮರ ತಲೆ ತಿರುಗಿಸುವದರಲ್ಲಿ ಲಾಭವನ್ನು ಕಾಣುವ ಯಾವದೋ ಒಂದು ವರ್ಗ ಒಳಗೊಳಗೇ ತಂತ್ರಜಾಲ ರಚಿಸುತ್ತಿದೆಯೆಂದು ಇದರಿಂದ ಸ್ಪಷ್ಟವಾಗುವದು. ಸ್ವತಃ ಪಾಕಿಸ್ತಾನದ ಬೇಡಿಕೆ ಕೂಡ ಹೀಗೆಯೇ ಹುಚ್ಚು ಕಲ್ಪನೆಯೆಂಬಂತೆ ಮೊದಲು ಜನತೆಯ ಮುಂದೆ ಇರಿಸಲ್ಪಟ್ಟಿತ್ತು. ಆದರೆ ಈಗ ಅದೇ ದೇಶದ ಮುನ್ನಡೆಗೆ ಎಂಥ ಪ್ರಚಂಡ ಅಡಚಣೆಯಾಗಿ ರೂಪುಗೊಂಡಿದೆಯೆಂದು ಎಲ್ಲರಿಗೂ ಗೊತ್ತು.

ದಕ್ಷಿಣ ಕನ್ನಡ

ಅಂತರ್‌ರಾಷ್ಟ್ರೀಯ ಕೂಲಿಕಾರರ ಒಗ್ಗಟ್ಟಿನ ದಿನವಾಗಿ ಎಲ್ಲೆಡೆಗಳಲ್ಲಿಯೂ ಆಚರಿಸಲ್ಪಡುವ ಮೇ ದಿನವನ್ನು ಮಂಗಳೂರು ಕೂಲಿಕಾರರೂ ಸಭೆ ಮೆರವಣಿಗೆಗಳಿಂದ ಕಮ್ಯುನಿಸ್ಟ ಪಕ್ಷದ ನೇತೃತ್ವದಲ್ಲಿ ಆಚರಿಸಿದರು.

ಮಂಗಳೂರಿನ ಪ್ರಸಿದ್ಧ ಆಯುರ್ವೇದ ವೈದ್ಯರಾದ ಶ್ರೀ ಎಂ. ಕೆ. ವೈದ್ಯರು ತಾ. ೨ಕ್ಕೆ ತಮ್ಮ ಮನೆಯಲ್ಲಿ ಉದರರೋಗದಿಂದ ದೇವಾಧೀನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಪುತ್ತೂರು ಹಾಯಸ್ಕೂಲಿನ ಹೊಸ ಕಟ್ಟಡಕ್ಕೆ ನಿಧಿ ಕೂಡಿಸಲು ವಿದ್ಯಾರ್ಥಿಗಳು ಜಾಗ್ರತಿ ಎಂಬ ನಾಟಕವನ್ನೂ ಗದಾಯುದ್ಧದ ಬಯಲಾಟವನ್ನೂ ಆಡಿದ್ದರ ಫಲವಾಗಿ ಸುಮಾರು ೭೦೦ ರೂಪಾಯಿ ಕೂಡಿವೆಯೆಂದು ತಿಳಿಯುತ್ತದೆ.

ದಕ್ಷಿಣ ಕನ್ನಡದಲ್ಲೆಲ್ಲ ಉಂಟಾಗಿರುವ ನೂಲಿನ ಕೊರತೆಯಿಂದ ನೇಕಾರರಿಗೊದಗಿದ ತೊಂದರೆಗಳನ್ನು ನೀಗಿಸಬೇಕೆಂದು ದ. ಕನ್ನಡ ಜಿಲ್ಹಾ ಟ್ರೇಡ ಯೂನಿಯನ್ ಕೌನ್ಸಿಲದ ಪ್ರತಿನಿಧಿಗಳಾದ ಶ್ರೀ ಎಂ. ಶಾಂತಾರಾಮ ಪೈಯವರು ಮದ್ರಾಸ ಪ್ರಾಂತಿಕ ಜವಳಿ ಕಮೀಶನರರನ್ನು ಭೆಟ್ಟಿಯಾಗಿ ಮನವಿ ಮಾಡಿಕೊಂಡರು.

ಕಾಸರಗೋಡು ತಾಲೂಕು ಅಧ್ಯಾಪಕರ ಸಂಘದ ನಿರ್ಣಯದಂತೆ ಹೊಸದುರ್ಗ, ಪಳ್ಳಿಕೆರೆ, ಕೋಟಿಕುಲಂ, ಮಾಪಿಳಾ, ಹೊಸದುರ್ಗ ಗರ್ಲ ಸ್ಕೂಲ ಸೆಂಟರುಗಳ ಉಪಾಧ್ಯಾಯರು ಸಂಬಳದ ಹೆಚ್ಚಳದ ಬೇಡಿಕೆಯನ್ನು ಪ್ರಚಾರಗೊಳಿಸಲು ತಾ. ೨೮ಕ್ಕೆ ಶ್ರೀ ಎ. ಸಿ. ಕಣ್ಣನ್ನರ ಅಧ್ಯಕ್ಷತೆಯಲ್ಲಿ "ಸಂಬಳ ದಿನಾಚರಣೆ" ಜರಗಿಸಿದರು. ಉಪಾಧ್ಯಾಯರ ಕನಿಷ್ಠ ಮೂಲಭೂತ ಸಂಬಳ ೫೦ ರೂಪಾಯಿಯಿರಬೇಕೆಂಬ ಗೊತ್ತುವಳಿಯಾಯಿತು.

ಮೈಸೂರ ಸಂಸ್ಥಾನದ ಆಹಾರ ಸ್ಥಿತಿ

ಮೈಸೂರ ದಿವಾಣರವರ ಹೇಳಿಕೆ


"ನಮಗೆ ಆಹಾರ ಧಾನ್ಯಗಳು ಒದಗಿದಂತೆಲ್ಲ ನಾವು ನಮ್ಮ ಮುಂದಿನ ಆಹಾರ ಪದಾರ್ಥಗಳನ್ನು ನಿಗದಿ ಮಾಡಿಕೊಳ್ಳಲು ಸಾಧ್ಯ. ಅದ್ದರಿಂದ ಆಹಾರವಿನಿಯೋಗದ ಬಗ್ಗೆ ಮುಂಚಿತವಾಗಿಯೇ ನಾವೇನನ್ನೂ ಹೇಳಲು ಸಾಧ್ಯವಿಲ್ಲ. ಈಗ ಕೊಡಲಾಗುತ್ತಿರುವ ಸೀದಾ ಪ್ರಮಾಣವನ್ನು ಇನ್ನೂ ಇಳಿಸಬೇಕಾಗುವದೋ ಅಥವಾ ಇಲ್ಲವೋ ಎಂಬುದು ಈ ಅಂಶಗಳನ್ನು ಅವಲಂಬಿಸಿರುವದು." ಎಂದು ಮೈಸೂರು ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ಪತ್ರಿಕಾ ಪ್ರತಿನಿಧಿಗಳ ಭೆಟ್ಟಿಯಲ್ಲಿ ತಿಳಿಸಿದರು.

ಮೈಸೂರಿಗೆ ಕೊಡುವದಾಗಿ ಮೊದಲು ನಿಗದಿ ಮಾಡಿದ್ದ ೧,೩೭,೦೦೦ ಟನ್‌ಗಳಷ್ಟು ಆಹಾರ ಧಾನ್ಯಗಳಲ್ಲಿ ಈಗ ಕೇವಲ ೪೮,೦೦೦ ಟನ್‌ಗಳಷ್ಟು ಧಾನ್ಯಗಳು ಮಾತ್ರ ಬರುವವು. ಸಂಸ್ಥಾನದಲ್ಲಿ ಈಗ ೭೯,೦೦೦ ಟನ್‌ಗಳಷ್ಟು ಆಹಾರ ಧಾನ್ಯಗಳಿವೆ. ಇಂಡಿಯಾದ ವಿವಿಧ ಭಾಗಗಳಿಂದ ಬರಲಿರುವ ಆಹಾರಧಾನ್ಯಗಳು ೨೦,೦೦೦ ಟನ್‌ಗಳಷ್ಟು ಮಾತ್ರ ಬರುವವು.

ಹೆಚ್ಚು ಹೆಚ್ಚು ಉಚಿತ ಪಾಠಶಾಲೆಗಳನ್ನು ಸರಕಾರವು ಏರ್ಪಡಿಸುವದೆಂದು ದಿವಾನರವರು ತಿಳಿಸಿ ಈ ಉಚಿತ ಪಾಠಶಾಲೆಗಳನ್ನು ಖಾಸಗಿ ಪರಿಹಾರ ಸಮಿತಿಗಳ ಆಡಳಿತಕ್ಕೆ ಬಿಡಲು ಮತ್ತು ಅವರು ಸಹಾಯ ಮಾಡಲು ಅವಕಾಶವನ್ನೀಯಲು ಸರಕಾರವು ಸಿದ್ಧವಿದೆ. ಎಂದೂ ಹೇಳಿದರು. ಪರಿಹಾರ ಸಮಿತಿಗಳು ಕಟ್ಟುನಿಟ್ಟಾಗಿರಬೇಕೆಂದೂ ರೇಶನಿಂಗ ನಿಯಮಗಳಿಗೆ ಕಟ್ಟುಬಿದ್ದು ನಡೆಯಬೇಕೆಂದೂ ದಿವಾನರು ತಿಳಿಸಿದರು.

ನೆಲೆಗಡಲೆಕಾಯಿ ಮತ್ತು ಬೇಳೆಗಳನ್ನು ಹತೋಟಿಗೆ ತೆಗೆದುಕೊಳ್ಳಲು ಸರಕಾರವು ಉದ್ದೇಶಪೊಂದಿರುವದಾಗಿ ದಿವಾನರು ತಿಳಿಸಿದರು.

ಮೈಸೂರಿಗೆ ಸದ್ಯದಲ್ಲೇ ೨೫೦ ಟನ್‌ಗಳಷ್ಟು ಹಾಲಿನ ಪುಡಿ ಬರಲಿರುವದರಿಂದ ಹೊಟೆಲುಗಳಿಗೆ ಹಾಲಿನ ಪುಡಿಯನ್ನು ಒದಗಿಸಲಾಗುವುದೆಂದೂ ಇದರಿಂದ ಜನರ ಉಪಯೋಗಕ್ಕೆ ಹಾಲು ಅನುಕೂಲವಾಗಿ ದೊರೆಯುವಂತೆ ಮಾಡಲಾಗುವುದು ಎಂದೂ ದಿವಾನರು ನುಡಿದರು.



ಹೆಸರಿಟ್ಟರು

ಲೇಖಕ- ವೈ.ಎಂ. ಷಣ್ಮುಖಯ್ಯ, ಪ್ರಕಾಶಕರು- ಸತ್ಯಶೋಧನ ಪುಸ್ತಕ ಭಾಂಡಾರ ಬೆಂಗಳೂರ, ಪುಟಗಳು ೧೩೦, ಬೆಲೆ ೧-೪-೦

ಕನ್ನಡದ ಕತೆಗಾರರಲ್ಲೊಬ್ಬರಾದ ಶ್ರೀ ಷಣ್ಮುಖಯ್ಯನವರ ಒಂಬತ್ತು ಕತೆಗಳು ಈ ಪುಸ್ತಕದಲ್ಲಿ ಪ್ರಸಿದ್ಧವಾಗಿವೆ. ಇವುಗಳಲ್ಲಿ 'ಕನಸಿನ ಬದುಕು' ಇಆಜ ನೆನೆದುಕೊಳ್ಳಲಿಲ್ಲ ಎಂಬೆರಡು ನೀಳ್ಗತೆಗಳು ಉತ್ತಮವಾಗಿವೆ. ಕನಸಿನ ಬದುಕಿನಲ್ಲಿ ಹರಿಜನರಲ್ಲಿ ಹುಟ್ಟಿದವನೊಬ್ಬ ತನ್ನ ಸಂಗೀತ ವಿದ್ಯೆಯಿಂದ ವೈಭವಸಂಪನ್ನನಾಗಿ ಮೆರೆವಾಗ ಒಬ್ಬ ಬ್ರಾಹ್ಮಣ ಹೆಣ್ಣಿನ ಮಾಯೆಗೆ ಸಿಲುಕಿ ಅವಳನ್ನು ಮದುವೆಯಾಗದೆ ಓಡಿಹೋಗುತ್ತಾನೆ. ಅವಳು ಇವನ ನೆನೆವರಿಕೆಯಲ್ಲಿ ಸತ್ತು ಭೂತವಾಗಿ ಅವನನ್ನು ಕಾಡುತ್ತಾಳೆ. ಬೇರೊಂದು ಬ್ರಾಹ್ಮಣ ಕನ್ನೆಯನ್ನು ಅವನಿಗೆ ಮದುವೆ ಮಾಡಿಸುತ್ತಾಳೆ. ಈ ಕಥೆಯನಿರೂಪಣೆ ಚನ್ನಾಗಿದೆ. 'ಇಂದುವನ್ನು ನೆನೆದುಕೊಳ್ಳಲಿಲ್ಲ'ದಲ್ಲಿ ಯುದ್ಧ ಮೂಲಕ ವಿದೇಶಕ್ಕಾಗಿ ತೆರಳಿದವನೊಬ್ಬ ಅಲ್ಲಿಯ ಅಂಗ್ಲದಾಯಿಗೆ ಮನ ಸೋತಿರುವಾಗ ಅವಳಿಂದ ಭಿನ್ನಹೃದಯನಾಗಿ ...ಗುತ್ತಾನೆ. ಅವಳ ಪ್ರಿಯತಮ ಯುದ್ಧದಲ್ಲಿ ಮಡಿದ ನಂತರ ಅವಳು ಇವನೆಡೆಗೆ ತಿರುಗಿದಾಗ ಇವನು ಬೇರೊಂದು ರಂಗದಲ್ಲಿ ಮರಣಾಸನ್ನನಾಗಿರುತ್ತಾನೆ. ಇವರಿಬ್ಬರ ಭೆಟ್ಟಿ ನಡೆಯದೆ ಅವನು ತೀರಿಹೋಗುತ್ತಾನೆ. ಈ ದುರಂತ ಚಿತ್ರವೂ ಚನ್ನಾಗಿದೆ. ಉಳಿದ ಕಥೆಗಳೆಲ್ಲ ಪ್ರಚಲಿತ ಸಮಸ್ಯೆಗಳನ್ನು ಕುರಿತು ಬರೆದವಾಗಿವೆ. ಕೆಲವು ಕಡೆಗಳಲ್ಲಿ ಅವಾಸ್ತವತೆ ಇಣಿಕಿಕ್ಕುತ್ತಿದ್ದರೂ ಕಥೆಗಳೆಲ್ಲ ಒಪ್ಪಾಗಿವೆ. ಭಾಷೆ ಇನ್ನೂ ಸ್ವಲ್ಪ ಹದಕ್ಕೆ ಬರಬೇಕಾಗಿದೆ.

ಸಂಸಾರಿಗ ಕಂಸ

ಲೇಖಕರು- ಶ್ರೀರಂಗ, ಪ್ರಕಾಶಕರು- ರಂಗಮಂಗ ಪ್ರಕಾಶನ, ಧಾರವಾಡ, ಪುಟಗಳು ೧೧೮, ಬೆಲೆ ೧-೮-೦.

ಪ್ರಸಿದ್ಧ ನಾಟಕಕಾರರಾದ ಶ್ರೀರಂಗರು ಈ ನಾಟಕದಲ್ಲಿ 'ಇಪ್ಪತ್ತು ವಯಸ್ಸಿಗೆ ತಾಯಿಯಾಗಿ ದಶಾವತಾರಗಳನ್ನು ಧರೆಗಿಳಿಸಿ ಮಾತೃದೇವತೆ ಎನ್ನಿಸಿಕೊಂಡ ಮುತ್ತೈದೆಯರನ್ನು ಸ್ವರ್ಗಕ್ಕೆ ಸೇರಿಸುವ' ಅವಿಚಾರಿ ಗಂಡಂದಿರ ವಿರುದ್ಧ ಶಸ್ತ್ರವನ್ನೇ ಎತ್ತಿದ್ದಾರೆ. ರಾಮಣ್ಣನ ತಂಗಿ ಎಳೆತನದಲ್ಲಿ ತಾಯಾಗಿ ತಾಯ್ತನದ ಬವಣೆಬಡುತ್ತಾಳೆ. ಅವಳ ಮೂರರಲ್ಲಿ ಒಂದು ಕುಸೂ ಉಳಿಯುವದಿಲ್ಲ. ವರದಕ್ಷಿಣೆಯ ತಕರಾರಿನಿಂದ ಹೆಂಡತಿಯ ನಿರ್ಬಂಧಕ್ಕೊಳಗಾಗಿ ಸೊಸೆಯನ್ನು ಮನೆಯಿಂದ ಹೊರಗಟ್ಟಿದ ರಾಮಣ್ಣನ ತಂದೆ ಶೀನಣ್ಣನು ಆ ಮೇಲೆ ಕರುಣೆಯಿಂದ ಅವಳಿಗೆ ಶಿಕ್ಷಣ ಕೊಡಿಸಿ ನರ್ಸ ವೃತ್ತಿಗೆ ಅಂಟಿಸುತ್ತಾನೆ. ಈ ಕೃಷ್ಣಾತಾಯಿ ಶೀನಣ್ಣನ ಸೊಸೆ ...ಯುದನ್ನು ಅರಿಯದೆ ಜನರು ಶೀನಣ್ಣನ ಅವಳ ಮೇಲಿನ ಕರುಣೆಯನ್ನು ತಪ್ಪಾಗಿ ತಿಳಿದುಕೊಂಡು ತಂದೆಯ ನಡತೆಯ ಬಗ್ಗೆ ರಾಮಣ್ಣನಲ್ಲಿ ಸಂದೇಹ ಹುಟ್ಟಿಸಲು ಪ್ರಯತ್ನಿಸುತ್ತಾರೆ ಆದರೆ ರಾಮಣ್ಣನಿಗೆ ಅವಳು ತನ್ನ ಹೆಂಡತಿ ಎಂದು ಅವಳ ...ಲ್ಲ ಬಿದ್ದ ಹೂವಿನಿಂದ ಗೊತ್ತಾದ ಕೂಡಲೆ ಅವನು ದಿಙ್ಮೂಢನಾಗುತ್ತಾನೆ. ತನಗಾದ ಅನ್ಯಾಯವನ್ನು ಸ್ಪಷ್ಟವಾಗಿಸುವದಕ್ಕಾಗಿ ಕೃಷ್ಣಾತಾಯಿ 'ರಾಮಣ್ಣನವರು ಹೇಳಿದಂತೆ ನಾನು ವಿಧವೆ. ಬೆಳೆಯಲಾರದ ಮಕ್ಕಳನ್ನು ಹಡೆಯುವ ತಾಯಿ ನಾನಲ್ಲ. ಹುಟ್ಟಿದ ಮಕ್ಕಳನ್ನು ಬೆಳೆಸುವ ಮಾತೆ ನಾನು. ಒಪ್ಪಿಗೆಯೆ ನಿಮಗೆ?' ಎಂದು ಕೇಳುತ್ತಾಳೆ. ಸಮಸ್ಯೆಗುತ್ತರ ದೊರೆಯುವದಿಲ್ಲ.

ಲೈಂಗಿಕ ವಿಷಯಗಳ ಪುಸ್ತಕಗಳ ವಾಚನದ ಅಭಿರುಚಿ ಜನರಲ್ಲಿ ಹೆಚ್ಚಾಗಿದ್ದರೂ ಅದರ ಸದುಪಯೋಗವಾಗಿಲ್ಲ. ನಿರಾಮಯವಾದ ಸೊಗದ ಬಾಳನ್ನು ಬಾಳಲವಶ್ಯವಾದ ಜ್ಞಾನವಿಲ್ಲದಾಗಿದೆ. ಅಜ್ಞಾನದಿಂದ ಸ್ತ್ರೀಯರ ಗೋಣುಮುರಿಯುತ್ತಿರುವ ಪುರುಷರಿಗೆ ದಂಡನೆ ಇಲ್ಲದಾಗಿದೆ. ಇದನ್ನು ಕಂಡು ತರುಣ ಪೀಳಿಗೆಯ ತಲೆ ತಿರುಗಿದೆ; ಇವರು ಪ್ರತಿಭಟಿಸುತ್ತಿದ್ದಾರೆ. ಸಮಾಜದ ಅನ್ಯಾಯವನ್ನು ಸಹಿಸದ ಹಿರಿಯರಿಗೆ ಅದನ್ನೆದುರಿಸಲು ಧೈರ್ಯವಿಲ್ಲದಾಗಿದೆ. ಈ ವಿಚಾರಗಳ ತಾಕಲಾಟ ಬಹಳ ಚನ್ನಾಗಿ ವ್ಯಕ್ತವಾಗಿದೆ ಈ ನಾಟಕದಲ್ಲಿ ಮೊದಲನೆ ಸಲ ಈ ನಾಟಕ ಯಾರಿಗೂ ತಿಳಿಯಲಿಲ್ಲವಂತೆ. ಇದು ನಿಜವಾಗಿದೆ. ಇದನ್ನು ಓದಿ ಅರಗಿಸಿಕೊಂಡು ನಂತರ ರಂಗಭೂಮಿಯ ಮೇಲೆ ಈ ನಾಟಕವನ್ನು ನೋಡಿದರೆ ಸ್ವಾರಸ್ಯ ಹೆಚ್ಚು.

ರಾಮೂನ ಕತೆಗಳು

ಲೇಖಕರು: ಶ್ರೀ ಕೃಷ್ಣಮೂರ್ತಿ ಪುರಾಣಿಕರು. ಪ್ರಕಾಶಕರು : ರಂಗಮಂಗ ಪ್ರಕಾಶನ, ಧಾರವಾಡ. ೭೨ ಪುಟಗಳು. ರೂ. ೧-೫-೦.

ದುರಾರಾಧ್ಯರಾದ ಹರಟೆಗಾರ ಶ್ರೀರಂಗರಿಂದ (ಮುನ್ನುಡಿಯಲ್ಲಿ) ಬೆನ್ನು ಚಪ್ಪರಿಸಿಕೊಂಡ ಈ "ಪ್ರಬಂಧ" ಸಂಗ್ರಹದ ಬಗ್ಗೆ ಹೆಚ್ಚಿನ ಪ್ರಶಂಸೆಯ ಮಾತು ಆಡಬೇಕಾದ ಅವಶ್ಯಕತೆಯಿಲ್ಲ. ರಾಮೂನ ಜೀವನದ ಒಂಭತ್ತು ಪ್ರಸಂಗಗಳನ್ನು ಇಲ್ಲಿ ವ್ಯಂಗವಾಗಿ ಚಿತ್ರಿಸಿದೆ. ಹಳ್ಳಿಯ ಕಂದಾಚಾರದ ಶ್ರದ್ಧಾಳು ವಾತಾವರಣದಿಂದ ಪಟ್ಟಣದ, ಅದೂ ಕಾಲೇಜಿನ ಅತಿರೇಕ ಆಧುನಿಕ ವಾತಾವರಣಕ್ಕೆ ತರಲ್ಪಟ್ಟ ರಾಮೂ ತಾನು ಕ್ರಾಂತಿಕಾರನೆಂಬ ಭ್ರಾಂತಿ ಹಚ್ಚಿಕೊಂಡ ದುರ್ಬಲ ಹೃದಯದ ಮಾದರಿ ಆಧುನಿಕ ಯುವಕ. ಮೀಸೆ ಬೋಳಿಸುವದರಿಂದ ಹಿಡಿದು ತಾಯಿಯ ಮರಣಕ್ಕೆ ಕಾರಣನಾದ "ಮಹಾ ಪುರುಷ" ನಾಗುವ ವರೆಗೂ ಅವನ ಹೃದಯದಲ್ಲಿ ಮಾತ್ರ ಜರಗಿದ ಕ್ರಾಂತಿಯುದ್ಧದಲ್ಲಿ ಅಡಕವಾದ ಹಾಸ್ಯಾಸ್ಪದ ಸ್ವರೂಪವನ್ನು ಬಹಳ ಕುಶಲತೆಯಿಂದ ಈ ಪ್ರಬಂಧಗಳಲ್ಲಿ ತೆರೆದಿಡಲಾಗಿದೆ. ಇಲ್ಲಿ ವಿನೋದಕ್ಕೆ ಕಾರಣನಾದ "ಕ್ರಾಂತಿಕಾರ" ರಾಮೂನ ಬಗ್ಗೆ ಲೇಖಕರು ಅಸಹಾನುಭೂತಿಪರರಾಗಿರದಿದ್ದರೂ ಅವನ ದುರ್ಬಲ ಹೃದಯದ ಕ್ರಾಂತಿಭ್ರಾಂತಿಯನ್ನು ಬಯಲಿಗೆಳೆಯುವದರಲ್ಲಿ ದಯೆಮಾಯೆ ತೋರಿಸಿಲ್ಲ. ನಾಯಕನು ಸಂಪೂರ್ಣ ಗಂಭೀರನಾಗಿದ್ದಾನೆ. ಆದರೆ ತನ್ನ ಕ್ರಾಂತಿಕಾರಕತೆ, ತಾನು ಮಾಡುವ ಹೋರಾಟದ ಸೋಗು, ಎಲ್ಲ ಎಷ್ಟು ಪೊಳ್ಳು ಎಂಬುದು ಅವನಿಗೇ ತಿಳಿದಿರುವದಿಲ್ಲ. ಹರೆಯದ ಮಬ್ಬಿನಲ್ಲಿ ಕ್ರಾಂತಿಕಾರಕ ಜಂಬಕ್ಕೆ ಬಿದ್ದು ಕೊನೆಗೆ ಸಂಪ್ರದಾಯದ ಪ್ರಬಲಶಕ್ತಿಗೆ ಶರಣಾಗತರಾಗಿ ತಮ್ಮನ್ನು ಹುತಾತ್ಮರಾಗಿ ಪರಿಗಣಿಸುವ ಯುವಕರು ಹಿಂದುಸ್ತಾನದ ಈ ಹಳೆ ಹೊಸತುಗಳ ಸಂಧಿಕಾಲದಲ್ಲಿ ಹೇರಳವಾಗಿ ದೊರೆಯುತ್ತಾರೆ. ಅಂಥವರಿಗೆ ಇದನ್ನು ಓದುತ್ತ ಹೋದಂತೆ ತಮ್ಮ ಅಂತರಂಗಕ್ಕೇ ಯಾರೋ ಕನ್ನಡಿ ಹಿಡಿಯುತ್ತಿರುವಂತೆ ಭಾಸವಾಗದಿರದು. ಅವರು ತಮ್ಮ ಮೌಢ್ಯಕ್ಕೆ ತಾವೇ ನಸುನಗುವದು ನಿಶ್ಚಯ.

ಪುಸ್ತಕದ ಉದ್ದಕ್ಕೂ ಮಿಂಚುವ ಹಾಸ್ಯ ಜೊಳ್ಳು ಹಾಸ್ಯ ಅಥವಾ ಶ್ರೀರಂಗರ ಹರಟೆಗಳಲ್ಲಿ ವಿಪುಲವಾಗಿ ಕಾಣಸಿಗುವ ಶಬ್ದಶ್ಲೇಷಾತ್ಮಕವಾದ ನಾಳಿಕೇರಪಾಕ ಹಾಸ್ಯವಾಗಿರದೆ, ಸೈಜವಾದ, ತೋರಿಕೆಗೆ ವಿಷಾದಮಯವೆಂದು ಕಾಣುವ ಸಂನಿವೇಶಗಳಲ್ಲಿ ಒಳಗೆ ಅವಿತಿರುವ ನಗೆಯನ್ನು ತಡವಿ ಹೊರಗೆಳೆಯಬಲ್ಲ ಸೂಕ್ಷ್ಮ ಪೃಥಕ್ಕರಣಶಕ್ತಿಯ ದ್ಯೋತಕವಾದ ಹಾಸ್ಯವಾಗಿದೆ. ಆದುದರಿಂದಲೇ ಶ್ರೀರಂಗರು ಈ ಪ್ರಬಂಧಗಳು ತಮ್ಮ ಹರಟೆಗಿಂತಲೂ ಉತ್ತಮಶ್ರೇಣಿಯವೆಂದು ಒಪ್ಪಿಕೊಂಡಿದ್ದಾರೆ. ಶ್ರೀ. ಪುರಾಣಿಕರು ತಮ್ಮೀ ಪ್ರಥಮಪುಸ್ತಕದಲ್ಲೇ ತೋರಿಸಿದ ಕಲಾಕೌಶಲ್ಯವನ್ನು ಅಭಿನಂದಿಸದಿರಲಾರೆವು.

ಹೂವಾಡಗಿತ್ತಿ

ಕ. ವಿ. ರಾಘವ, ಪ್ರಕಾಶಕರು ಕಾವ್ಯಾಲಯ ಮೈಸೂರು, ಪುಟಗಳು ೪೨, ಬೆಲೆ ನಾಲ್ಕಾಣೆ.

ಚಿಕ್ಕ ಮಕ್ಕಳಿಗೆಂದೇ ಬರೆದ ಈ ಚಿಕ್ಕ ಪುಸ್ತಕದಲ್ಲಿ ಮಕ್ಕಳು ಹಾಡಿಕೊಂಡು ನಲಿಯಬಹುದಾದ ೧೬ ಪುಟ ಪದ್ಯಗಳಿವೆ. 'ಬಾತುಕೋಳಿ', 'ಕುರೊ ಕುರೊ ನಾಯಿಮರಿ' ಈ ಎರಡು ಪದಗಳು ಒಳ್ಳೆಯ ಅಭಿನಯ ಗೀತಗಳಾಗಿವೆ. ಕೊನೆಯ ಪದ್ಯವಾದ 'ಕೊಲ್ಲದ ಕಾಳಗ'ದಲ್ಲಿ ಭಾರತದ ಇಂದಿನ ಹದಗೆಟ್ಟ ಪರಿಸ್ಥಿತಿಯನ್ನು ತಿದ್ದುವದಕ್ಕಾಗಿ ಉಪಾಯಗಳನ್ನು ಬಾಲಕರ ಮನಸ್ಸಿಗೆ ಹಿಡಿಯುವಂತೆ ಹೇಳಿದ್ದಾಗಿದೆ. ಪಟಿಂಗರಂಗ ತಿಂಡಿಯ ಆಸೆಗಾಗಿ ಪಾಠಮರೆತು, ಪಟಿಂಗನೆಂದರೆ ಶುದ್ಧ ಒರಟ, ತಿರುಳಿಲ್ಲದ ತೆಂಗಿನಕಾಯಿ ಕರಟನಾಗಿ ಬಿಡುತ್ತಾನೆ.

ಕಾವ್ಯಾಲಯದವರು ಪ್ರಸಿದ್ಧಿಸಿರುವ ಈ ಪುಟ್ಟ ಪುಸ್ತಕ ಮಕ್ಕಳಿಗೆ ಮುದ್ದಾಗುವದರಲ್ಲಿ ಸಂಶಯವಿಲ್ಲ.

ಕಾಲಯಜ್ಞ

ಲೇಖಕರು- 'ಶ್ರೀ ಕೌಸ್ತುಭ' ಪುಟಗಳು ೧೦, ಪ್ರಕಾಶಕರು ?, ಬೆಲೆ ?

ಮಾನವನ ಐತಿಹಾಸಿಕ ಹಂತದಲ್ಲಿ ಸಂಸ್ಕೃತಿ ವಿಕಾಸದಲ್ಲಿ ಆಗಿರುವ ವಿಚಿತ್ರ ಬದಲಾವಣೆಗಳನ್ನು ವಿವಿಧ ಪಾತ್ರಗಳ ಬಾಯಿಂದ ಆಡಿತೋರಿಸುವ ಉದ್ದೇಶದಿಂದ ಈ ಕಾಲಯಜ್ಞ ಅಥವಾ ದಶರೂಪ ಮಾನವನೆಂಬ ಪುಸ್ತಕ ಬರೆದದ್ದಾಗಿದೆ. ಈ ಪುಟ್ಟ ರೂಪಕವನ್ನೆ ಬೆಂಗಳೂರಿನ ಆಚಾರ್ಯ ಪಾಠಶಾಲೆಯ ವಿದ್ಯಾರ್ಥಿಗಳು ಆಡಿತೋರಿಸಿದ್ದಾರೆ.

'ಕುಣಿಯುವ ಕಾಲನ ಕಂಡೇನಳುಕುವಿ
ಒದರುತಲಿಹುದು ಬ್ರಹ್ಮಾಂಡವೇ'

ಎಂಬ ಪಲ್ಲವಿಯಿಂದ ಪ್ರಾರಂಭಮಾಡಿ ಆದಿನಿವಾಸಿ, ಅನ್ನದಾತ, ತತ್ವದರ್ಶಿ, ಮಹಾರಾಜ, ಕ್ರಾಂತಿಕಾರಿ, ಯೋಧ, ವಿಚಾರಿ, ಕ್ಷುದ್ವ್ಯಾಧಿ, ಸ್ವಾತಂತ್ರ್ಯ ಮತ್ತು ವಿಜ್ಞಾನಿ ಎಂದು ಮಾನವ ಜೀವನದಲ್ಲಿಯ ದಶವಿಧ ಸ್ವರೂಪಗಳನ್ನು ಒಂದೊಂದು ಹಾಡಿನಲ್ಲಿ ತೋರಿಸಿದ್ದಾರೆ. ಕಾಲಗತಿಯ ಅಬ್ಬರವನ್ನು ಕಂಡು ಯಾರೂ ಹೆದರಬೇಕಾಗಿಲ್ಲ ಧೈರ್ಯದಿಂದ ಮುನ್ನುಗ್ಗಬೇಕು ಎಂದು ಅವರಿಗೆ ಹೇಳಲಾಗಿದೆ. ಕೊನೆಗೆ ವಿಜ್ಞಾನಿಯ ಮಹತಿಯನ್ನು ಸಾರಿ ಹೇಳಿದ್ದಾಗಿದೆಯಲ್ಲದೆ ಕರುಣಾಮಯನಾಗೆಂದು ಕೇಳಿಕೊಳ್ಳಲಾಗಿದೆ.

"ಓ ವಿಜ್ಞಾನಿ, ಹುರುಪೇನ್, ಹೊಸದೇನ್, ಹಲವೇನ್, ಸೃಷ್ಟಿ ನಿಯಮವ ಭೇದಿಸಿ, ಸೃಷ್ಟಿ ಪಂಥವ ಹೂಡಿ; ಬ್ರಹ್ಮಶಕ್ತಿಯ ಕೆರಳಿಸಿ ಬೇರೆ ಜಗವನು ತೋರುವಿ, ಮನವೆ ವಿಶಾಲವಾಗು, ಕರ್ಣೆಯ ಶಕ್ತಿ ಬೀರು."

ಇಂದಿನ ಜಗತ್ತನ್ನೇ ತನ್ನ ಅಂಕೆಯಲ್ಲಿ ಇಟ್ಟುಕೊಂಡ ವಿಜ್ಞಾನಿಗೆ ಇಂಥ ಮಹತ್ವ ಪ್ರಾಪ್ತವಾಗಿದ್ದು ಉಚಿತವೆ ಆಗಿದೆ.

ಅಮರೇಶ್ವರ ಶತಕ

ಕವಿ- ಗಂಜಿಹಳ್ಳಿ ಷಡಕ್ಷರ ಕವಿಗಳು ತುರ್ವಿಹಾಳಮಠ, ಪ್ರಕಾಶಕರು- ಡೊಣಮರಡಿ ಸಾಹುಕಾರ ಗೊರವಾ ಶಿವನಪ್ಪನವರು ರಾಯಚೂರ, ಪುಟಗಳು ೪೨, ಬೆಲೆ ೮ ಆಣೆ.

ನಿಜಾಮು ಸಂಸ್ಥಾನದ ರಾಯಚೂರ ಜಿಲ್ಹೆಯಲ್ಲಿ ಅಮರೇಶ್ವರ ಪುಣ್ಯಕ್ಷೇತ್ರವಿದೆ. ಪ್ರಾಚೀನಕಾಲದಲ್ಲಿ ಮಲ್ಲಿಕಾರ್ಜುನ ಅಥವಾ ಅಮರೇಶ್ವರನೆಂಬ ಶಿವಶರಣನೊಬ್ಬನು ಈ ಕ್ಷೇತ್ರದಲ್ಲಿದ್ದು ಜನರಿಗೆ ವೀರಶೈವ ಮತದ ಬೋಧೆ ಮಾಡಿಹೋದನು. ಈ ಶಿವಶರಣನು ಇಂಥ ಶತಮಾನದವನೇ ಎಂಬುದು ಇನ್ನೂ ನಿಶ್ಚಿತವಾಗಿಲ್ಲ. ಈ ಅಮರೇಶ್ವರನ ಚರಿತ್ರೆಯನ್ನು ಮುನ್ನುಡಿಯಲ್ಲಿ ಹೇಳಲಾಗಿದೆ.

ಕವಿಗಳು ಈ ಶತಕದ ಪ್ರಾರಂಭದಲ್ಲಿ ಈ ಅಮರಗೊಂಡದ ಅಮರೇಶ್ವರರನ್ನು ಸ್ತುತಿಸಿ ನಂತರ ವೀರಶೈವ ಪ್ರಶಂಸೆ, ಕುವೀರಶೈವ ಗರ್ಹಣ ನಡೆಸಿ ನಂತರ ಅರಿಷಡ್ವರ್ಗಗಳನ್ನು ನಿಗ್ರಹಿಸುವ ಬಗೆ ಹೇಳಿದ್ದಾರೆ. ಕೊನೆಯದಾಗಿ ವೈರಾಗ್ಯವನ್ನು ಪ್ರಶಂಸಿಸಿದ್ದಾರೆ. ಅಮರೇಶ್ವರನ ಅಂಕಿತದಲ್ಲಿ ಬರೆದ ಈ ನೂರೊಂದು ಪದ್ಯಗಳು ಸುಲಲಿತವಾಗಿವೆ. ಸುಲಭವಾಗಿವೆ. ಓದಿ ಆನಂದಪಡಲು ಯಾವ ಅಭ್ಯಂತರವೂ ಇಲ್ಲ. ಅಮರೇಶ್ವರನ ಭಕ್ತರಿಗಂತೂ ನಿತ್ಯಪಠಣಕ್ಕೆ ಯೋಗ್ಯವಾಗಿದೆ.

ಬಿರುಗಾಳಿ

ಲೇಖಕರು- 'ಕುವೆಂಪು' ಪ್ರಕಾಶಕರು- ಕಾವ್ಯಾಲಯ ಮೈಸೂರು, ಪುಟಗಳು ೧೦೦, ಬೆಲೆ ೧-೪-೦.

ಪ್ರಸಿದ್ಧ ಅಂಗ್ಲ ನಾಟಕಕಾರ ಶೇಕ್ಸಪಿಯರನ ಕೊನೆಯನಾಟಕವಾದ 'ಟೆಂಪೆಸ್ಟ'ವನ್ನು ಅನುಸರಿಸಿ ಬರೆದ ನಾಟಕವಿದಾಗಿದೆ. ಮೂಲ ನಾಟಕದಂತೆ ಈ ನಾಟಕವನ್ನು ಸರಳ ರಗಳೆಯಲ್ಲಿ ಬರೆದುದಾಗಿದೆ. 'ಬಿರುಗಾಳಿ'ಯು ೧೯೩೦ ರಲ್ಲಿ ಪ್ರಥಮ ಮುದ್ರಿತವಾಗಿತ್ತು. ಈಗಿನದು ದ್ವಿತೀಯಾವೃತ್ತಿ.

ಇಂಗ್ಲಿಷ ನಾಟಕಗಳನ್ನು ಇದ್ದಕ್ಕಿದ್ದಂತೆ ಅನುವಾದಿಸಬಾರದೆಂಬ ಧೋರಣೆಯನ್ನಿಟ್ಟುಕೊಂಡಿರುವ ಶ್ರೀ ಕೆ. ವಿ. ಪುಟ್ಟಪ್ಪನವರು 'ಟೆಂಪೆಸ್ಟ' ನಾಟಕದಲ್ಲಿದ್ದಂಥ ಕತೆಯೊಂದು ಕರ್ನಾಟಕದಲ್ಲಿ ನಡೆಯಿತೆಂದು ಕಲ್ಪಿಸಿ ಈ ನಾಟಕದಲ್ಲಿ ನಿರೂಪಿಸಿದ್ದಾರೆ. ಈ ನಾಟಕ ಅನೇಕ ಕಡೆಗಳಲ್ಲಿ ಆಡಿತೋರಿಸಲ್ಪಟ್ಟಿದೆ.

ಶೇಕ್ಸಪಿಯರನ ನಾಟಕಗಳನ್ನು ಕನ್ನಡದಲ್ಲಿ ಓದಬೇಕೆನ್ನುವವರು ಶ್ರೀ ಪುಟ್ಟಪ್ಪನವರ ನಾಟಕಗಳನ್ನು ಓದಿದರೆ ಮೂಲದ ಝಳುಕನ್ನು ಕಂಡುಕೊಳ್ಳಬಹುದು. ಮೂಲ ನಾಟಕಗಳ ಸ್ವಾದಸ್ವಾರಸ್ಯವು ಇವರ ನಾಟಕಗಳಲ್ಲಿ ಇಳಿಯದೆ ಹೋಗಿದ್ದರೂ ಇವರ ನಾಟಕಗಳು ತಂತಾವೇ ರಮ್ಯವಾಗಿವೆ. ಬಿರುಗಾಳಿಯೂ ಇದಕ್ಕೊಂದು ಉದಾಹರಣೆ.

ಚಿಗುರು

ಲೇಖಿಕೆ : ದಿವಂಗತೆ ಸೌ. ಗೌರಮ್ಮ. ಪ್ರಕಾಶಕರು: ಲಲಿತ ಸಾಹಿತ್ಯ ಮಾಲೆ, ಧಾರವಾಡ. ೧೧೨ ಪುಟ, ರೂ. ೧-೪-೦

ಕನ್ನಡ ನಾಡಿನ ಕತೆಗಾರ್ತಿಯಲ್ಲಿ ಪ್ರಥಮ ಶ್ರೇಣಿಗೆ ಸೇರುವ ದಿವಂಗತೆ ಗೌರಮ್ಮನವರ ಪ್ರಾರಂಭದ ಕಥೆಗಳ ಸಂಗ್ರಹವಿದು. ೧೯೪೨ರಲ್ಲಿ ಇದು ಮೊದಲು ಪ್ರಕಟವಾಗಿ ಕೆಲ ತಿಂಗಳುಗಳಲ್ಲಿಯೇ ಪ್ರತಿಗಳು ಮುಗಿದು ಹೋದುದರಿಂದ ಇದು ಗೌರಮ್ಮನವರ ಪ್ರಥಮ ಪ್ರಯತ್ನದ ಫಲವಾದರೂ ಎಷ್ಟು ಜನಪ್ರಿಯವಾಗಿದೆಯೆಂದು ಸಿದ್ಧವಾಗುತ್ತದೆ. ದ್ವಿತೀಯಾವೃತ್ತಿಯನ್ನು ತೆಗೆದುದಕ್ಕೆ ಪ್ರಕಾಶಕರು ಧನ್ಯವಾದಾರ್ಹರು.


ಧನ್ನಗನ್ನಡಿ

ಲೇಖಕರು : ಶ್ರೀ. ನಾಡಿಗೇರ ಕೃಷ್ಣರಾಯರು. ಮಾರಾಟದ ಪೂರ್ಣಾಧಿಕಾರಿಗಳು: ಕರ್ನಾಟಕ ಸಾಹಿತ್ಯ ಮಂದಿರ ಧಾರವಾಡ. ೬೨ ಪುಟ, ರೂ. ೧-೦-೦

ಹದಿನಾಲ್ಕು ಸಣ್ಣಕತೆಗಳನ್ನೊಡಗೂಡಿದ ಈ ರನ್ನಗನ್ನಡಿಗೆ ಶ್ರೀ. ದೇವುಡು ಅವರು ಮುನ್ನುಡಿ ಬರೆದಿದ್ದಾರೆ. ಆದರೆ ಇದರಲ್ಲಿ ಸೇರಿಸಲ್ಪಟ್ಟವುಗಳಲ್ಲಿ ಅನೇಕ ಕಥೆಗಳು ನೀರಸವಾಗಿದ್ದು ಸಂಗ್ರಹ ರೂಪದಲ್ಲಿ ಪ್ರಕಟಿಸಲು ಯೋಗ್ಯತೆ ಪಡೆದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ನಲಂದಾದಲ್ಲಿ ಸುಭಾಸರು

ನಲಂದಾದಲ್ಲಿಯ ಪದಮಾನ ಪಾಶ್ವಾನ ಎಂಬ ಕೂಲಿಕಾರನು ಸ್ವಲ್ಪ ದಿನಗಳ ಹಿಂದೆ ಸುಭಾಸಚಂದ್ರ ಬೋಸರನ್ನು ಕಂಡೆನೆಂದು ಹೇಳಿದನು. ಬಖ್ತಿಯಾರಪುರಂ— ಬಿಹಾರ ಉಗಿಬಂಡಿಯ ೩ ನೇ ವರ್ಗದ ಡಬ್ಬಿಯಿಂದ ಅವರು ಇಳಿದು ಲಗುಬಗೆಯಿಂದ ಸ್ಟೇಶನದ ಹೊರಗೆ ಹೊಲಗಳಲ್ಲಿ ಹೋದರು. ನಾನು ಮತ್ತು ನನ್ನ ಕೆಲ ಜೊತೆಗಾರರು ಮಾತ್ರ ಅದನ್ನು ನೋಡಿದೆವು. ಅವರು ಮೀಸೆ ಹಚ್ಚಿಕೊಂಡಿದ್ದರು ಮತ್ತು ಖಾಕಿ ಚಣ್ಣ ಮತ್ತು ಶರ್ಟುಹಾಕಿಕೊಂಡಿದ್ದರು. ಕಾಲಲ್ಲಿ ಕಂದೀ ಬಣ್ಣದ ಕ್ಯಾನವಾಸ ಬೂಟು ಮೆಟ್ಟಿದ್ದರು. ಅವರನ್ನ ಹಿಂಬಾಲಿಸಿ ಅವರು ಕುಳಿತಲ್ಲಿಗೆ ಹೋಗಿ ಪಾಟಣಾಕ್ಕೆ ಹೋಗುವಿರೇನೆಂದು ಕೇಳಲಾಗಿ ಮುಗಳುನಗೆ ನಕ್ಕು ಹಿಂದುಗಡೆ ಪಾಟಣಾಕ್ಕೆ ಹೊರಡುವದಾಗಿಯೂ ಈಗ ಏಕಾಂತದಲ್ಲಿ ಇರಬಯಸುವದಾಗಿಯೂ ಸುಭಾಸರು ಹೇಳಿದರು.



ಜ್ಯೋತಿಷಿ:–ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೧೩ ರಿಂದ ೧೯ ರ ವರೆಗೆ

ಮೇಷ

ಸ್ವತ:ದ ಮತ್ತು ಹೆಂಡತಿಯು ಪ್ರಕೃತಿ ಸ್ವಲ್ಪ ಅಸ್ವಸ್ಥ. ಪ್ರಾಪಂಚಿಕ ಸುಖದಲ್ಲಿ ಇತರ ದೃಷ್ಟಿಯಿಂದಲೂ ಸ್ವಲ್ಪಿಲ್ಲ ಸ್ವಲ್ಪ ತೊಂದರೆ. ಪ್ರತಿಯೊಂದು ಕೆಲಸದಲ್ಲಿ ಮನಸ್ಸು ವಿನಾಕಾರಣವಾಗಿಯಾದರೂ ಸಾಶಂಕ. ಉದ್ಯೋಗದಲ್ಲಿ ಪ್ರಗತಿ ಕುಂದುತ್ತ ನಡೆಯುವದು ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಕ್ಷುಲ್ಲಕ ಮಾತುಗಳಿಗಾಗಿಯೂ ಅನೇಕರೊಡನೆ ವಿರೋಧ. ಮಿತ್ರ ಸುಖ ಅನುಕೂಲ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಆದರೆ ಅಶ್ವಿನಿಯು ಕೊನೆಯ ೨ ಮತ್ತು ಭರಣಿಯು ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೯ ಅನುಕೂಲ.

ವೃಷಭ

ಪ್ರಕೃತಿ ಬಹಳ ಉತ್ತಮು. ಹೆಂಡತಿಗೂಡ ನಿಮ್ಮದು ಮತ್ತೈಕ್ಯ ಆದರೆ ಉಳಿದವರಿಂದ ದೊಡ್ಡ ವಿರೋಧ ವುಂಟಾಗಿ ಬಹಳ ಹೊಡೆದಾಟ, ಬಡೆದಾಟವಾಗುವ ಪ್ರಸಂಗ ಮಕ್ಕಳಲ್ಲಿ ಒಬ್ಬರ ಬಹಳ ಅಪಕರ್ಷ. ಆಪ್ತರಿಂದ ಮತ್ತು ನಗರದಲ್ಲಿಯ ಬಹಳ ಜನರಿಂದ ನಿಮ್ಮ ಬಗ್ಗೆ ತುಚ್ಛತೆಯ ವರ್ತನೆ ಮತ್ತು ಉದ್ಗಾರ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ ಆದರೆ ಭಯಂಕರ ವ್ಯಾಪದಲ್ಲಿ ಬಿದ್ದು ನಿರರ್ಥಕ ವೆಚ್ಚ ಮಾಡುವ ನಾದ, ಮನೆಯಲ್ಲಿ ಯಾರಿಗೂ ಹೇಳದಲೆ ಕೆಲ ಗಂಟೆ ಇಲ್ಲವೆ ದಿವಸ ಅಜ್ಞಾತಅಥವಾ ಗುಪ್ತರಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಮಿತ್ರ ಸುಖ ಅನುಕೂಲ. ಪ್ರವಾಸ ಮತ್ತು ಭೆಟ್ಟಿ ಅನುಕೂಲ, ಆದರೆ ಪತ್ರವ್ಯವಹಾರ ತೊಡಕಿನದು. ಉಳಿದ ಲೇಖಿ ಕೆಲಸಗಳೂ ತೊಂದರೆಯವು. ತಾ. ೧೩, ೧೪, ೧೬, ೧೮ ಅನುಕೂಲ.

ಮಿಥುನ

ನಿಮ್ಮ ಪ್ರಕೃತಿ ಉತ್ತಮು. ಹೆಂಡತಿಯದೂ ಉತ್ತಮು ಆದರೆ ಉಭಯತರಲ್ಲಿ ಮೇಲಿಂದ ಮೇಲೆ ಮತಭೇದವುಂಟಾಗಿ ಉಳಿದವರು ಮೋಜು ನೋಡುತ್ತ ಕೂಡ್ರುವಂಥ ದೊಡ್ಡ ವಿವಾದ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಮಿತ್ರ ಸುಖ ಉತ್ತಮು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಆದರೆ ವೆಚ್ಚ ದೊಡ್ಡ ಪ್ರಮಾಣದಲ್ಲಿ. ಪ್ರವಾಸಾದಿ ಕೆಲಸ ಮೊದಲು ತೊಂದರೆಯುವೆಂದೆನಿಸಿದರೂ ಕೊನೆಗೆ ಮನಸ್ಸಿನಂತೆ ಆಗುತ್ತ ನಡೆಯುವವು ಆರಿದ್ರಾದ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೯ ಅನುಕೂಲ.

ಕರ್ಕ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಯದು ಕೆಡುವದು. ಆದರೆ ಉಭಯತರಲ್ಲಿ ಪ್ರೇಮವೃದ್ಧಿಯಾಗಿ ಬಹುತರ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮು. ಉದ್ಯೋಗದಲ್ಲಿ ಪ್ರಗತಿ ಬಹಳ ಜೋರಿನದು. ದೊಡ್ಡವರಲ್ಲಿ ಪ್ರತಿಷ್ಠೆ ಮತ್ತು ಪತ್ತು ಬೆಳೆಯುವ ಯೋಗ ಹಾಗು ದ್ರವ್ಯ ಲಾಭ ಬಹಳ ಉತ್ತಮು. ಆದರೆ ವೆಚ್ಚವೂ ವಿಪರೀತ. ಪ್ರತಿಯೊಂದು ಕೆಲಸದಲ್ಲಿ ಗುಪ್ತ ಶತ್ರುಗಳಿಂದ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದೇ ಜೋರು ಹೆಚ್ಚು. ಪ್ರವಾಸಾದಿ ಕೆಲಸ ಹಿತಕರ. ಪುಷ್ಯಕ್ಕೆ ಹೆಚ್ಚು ಅನುಕೂಲ. ತಾ. ೧೩, ೧೬, ೧೭ ಅನುಕೂಲ.

ಸಿಂಹ

ಪ್ರಕೃತಿ ಉತ್ತಮು. ಪ್ರಾಪಂಚಿಕ ಸುಖ ಮನಸ್ಸಿನಂತೆ. ಆದರೆ ಪ್ರಿಯ ಆಪ್ತರಲ್ಲಿ ಒಬ್ಬರ ವಿಯೋಗದ ಸಂಭವ. ಉದ್ಯೋಗದಲ್ಲಿ ಪ್ರಗತಿಗೆ ನಡುವೆ ಅಡೆತಡೆ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಸಹಾಯಕರೊಡನೆ ಬಹಳ ಸ್ಪರ್ಧೆ ಮತ್ತು ತಿಕ್ಕಾಟ. ಮಿತ್ರಸುಖ ಉತ್ತಮ ಮನಸಿಗೆ ಬರದಂತೆ ಕೆಲಸದಲ್ಲಿ ವೆಚ್ಚ ಹೆಚ್ಚಾಗುವಿಕೆ. ಪ್ರವಾಸಾದಿ ಕೆಲಸ ಹಿತಕರ. ಪೂರ್ವಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೩, ೧೪, ೧೫, ೧೯ ಅನುಕೂಲ.

ಕನ್ಯಾ

ಪ್ರಕೃತಿಗೆ ಕಿರಕಳ ಕ್ಲೇಶ. ಹೆಂಡತಿಗೂಡ ಮೇಲಿಂದ ಮೇಲೆ ತಿಕ್ಕಾಟ. ಚಕಮಕಿ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣವೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮುವೇ. ಮತ್ತು ವರಿಷ್ಠರು ಇಲ್ಲವೆ ಆಶ್ರಯದಾತರಿಂದ ಕಾಣಿಕೆ. ಪಾರಿತೋಷಕ ಸಿಕ್ಕುವ ಸಂಭವ, ಮಿತ್ರಸುಖ ಉತ್ತಮು. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಬಹಳ ದೂರಿನ ಮತ್ತು ಸುಖಕರ ಪ್ರವಾಸ. ಪತ್ರವ್ಯವಹಾರ ಮತ್ತು ಲೇಖಿ ಕೆಲಸಕ್ಕಿಂತ ಭೆಟ್ಟಿ ಹೆಚ್ಚು ಅನುಕೂಲ. ಹಸ್ತಾಕ್ಕೆ ಹೆಚ್ಚು ಅನುಕೂಲ. ತಾ. ೧೩, ೧೪, ೧೫, ೧೬ ಅನುಕೂಲ.

ತುಲಾ

ಪ್ರಕೃತಿ ಕಿರಕಳ ಕಾಯಿಲೆಯಿರದು ಆದರೆ ಯಾವಾಗಲೂ ನೆರಳುವದು ಸ್ತ್ರೀಸುಖ ಅನುಕೂಲ. ಆದರೆ ಪರಸ್ತ್ರೀ ಅಭಿಲಾಷೆಯು ವೃತ್ತಿಚಾಂಚಲ್ಯ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಲಹಯುಕ್ತ. ಉದ್ಯೋಗದಲ್ಲಿ ಪ್ರಗತಿ ಉತ್ತಮು. ಲಾಭ ಅನುಕೂಲ. ಆದರೆ ಪ್ರತಿಷ್ಠೆ ಕಡಿಮೆ ಕಡಿಮೆಯಾಗುತ್ತ ಹೋಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಅವಚಿತ ಲಾಭದ ಸಂಭವ ಹೆಚ್ಚು. ಮಿತ್ರಸುಖ ಉತ್ತಮು. ಕೆಲವೊಂದು ಶುಭಕಾರ್ಯಕ್ಕೆ ಹಾಜರ ಇರಬೇಕಾದ ಆವಶ್ಯಕತೆಯಿದ್ದರೂ ಗೈರಹಾಜರ ಉಳಿಯಬೇಕಾದ ಅಪರಿಹಾರ್ಯ ಪ್ರಸಂಗ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಸ್ವಾತಿಗೆ ತೊಂದರೆ ಕಡಿಮೆ. ತಾ. ೧೪, ೧೫, ೧೯ ಅನುಕೂಲ.

ವೃಶ್ಚಿಕ

ಪ್ರಕೃತಿಯಲ್ಲಿ ಉಷ್ಣವಾತದಿಂದ ಬಹಳ ತೊಂದರೆ. ಸ್ತ್ರೀಸುಖ ಉತ್ತಮು ಉಳಿದ ಪ್ರಾಪಂಚಿಕ ಸುಖವೂ ಅನುಕೂಲ. ಆದರೆ ಆಪ್ತರಿಂದ ನಿರರ್ಥಕ ನಿಂದೆ ಮತ್ತು ದೋಷ ಹೆಚ್ಚುವ ಪ್ರಯತ್ನ. ಆದರೆ ಉದ್ಯೋಗದಲ್ಲಿ ಉತ್ತಮ ಪ್ರಗತಿ. ಅತರ್ಕ್ಯವೆನಿಸುವಂಥ ಪ್ರತಿಷ್ಠೆ. ಆದರೆ ಲಾಭ ಸಾಮಾನ್ಯವೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ತಲೆಯಲ್ಲಿ ಕೆಟ್ಟ ವಿಚಾರ ಹೆಚ್ಚು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅನುರಾಧೆಗೆ ಹೆಚ್ಚು ತೊಂದರೆ. ತಾ. ೧೩, ೧೬, ೧೮, ೧೯ ಅನುಕೂಲ.

ಧನು

ಪ್ರಕೃತಿ ಉತ್ತಮು. ಪ್ರಾಪಂಚಿಕ ಸುಖ ಅನುಕೂಲ. ಆದರೆ ಹೆಂಡತಿಗೂಡ ಸ್ವಲ್ಪ ವಿರಸ, ಆಪ್ತರು ಒಳ್ಳೆ ಕೆಲಸ ಮಾಡುವರು ಮತ್ತು ಪ್ರಶಂಸಿಸುವರು. ಉದ್ಯೋಗದಲ್ಲಿ ಪ್ರಗತಿ ಉತ್ತಮು. ಪ್ರತಿಷ್ಠೆ ಮಧ್ಯಮು. ಆದರೆ ಲಾಭದಲ್ಲಿ ಆಯತ್ತದಂತೆ ದೊಡ್ಡ ಗೊಂದಲ ಆಗುವದರಿಂದ ಮನಸ್ಸಿನಲ್ಲಿ ಹುಚ್ಚು ಹಿಡಿಯುವಂತಾಗುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಹಾಯಕರ್ತರೇ ತಿರುಗಿಬೀಳುವ ಅಂಜಿಕೆ. ಆದರೆ ಯಶಸ್ಸಿನ ಅನುಕೂಲತೆ ಬಹಳವುಳಿಯುವ ದೈವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪೂರ್ವಾಷಾಢಕ್ಕೆ ಹೆಚ್ಚು ತೊಂದರೆ. ತಾ ೧೩, ೧೪, ೧೫ ಅನುಕೂಲ.

ಮಕರ

ಕ್ಷಣದಲ್ಲಿ ಮೈಮೇಲೆ ಸ್ಮೃತಿ ಇದ್ದರೆ ಮರುಕ್ಷಣಕ್ಕೆ ಹುಷಾರ ಹುಟ್ಟುವಂಥ ಚಮತ್ಕಾರಿಕ ಪ್ರಕೃತಿ ಮಾನ. ಹೆಂಡತಿಯಿಂದ ಅಜಾಗರೂಕತೆಯ ವರ್ತನವಾಗುವದರಿಂದ ಮನಸ್ಸು ಬಹಳ ವಿಷಾದಗೊಳ್ಳುವದು. ಉಳಿದ ಎಲ್ಲ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ವಿಪರೀತ. ಮಕ್ಕಳ ಅಭಿನವ ಉತ್ಕರ್ಷವಾದ ಬಗ್ಗೆ ಸುಳ್ಳು ಸುಳ್ಳೇ ಸುದ್ದಿ ಹರಡುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಕಷ್ಟದಿಂದಲೇ ಸರಿಪಡಿಸಿಕೊಳ್ಳಬೇಕು. ಆದರೆ ಆ ಮಾನದಿಂದ ಲಾಭ ಬಹಳ ಉತ್ತಮು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರಸುಖ ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಶ್ರವಣಾಕ್ಕೆ ತೊಂದರೆ ಕಡಿಮೆ. ತಾ. ೧೪, ೧೫, ೧೬ ಅನುಕೂಲ.

ಕುಂಭ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮು. ಮನೆಯಲ್ಲಿ ಆಪ್ತರು ಇಲ್ಲವೆ ಮಿತ್ರರು ಲಗ್ನ ಮುಂಜಿವೆಗಳಂಥ ಮಂಗಳಕಾರ್ಯವಾಗುವ ಸಂಭವ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ, ತುಂಬ ಲಾಭ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಆದರೆ ಶತ್ರುಗಳ ಜೋರು ಬೆಳೆಯುತ್ತ ನಡೆಯುವದು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ ತಾ. ೧೬, ೧೭, ೧೮, ೧೯ ಅನುಕೂಲ.

ಮೀನ

ಪ್ರಕೃತಿ ಉತ್ತಮು. ಹೆಂಡತಿಗೂಡ ಜನರ ಸಮಕ್ಷದಲ್ಲಿಯೇ ಪ್ರೇಮದ ಮಾತುಗಳನ್ನಾಡುವಿಕೆ. ಆದರೆ ಪರಸ್ಪರರಲ್ಲಿ ಆದರಭಾವ ಕಡಿಮೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮು. ಆದರೆ ಕಿಂಚಿತ್ ವಿಲಂಬದಿಂದ ಮತ್ತು ಅದೂ ಅರ್ಧಮರ್ಧ ಲಾಭವಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸಾದಿ ಕೆಲಸ ಬಹಳ ಹಿತಕರ. ಉತ್ತರಾಭಾದ್ರಪದಕ್ಕೆ ತೊಂದರೆ ಕಡಿಮೆ. ತಾ. ೧೩, ೧೬, ೧೭ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋರೆಯವರಿಂದ ಮುದ್ರಿತ ಪ್ರಕಟವಾಯಿತು.